ಲಂಕೇಶ್
ಜುಲೈ 22, 2009 ರೂ. 12/-

ಹೊಳೆಗೆ ಹೊಸನೀರು
ಅರುಣ್ ಜೋಳದ ಕೂಡ್ಲಿಗಿ






ರಂಗಿನಾಟ

ದುಡ್ಡಿನವರ ತಾಕತ್ತು



ಬಲ್ಲೆಯಾ UB ಸಿಟಿಯಾ

ಮೈಸೂರಿಗೆ ಬೆಂಕಿ ಹಚ್ಚಿದ ಮುತಾಲಿಕ್



ಭೂಗಳ್ಳ ಲಿಂಬಾವಳಿ



ಗಿಮಿಕ್ ಸೋಮಣ್ಣನ ಕಪಾಳಮೋಕ್ಷ

ಕೇಂದ್ರ ಬಜೆಟ್-2009-10

ಕಿಬ್ಬದಿಯ ಕೀಲುಗಳು ಜಾಗ್ರತೆ!

ಪ್ರಣಬ್ ದಾದಾ 24 ವರ್ಷಗಳ ನಂತರ ಬಜೆಟ್ ಮಂಡಿಸಿದ್ದಾರೆ. ಗ್ರಾಮೀಣ ಉದ್ಯೋಗ, ಆರೋಗ್ಯ ಭದ್ರತೆ ಇನ್ನಿತ್ಯಾದಿ ಕ್ಷೇತ್ರಗಳಿಗೆ ಅನುದಾನ ಹೆಚ್ಚಿರುವುದನ್ನು ನೋಡಿ ಇದೊಂದು 'ಆಮ್ ಆದ್ಮಿ' ಬಜೆಟ್ ಎಂದು ಎಲ್ಲರೂ ಹೊಗಳುತ್ತಿದ್ದಾರೆ. ಬಜೆಟ್ ದಿನ ಸ್ಟಾಕ್ ಮಾರ್ಕೆಟ್ ಸೂಚ್ಯಂಕ 800ಕ್ಕೂ ಹೆಚ್ಚು ಅಂಕಗಳಷ್ಟು ಕುಸಿದಿದ್ದನ್ನು ಕಂಡು ಇದು ನಿಜಕ್ಕೂ ಕಾರ್ಪೊರೇಟ್ ವಲಯ ವಿರೋಧಿ ಬಜೆಟ್ ಇರಬಹುದೇ ಎಂದು ಎಲ್ಲರ ಹುಬ್ಬು ಮೇಲೇರಿದೆ! ಮಾಧ್ಯಮಗಳು ಕೂಡಾ ಇದನ್ನೊಂದು ಆರ್ಥಿಕ ಸುಧಾರಣೆ ವಿರೋಧಿ ಅರ್ಥಾತ್ ಕಾರ್ಪೊರೇಟ್ ವಿರೋಧಿ ಬಜೆಟ್ ಎನ್ನುವ ಅರ್ಥಬರುವಂತೆ ವರದಿ ಮಾಡಿವೆ.

ಆದರೆ ಮರುದಿನ ಪ್ರಣಬ್ ದಾದಾ ಈ ದೇಶದ ಪ್ರಮುಖ ಕಾರ್ಪೊರೇಟ್ ಉದ್ಯಮಪತಿಗಳ ಸಂಘಟನೆಯಾದ ಸಿಐಐ-ಫಿಕ್ಕಿ ಜಂಟಿ ವೇದಿಕೆಯಲ್ಲಿ ಬಜೆಟ್ ಭಾಷಣದಲ್ಲಿ ಹೇಳದ ಹಲವು ಸಂಗತಿಗಳನ್ನು ಪ್ರಕಟಿಸಿದ ಕೂಡಲೇ ಸೆನ್ಸೆಕ್ಸ್ ಸೂಚ್ಯಂಕ 160 ಅಂಕಗಳಷ್ಟು ಏರಿಬಿಟ್ಟಿತು. ಹಾಗಾದರೆ ಪ್ರಣಬ್ ಜನ ವೇದಿಕೆಯಾದ ಸಂಸತ್ತಿನಲ್ಲಿ ಹೇಳಿದ್ದು ಸತ್ಯವಾ? ಅಥವಾ ಬಜಾಜ್, ಅಂಬಾನಿಗಳ ಕಾರ್ಪೊರೇಟ್ ವೇದಿಕೆಯಲ್ಲಿ ಹೇಳಿದ್ದು ಸತ್ಯವಾ?

ಆದ್ದರಿಂದ ಇದರ ಸತ್ಯಾಸತ್ಯತೆಗಳ ಬಗ್ಗೆ ನಿಮ್ಮ 'ಕಂಡಹಾಗೆ' ಅಂಕಣದಲ್ಲಿ ನೀವೇ ಬರೆದುಬಿಡಿ ಎಂದು ನಮ್ಮ ಸಂಪಾದಕಿ ಗೌರಿ ಲಂಕೇಶರಿಗೆ ಸಜೆಸ್ಟ್ ಮಾಡಿದೆ. ಏಕೆಂದರೆ ಈವರೆಗೆ ನಮಗಿರುವ ವರದಿ ಪ್ರಕಾರ ನಮ್ಮ ಪತ್ರಿಕೆಯಲ್ಲಿ ಅತಿ ಹೆಚ್ಚು ಜನ ಓದುವ ಅಂಕಣ ಗೌರಿಯವರ 'ಕಂಡಹಾಗೆ'; ಅತ್ಯಂತ ಕಡಿಮೆ ಓದುಗರನ್ನು ಪಡೆದಿರುವ ಅಂಕಣ ನನ್ನ 'ಚಾರ್ವಾಕ'! ಆದರೆ ನಮ್ಮ ಸಂಪಾದಕರು "ಥೂ..ಥೂ ಅವೆಲ್ಲಾ ಬೋರು.. ನೀವೇ ಬರ್‌ಕೊಳಿ" ಅಂದುಬಿಟ್ಟರು. ಬೋರು ಹೊಡೆಯುವ ವಿಚಾರಗಳೆಲ್ಲಾ ಬೋರು ಹೊಡೆಸುವ ಅಂಕಣದಲ್ಲೇ ಇರಲಿ ಎನ್ನುವಂತೆ!

ಬಜೆಟ್ಟಿನ ಬಗ್ಗೆ ಮತ್ತು ಆರ್ಥಿಕ ವಿಷಯಗಳ ಬಗ್ಗೆ ಈ ನಾಡಿನ ಬಹುಪಾಲು ಪ್ರಗತಿಪರ ಮತ್ತು ಬುದ್ಧಿಜೀವಿಗಳ ಅಭಿಪ್ರಾಯವನ್ನೇ ನಮ್ಮ ಸಂಪಾದಕರೂ ವ್ಯಕ್ತಪಡಿಸುತ್ತಿದ್ದರು. ಜನತೆಯ ಬದುಕು ಮತ್ತು ಭವಿಷ್ಯಗಳನ್ನೇ ಪ್ರಭಾವಿಸುವಂತ ವಿಷಯಗಳನ್ನು ಜನರಿಗರ್ಥವಾಗದ ಭಾಷೆ ಮತ್ತು ಪರಿಭಾಷೆಗಳಲ್ಲಿ ಪಂಡಿತರು ಮತ್ತು ಸರ್ಕಾರಗಳು ಮಂಡಿಸಿ ಬೆದರಿಸುತ್ತಿರುವುದೇ ಪ್ರಾಯಶಃ ಈ ಬಗೆಯ ತಿರಸ್ಕಾರಕ್ಕೆ ಕಾರಣವಿರಬೇಕು. ಅದೇನೇ ಇದ್ದರೂ ಈ ಬಗೆಯ ಲೇಖನಗಳನ್ನು "ಸುಲಿದ ಬಾಳೆಹಣ್ಣಿನ ತೆರದಿ" ಬರೆಯುವವರಿಗೆ ಕಾಯುವುದಕ್ಕಿಂತ ಸ್ವಲ್ಪ ಹೆಚ್ಚಿನ ಶ್ರಮವಹಿಸಿ ಲಭ್ಯವಿರುವ ಮೂಲಗಳಿಂದಲೇ ಈ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವುದನ್ನು ಬಿಟ್ಟರೆ ಸದ್ಯಕ್ಕೆ ಬೇರೆ ಮಾರ್ಗವಿಲ್ಲ, ಈ ಅಂಕಣದ ಓದುಗರಿಗೂ, ನಮ್ಮ ಸಂಪಾದಕರಿಗೂ ಸಹ!

ಪ್ರಣಬ್ ದಾದಾ ಮಂಡಿಸಿದ ಬಜೆಟ್ಟಿನಲ್ಲಿ ಯಾವ ಸರಕಿಗೆ ಎಷ್ಟು ತೆರಿಗೆ ಕಡಿಮೆ ಮಾಡಿದ್ದಾರೆ ಅಥವಾ ಜಾಸ್ತಿ ಮಾಡಿದ್ದಾರೆ ಎನ್ನುವುದು ಅಷ್ಟು ಮುಖ್ಯವಲ್ಲ, ಬಜೆಟ್ಟೆಂದರೆ ಅಷ್ಟೆ ಅಲ್ಲ, ಬಜೆಟ್ಟು ಮೂಲಭೂತವಾಗಿ ಹೇಳುವುದು ಸರ್ಕಾರ ಯಾವ ಮೂಲಗಳಿಂದ ಎಷ್ಟೆಷ್ಟು ಹಣವನ್ನು ಸಂಗ್ರಹಿಸಿ ಯಾವ್ಯಾವ ಬಾಬತ್ತಿಗೆ ಖರ್ಚು ಮಾಡುತ್ತದೆ ಎಂದು ಹೇಳುವ ದಾಖಲೆ. ಹೀಗಾಗಿ ಪ್ರತಿ ಬಜೆಟ್ಟಿನ ಹಿಂದೆ ಒಂದು ಸರ್ಕಾರದ ಆರ್ಥಿಕ ಸಿದ್ಧಾಂತ ಕೆಲಸ ಮಾಡುತ್ತಿರುತ್ತದೆ. ಅದು ಯಾವ ವಸ್ತುಗಳ ಮೇಲೆ ತೆರಿಗೆ ವಿಧಿಸಿ ಯಾವುದನ್ನು ಬಿಡುತ್ತಿದ್ದಾರೆ ಎಂಬುದರಲ್ಲಿ ಪ್ರತಿಫಲಿತವಾದರೂ ಅದರ ಸರಿಯಾದ ಚಿತ್ರಣ ಸಿಗುವುದು ಬಜೆಟಿನ ಸ್ಥೂಲ ಮತ್ತು ಒಟ್ಟಾರೆ ಧೋರಣೆಯಲ್ಲಿ.

ಈ ಬಾರಿ ಬಜೆಟ್ ಮಂಡನೆಯಾಗುವ ವೇಳೆಗೆ ಇಡೀ ಜಗತ್ತು ದೊಡ್ಡ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಉದ್ಯಮಿಗಳು ಲಾಭದ ಕೊರತೆಯನ್ನು ಎದುರಿಸುತ್ತಿದ್ದರೆ, ಜನತೆ ಬದುಕಲು ಬೇಕಾದ ಉದ್ಯೋಗ, ಆಹಾರಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ಉದ್ಯಮಿಗಳ ಬಳಿ ಲಾಭ ಶೇಖರವಾದರೆ ಅದು ಕ್ರಮೇಣ ಜಿನುಗುತ್ತಾ ಕೆಳಗೆ ಹರಿದು ದೇಶದ ಎಲ್ಲಾ ಜನರಿಗೂ ದೊರಕುತ್ತದೆ, ಆದ್ದರಿಂದ ಮಾರುಕಟ್ಟೆಗೆ ಅರ್ಥಾತ್ ಉದ್ಯಮಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಸರ್ಕಾರ ಹೊರಗಿರಬೇಕು ಎಂಬ ಸಿದ್ಧಾಂತವನ್ನು ಈವರೆಗೆ ಜಗತ್ತು ಮತ್ತು ಭಾರತ ಅನುಸರಿಸುತ್ತಿತ್ತು. ಆದರೆ ಈ ಆರ್ಥಿಕ ಹಿಂಜರಿತ ಅವೆಲ್ಲವನ್ನೂ ಸುಳ್ಳಾಗಿಸಿದೆ. ಪ್ರಪಂಚದೆಲ್ಲೆಡೆ ಉದ್ಯಮಿಗಳೇ ಪ್ರಭುತ್ವವು ತಮ್ಮ ಪರವಾಗಿ ಮಧ್ಯಪ್ರವೇಶ ಮಾಡಿ ತಮ್ಮನ್ನು ಬದುಕಿಸಬೇಕೆಂದು ಕೇಳುತ್ತಿದ್ದಾರೆ. ಹೀಗಾಗಿ ಈಗ ಪ್ರಭುತ್ವ ಮಧ್ಯಪ್ರವೇಶ ಮಾಡುತ್ತಿದೆ. ನಿಜ. ಆದರೆ ಜನರ ಪರವಾಗಿಯಲ್ಲ, ಉದ್ಯಮಿಗಳ ಪರವಾಗಿ.

ಅಮೆರಿಕವನ್ನೂ ಒಳಗೊಂಡಂತೆ ಪ್ರಪಂಚದಾದ್ಯಂತ ನಡೆಯುತ್ತಿರುವುದು ಇದೇ. ಈ ಹಿನ್ನೆಲೆಯಲ್ಲೇ ಪ್ರಣಬ್ ದಾದಾ ಸಹ ಮಧ್ಯಪ್ರವೇಶ ಮಾಡಿದ್ದಾರೆ. ಈಗ ವಿಶ್ಲೇಷಿಸಬೇಕಿರುವುದು ಅವರು ಜನರ ಪರವಾಗಿ ಮಧ್ಯಪ್ರವೇಶ ಮಾಡಿದ್ದಾರೋ ಅಥವಾ ಉದ್ಯಮಿಗಳ ಪರವಾಗಿ ಪ್ರವೇಶ ಮಾಡಿದ್ದಾರೋ ಎಂಬುದನ್ನು!

ಈ ಬಾರಿ ಸರ್ಕಾರ ಮಾಡುತ್ತಿರುವ ವಾರ್ಷಿಕ ವೆಚ್ಚ ಭಾರತದ ಇತಿಹಾಸದಲ್ಲೇ ಅತಿ ಹೆಚ್ಚು, 10.21 ಲಕ್ಷ ಕೋಟಿ ರೂ! ಇದರಲ್ಲಿ ಗ್ರಾಮೀಣ ಸೇವೆಗಳಿಗೆ ಅಂದರೆ ಗ್ರಾಮೀಣ ಉದ್ಯೋಗ ಖಾತರಿ, ಗ್ರಾಮೀಣ ಆರೋಗ್ಯ, ಆಹಾರ ಖಾತರಿ ಇನ್ನಿತರ ಬಾಬತ್ತುಗಳಿಗೆ ಹೋದ ವರ್ಷಕ್ಕಿಂತ ಹೆಚ್ಚಿನ ಅನುದಾನವನ್ನು ನೀಡಲಾಗಿದೆ. ಉದಾಹರಣೆಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿ ಕುಟುಂಬಗಳ ಸಂಖ್ಯೆಯನ್ನು 3.2 ಕೋಟಿಯಿಂದ 4.4 ಕೋಟಿಗೇರಿಸಲಾಗಿದೆ. ಅಲ್ಲದೆ ಈವರೆಗೆ ಅವರಿಗೆ ಕೊಡುತ್ತಿದ್ದ ದಿನಕ್ಕೆ 75 ರೂ.ಗಳ ಕೂಲಿಯನ್ನು 100 ರೂ.ಗೇರಿಸಲಾಗಿದೆ. ಈ ಬಾಬತ್ತಿಗೆ ಹೋದ ವರ್ಷಕ್ಕಿಂತ ಶೇ.144ರಷ್ಟು ಅನುದಾನವನ್ನು ಏರಿಸಿ 39,000 ಕೋಟಿ ರೂ. ನೀಡಲಾಗಿದೆ. ಆದರೆ ವಾಸ್ತವವೇನೆಂದರೆ 4.4 ಕೋಟಿ ಫಲಾನುಭವಿಗಳಿಗೆ ದಿನಕ್ಕೆ 100 ರೂನಂತೆ 100 ದಿನಗಳ ಕಾಲ ಖಾತರಿ ಉದ್ಯೋಗ ನೀಡಿದರೆ ಬೇಕಾಗುವುದು 44,000 ಕೋಟಿ ರೂ.ಗಳು. 39,000 ಕೋಟಿಗಳಲ್ಲ! ಆದ್ದರಿಂದ ಈಗ ನಿಗದಿ ಆಗಿರುವ ಹಣದಲ್ಲಿ 4.4 ಕೋಟಿ ಕುಟುಂಬಗಳಿಗೆ ಉದ್ಯೋಗ ಖಾತರಿಗೊಳಿಸಲು ಆಗುವುದೇ ಇಲ್ಲ!

ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 3 ರೂ. ದರದಲ್ಲಿ ತಿಂಗಳಿಗೆ 25 ಕೆಜಿ ಅಕ್ಕಿ ಕೊಡುವ ಪ್ರಸ್ತಾಪವನ್ನು ಮಾಡಲಾಗಿದೆ. ಅದರ ವಿವರಗಳನ್ನು ಮತ್ತು ಅದಕ್ಕೆ ಬೇಕಿರುವ ಹಣದ ಮೊತ್ತವನ್ನು




ಚಾರ್ವಾಕ ▸ ಶಿವಸುಂದರ್

ಈ ಬಜೆಟ್ ಭಾಷಣದಲ್ಲಿ ಖಚಿತಪಡಿಸಿಲ್ಲವಾದರೂ ಅದರ ಒಟ್ಟಾರೆ ಮೊತ್ತ ಕೆಲವು ಸಾವಿರ ಕೋಟಿಗಳನ್ನು ದಾಟುವುದಿಲ್ಲ, ಇದಲ್ಲದೆ ಗ್ರಾಮೀಣ ಮತ್ತು ನಗರ ರಸ್ತೆ ಅಭಿವೃದ್ಧಿ ಇನ್ನಿತ್ಯಾದಿ ಬಾಬತ್ತಿಗೆ ಮೊದಲಿಗಿಂತ ಅತಿ ಹೆಚ್ಚು ಹಣವನ್ನು ನಿಗದಿಪಡಿಸಲಾಗಿದೆ.

ಅಂದರೆ, ಒಟ್ಟಿನಲ್ಲಿ ನೋಡಿದರೆ ಜನತೆಯ ಕೊಳ್ಳುವ ಶಕ್ತಿಯನ್ನು ಜಾಸ್ತಿ ಮಾಡುವ ಮತ್ತು ಮೂಲಭೂತ ಸೌಕರ್ಯಗಳಲ್ಲಿ ಹೂಡಿಕೆ ಮಾಡುವ ಮೂಲಕ ಬೇಡಿಕೆಯನ್ನು ಸೃಷ್ಟಿ ಮಾಡಿ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಸಿದ್ಧಾಂತವನ್ನು ಇದರ ಹಿಂದೆ ಕಾಣಬಹುದಾಗಿದೆ. ಆದರೆ ಇಂಥ ಯೋಜನೆ ಜನಪರವಾಗಿ ಕೆಲಸ ಮಾಡಬೇಕೆಂದರೆ ಅತ್ಯಂತ ಮುಖ್ಯವಾಗಿ ಉಳ್ಳವರಿಗೆ ಹೆಚ್ಚು ತೆರಿಗೆ ವಿಧಿಸುವ ಮೂಲಕ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು. ಪ್ರಾರಂಭದಲ್ಲಿ ಸಾಲ ಮಾಡಿದರೂ ಅದನ್ನು ತೀರಿಸುವ ಹೊಣೆ ಪರೋಕ್ಷವಾಗಿ ಜನರ ಮೇಲೆ ವರ್ಗಾಯಿಸಿದರೆ ಅದು ಕೊಳ್ಳುವ ಶಕ್ತಿಯನ್ನೇನೂ ಹೆಚ್ಚಿಸುವುದಿಲ್ಲ, ಆದ್ದರಿಂದ ಬಜೆಟ್‌ನಲ್ಲಿ ಉದ್ಯೋಗ ಖಾತರಿಯಂಥ ಯೋಜನೆಗಳಿಗೆ ಎಲ್ಲಿಂದ ಹಣವನ್ನು ಕ್ರೋಢೀಕರಿಸಲಾಗುತ್ತಿದೆ ಎಂದೂ ಮತ್ತು ಅದು ಮತ್ತೆ ಜನರ ಮೇಲೆ ಹೊರೆಯಾಗಿ ವರ್ಗಾಯಿಸಲಾಗುತ್ತದೆಯೋ ಎಂದೂ ವಿಶ್ಲೇಷಿಸುವುದು ಅತ್ಯಗತ್ಯ.

ಸಾಮಾನ್ಯವಾಗಿ ಯಾವುದೇ ಸರ್ಕಾರ ತನ್ನ ಸಂಪನ್ಮೂಲವನ್ನು ತೆರಿಗೆಗಳು, ಸರ್ಕಾರ ಮಾಡಿರುವ ಹೂಡಿಕೆಗಳಿಂದ, ಉದ್ಯಮಿಗಳಿಂದ ಬರುವ ಲಾಭಗಳು, ಬಾಡಿಗೆ ಮತ್ತು ಜನರಿಂದ ಹಾಗೂ ಹೊರದೇಶಗಳಿಂದ ಎತ್ತುವ ಸಾಲಗಳಿಂದ ಕ್ರೋಢೀಕರಿಸುತ್ತದೆ. ಈ ಬಜೆಟ್ಟಿನಲ್ಲಿ 4.2ಲಕ್ಷ ಕೋಟಿಯಷ್ಟು ಹಣವನ್ನು ಅಂದರೆ ಒಟ್ಟಾರೆ ವೆಚ್ಚದ ಶೇ.40 ಭಾಗವನ್ನು ಸಾಲ ಮಾಡಿ ಎತ್ತಲಾಗುವುದೆಂದು ನಿರೀಕ್ಷಿಸಲಾಗಿದೆ. ಬಜೆಟ್ ದಿನ ಶೇರ್ ಮಾರ್ಕೆಟ್ ಕುಸಿದು ಬೀಳಲು ಇದೇ ಕಾರಣ. ಏಕೆಂದರೆ ಸರ್ಕಾರದ ಸಾಲದ ಮೂಲ ಬ್ಯಾಂಕು ಮತ್ತು ವಿಮೆ ಸಂಸ್ಥೆಗಳೇ. ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆಗಳು ನಮ್ಮಿಂದ ಎತ್ತುವ ಡಿಪಾಜಿಟ್ ಮತ್ತು ಪ್ರೀಮಿಯಂನ ಒಟ್ಟು ಮೊತ್ತಗಳನ್ನೇ ಸರ್ಕಾರ ಎರವಲು ಪಡೆಯುತ್ತದೆ. ಖಾಸಗೀ ಉದ್ಯಮಿಗಳು ಕಣ್ಣಿಟ್ಟಿದ್ದು ಇದೇ ಸಾಲದ ಮೂಲವನ್ನೇ! ಈ ಬಜೆಟ್ಟಿನಲ್ಲಿ ಕೇಂದ್ರ ಸರ್ಕಾರ ಮಾತ್ರವಲ್ಲ, ರಾಜ್ಯ ಸರ್ಕಾರಗಳು ಸಹ ತಲಾ 21,000 ಕೋಟಿ ರೂ. ಸಾಲವನ್ನು ಬ್ಯಾಂಕುಗಳಿಂದ ಪಡೆಯಬಹುದು ಎಂದು ಕೇಂದ್ರ ಅನುಮತಿಕೊಟ್ಟಿದೆ. ಸರ್ಕಾರಗಳೆ ಇಷ್ಟೊಂದು ಸಾಲ ಪಡೆದ ಮೇಲೆ ತಮ್ಮ ಬಂಡವಾಳ ಹೂಡಿಕೆಗೆ ಸಾಲ ದೊರೆಯುವುದೇ ಇಲ್ಲವೆಂಬ ದಿಗಿಲಿನಿಂದಲೇ ಶೇರ್ ಮಾರ್ಕೆಟ್ ಕುಸಿದು ಬಿತ್ತು.



ಕಾರ್ಪೊರೇಟ್ ಉದ್ಯಮಿಗಳ ಪ್ರಕಾರ ಸರ್ಕಾರ ಈ ಸಾಲದ ಮೂಲದ ಮೇಲೆ ಕಣ್ಣಿಡಲೇಬಾರದಾಗಿತ್ತು, ಅವೆಲ್ಲಾ ಅವರಿಗೇ ಮೀಸಲಾಗಿರಬೇಕಿತ್ತು, ಹಾಗಿದ್ದಮೇಲೆ ಸರ್ಕಾರ ಈ ಎಲ್ಲಾ ವೆಚ್ಚಗಳಿಗೆ ಬೇಕಿರುವ ಹಣವನ್ನು ಎಲ್ಲಿಂದ ಸಂಗ್ರಹಿಸಬೇಕಿತ್ತು? ಅವರ ಪ್ರಕಾರ ಉದ್ಯಮಗಳಲ್ಲಿ ಸರ್ಕಾರ ಹೂಡಿರುವ ಬಂಡವಾಳವನ್ನು ಹಿಂತೆಗೆಯುವ ಮೂಲಕ - ಅಂದರೆ ಖಾಸಗೀಕರಿಸುವ ಮೂಲಕ - ಹಾಗೂ ಜನರ ಮೇಲೆ ಇನ್ನೂ ಹೆಚ್ಚಿನ ತೆರಿಗೆ ವಿಧಿಸುವ ಮೂಲಕ ಸಂಗ್ರಹಿಸಬೇಕೇ ಹೊರತು ತಮ್ಮ ಮೇಲೆ ತೆರಿಗೆ ಹೆಚ್ಚಿಸುವುದನ್ನಾಗಲೀ, ಬ್ಯಾಂಕುಗಳ ಸಾಲಕ್ಕಾಗಲೀ ಕೈ ಹಾಕಬಾರದು. ಅದನ್ನು ಒಪ್ಪಿಕೊಂಡೇ ಸರ್ಕಾರ 2002ರಲ್ಲಿ ಸಂಸತ್ತಿನಲ್ಲಿ **Fiscal Responsibility and Budget Management Act (FRBM)** ಎಲ್ಲಾ ಪಕ್ಷಗಳ ಸಮ್ಮತಿಯೊಂದಿಗೆ ಜಾರಿಗೆ ತಂದಿದೆ. ಅದನ್ನೇ ವಿತ್ತೀಯ ಶಿಸ್ತು-**Fiscal Responsibility** ಎಂದೂ ಕರೆಯ ಲಾಗುತ್ತದೆ. ಹಳೆಯ ಕಾಲದಲ್ಲಿ ಯಾವುದೇ ವರ್ಣದ ರಾಜರು ಅಧಿಕಾರಕ್ಕೆ ಬಂದರೂ ವರ್ಣಾಶ್ರಮವನ್ನು ಕಾಪಾಡುವುದು - ಅಂದರೆ ಬ್ರಾಹ್ಮಣ್ಯದ ಹಿರಿಮೆಯನ್ನು ಕಾಪಾಡುವುದು - ಎಷ್ಟು ಮುಖ್ಯವಾಗಿತ್ತೋ ಹಾಗೆಯೇ ಈ ಕಾಲದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಈ ವಿತ್ತೀಯ ಶಿಸ್ತನ್ನು ಅಂದರೆ ಕಾರ್ಪೊರೇಟ್ ಉದ್ಯಮಿಗಳ ಹಿತಾಸಕ್ತಿಯನ್ನು ಕಾಪಾಡುವುದು ಅಷ್ಟೇ ಮುಖ್ಯವಾಗಿದೆ.

ಹಾಗಿದ್ದ ಮೇಲೆ ಸರ್ಕಾರಿ ಉದ್ದಿಮೆಗಳಿಂದ ಸರ್ಕಾರ ಹಣ ಹಿಂತೆಗೆದುಕೊಳ್ಳುವ ಪ್ರಸ್ತಾಪವನ್ನು ಮಾಡದೆ, ಜನರ ಮೇಲೆ ತೆರಿಗೆ ಜಾಸ್ತಿ ಮಾಡದೆ, ಸಾಲ ಮಾಡುವ ಮೂಲಕ ತನ್ನ ವೆಚ್ಚವನ್ನು ಸರಿದೂಗಿಸಿಕೊಳ್ಳುವ ನೀತಿಯನ್ನು ಅನುಸರಿಸಲು ಹೇಗೆ ಸಾಧ್ಯವಾಯಿತು? ಅಥವಾ ಹಿಡನ್ ಅಜೆಂಡಾ ಬೇರೆ ಏನಾದರೂ ಇದೆಯೇ?

ಖಂಡಿತಾ ಇದೆ. ಅದಕ್ಕೆ ಹೇಳುವುದು ಮಾತಿನ ನಿಜವಾದ ಅರ್ಥವಿರುವುದು ಆಡದ ಮಾತಿನಲ್ಲಿಯೇ ವಿನಃ ಆಡಿದ ಮಾತಿನಲ್ಲಲ್ಲ ಎಂದು! ವಾಸ್ತವವಾಗಿ ಇಷ್ಟು ದಿನ ಇದೇ ಸರ್ಕಾರಗಳೇ ವಿತ್ತೀಯ ಶಿಸ್ತಿನ ನೆಪಹೇಳಿ ಸಾಲದ ಸುದ್ದಿಗೂ ಹೋಗುತ್ತಿರಲಿಲ್ಲ, ಜನೋಪಯೋಗಿ ಯೋಜನೆಗಳನ್ನೂ ಜಾರಿಗೆ ತರುತ್ತಿರಲಿಲ್ಲ. ಸಾಲ ಮಾಡಿ ಜನರ ಆದಾಯವನ್ನು ಜಾಸ್ತಿ ಮಾಡುವಂಥ ದೂರಗಾಮಿ ಯೋಜನೆಗಳನ್ನು ಹಾಕಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲವೆಂದು ಎಲ್ಲಾ ಜನಪರ ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದರೂ ಅದನ್ನು ಕೇಳಲು ಸರ್ಕಾರ ಸಿದ್ಧವಿರಲಿಲ್ಲ, ಏಕೆಂದರೆ ಆಗ (ಈಗಲೂ) ಸರ್ಕಾರ ಸಾಲದ ಮಾರುಕಟ್ಟೆಯನ್ನು ಉದ್ಯಮಿಗಳಿಗೇ ಸಂಪೂರ್ಣವಾಗಿ ಬಿಟ್ಟುಕೊಡಬೇಕೆಂಬ ಒತ್ತಡಕ್ಕೆ ಮಣಿದಿತ್ತು. ಇದರ ಸಾಮಾಜಿಕ ಪರಿಣಾಮ ಪ್ರತಿಕೂಲವಾಗಿತ್ತಲ್ಲದೆ ಪ್ರಸ್ತುತ ಆರ್ಥಿಕ ಹಿಂಜರಿತದಿಂದ ಸಾಮಾನ್ಯ ಜನರ ಬದುಕು ಬೀದಿಪಾಲಾಗಲು ಪ್ರಾರಂಭವಾಗಿದೆ. ಪ್ರಜಾತಂತ್ರದಲ್ಲಿ ಪ್ರಜೆಗಳು ಮತದಾರರೂ ಆಗಿರುತ್ತಾರಾದ್ದರಿಂದ ತಮ್ಮ ಕಾರ್ಪೊರೇಟ್ ಪರ ನೀತಿಗಳಿಗೆ ಜನರ ಸಮ್ಮತಿ ಮುದ್ರೆ ಪಡೆದುಕೊಳ್ಳಲು ಸರ್ಕಾರ ಹಲವಾರು ಸರ್ಕಸ್‌ಗಳನ್ನು ಮಾಡಲೇಬೇಕಾಗುತ್ತದೆ. ಗ್ರಾಮೀಣ ಉದ್ಯೋಗ ಖಾತರಿ, ಆಹಾರ ಭದ್ರತೆ ಇವೆಲ್ಲಾ ಈ ಸರ್ಕಸ್ಸಿನ ಭಾಗಗಳೇ! ಹೀಗಾಗಿ ಅಸಲಿ ಬಜೆಟ್ ಇರುವುದು ಈ ಅಂಕೆಸಂಖ್ಯೆ ಮತ್ತು ಜನಪ್ರಿಯ ಯೋಜನೆಗಳಾಚೆಯೇ!

ಜನ ವೇದಿಕೆಯಲ್ಲಿ ಬಜೆಟ್ ಮಂಡಿಸಿದ ಮ ದಿನ ಪ್ರಣಬ್ ದಾದಾ ಕಾರ್ಪೊರೇಟ್ ವೇದಿಕೆಯ ಭಾಷಣ ಮಾಡಿದರಲ್ಲ, ನಿಜವಾದ ಬಜೆಟ್ ಮಂಡ ಯಾದದ್ದು ಅಲ್ಲಿ!

ಸಂಸತ್ತಿನಲ್ಲೂ ಪ್ರಣಬ್ ದಾದಾ ವಿತ್ತೀಯ ಶಿಸ್ ಆದಷ್ಟು ಬೇಗ ಪಾಲಿಸಿ ಸಾಲದ ಹೊರೆಯನ್ನು ಕಡಿ ಮಾಡಿಕೊಳ್ಳುವುದಾಗಿಯೇ ಹೇಳಿದ್ದರು. ಯಾರ ಗಮನಹರಿಸಿರಲಿಲ್ಲ ಅಷ್ಟೇ! ಅದರ ಪ್ರಕಾರ ಈ ವಿತ್ತೀಯ ಹೊರೆ ಈ ಸಾರಿ ಶೇ. 6.8 ಇದ್ದರೂ ಮುಂದಿನ ವರ್ಷ ಶೇ. 5.5ಕ್ಕೂ, ಆದರ ಮುಂದಿನ ವರ್ಷ ಶೇ. 4ಕ ಇಳಿಸಿ ವಿತ್ತೀಯ ಶಿಸ್ತನ್ನು ಮತ್ತೆ ತಹಬದಿಗೆ ತರುವುದಾಗಿ ಇದರರ್ಥ ಸರ್ಕಾರ ತನ್ನ ಖರ್ಚಿಗೆ ಸಾಲವನ್ನು ಬಿ ಬೇರೆ ಮೂಲವನ್ನು ಹುಡುಕಿಕೊಳ್ಳುತ್ತದೆ ಎಂದಥ ಹಾಗಿದ್ದಲ್ಲಿ ಏನವು?

ಬಜೆಟ್ ನಂತರದ ಕೆಲವು ಉದಾಹರಣೆಗಳನ ಗಮನಿಸೋಣ. ಬಜೆಟ್ಟಿನಲ್ಲಿ ಸರ್ಕಾರಿ ಉದ್ಯಮಗಳ ಶೇ. 51ರಷ್ಟು ಪಾಲನ್ನು ಸರ್ಕಾರವೇ ಇಟ್ಟುಕೊಳ್ಳುತ್ತದೆಂದ ಸರ್ಕಾರ ಘೋಷಿಸಿದೆ. ಉಳಿದ ಶೇ.49 ಪಾಲಿನ ಶೇ.25ರಷ್ಟನ್ನು ದೇಶದ ಜನರಿಗೆ ಮಾರುವುದಾಗಿ ಹೇಳಿದ ಆದರೆ ಬಜೆಟ್ ಮಂಡಿಸಿದ ಮಾರನೇ ದಿನವೇ ರ ಸಾರಿಗೆ ಮಂತ್ರಿ ಕಮಲ್ ನಾಥ್ ಸರ್ಕಾರದ ಮಹತ್ವಾಕಾಂ ಹೆದ್ದಾರಿ ನಿರ್ಮಾಣದ ಯೋಜನೆಗೆ ಶೇ.50ರಷ್ಟು ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತಿರುವುದಾಗಿ ಘೋಷಿಸಿದರು ಆದರೆ ರಸ್ತೆ ನಿರ್ಮಾಣದಲ್ಲಿ ದುಪ್ಪಟ್ಟು ಲಾಭ ಖಾತರಿಯಿಲ್ಲದೆ ವಿದೇಶಿ ಬಂಡವಾಳಿಗರು ಏಕೆ ಹೂಡಿ ಮಾಡುತ್ತಾರೆ? ಹಾಗೆಯೇ ಪ್ರಣಬ್ ದಾದಾರ ಬಜೆಟ ಭಾಷಣದಲ್ಲಿ ವಿದೇಶಿ ಬಂಡವಾಳವನ್ನು ಉತ್ತೇಜಿಸು ಮಾತುಗಳು ಇರಲಿಲ್ಲ, ಆದರೆ ಆದರ ಬಗ್ಗೆ ತಲೆಕೆಡಿ ಕೊಳ್ಳುವ ಅಗತ್ಯವೇ ಇಲ್ಲವೆಂದು ಭಾರತವನ್ನು ಚೆನ್ನಾ ಬಲ್ಲ ಜಗತ್ತಿನ ಅತಿದೊಡ್ಡ ವಿದೇಶಿ ಹೂಡಿಕೆದಾ ಮೊರ್ಗಾನ್ ಸ್ಟಾನ್ಲಿ ಸಂಸ್ಥೆಯ ಅಭಿಪ್ರಾಯ. ಆ ಸಂಸ್ಥೆಯ ಅರ್ಥಶಾಸ್ತ್ರಜ್ಞ ಚೇತನ್ ಆಹ್ಯನ ಪ್ರಕಾರ "ರಾಜಕೀಯವಾ ಅತ್ಯಂತ ಸೂಕ್ಷ್ಮವಾದ ವಿದೇಶಿ ಬಂಡವಾಳ ಹೂಡಿಕೆಯ ಬಗ್ಗೆ ಬಜೆಟ್ಟಿನಲ್ಲಿ ಅವರು ಹೆಚ್ಚಿನ ಸದ್ದು ಮಾಡಲಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಆದೇನೆ ಇದ್ದರೂ 'ಬಜೆಟ್ಟಿನಲ್ಲಿ ಹೇಳಲಾಗಿಲ್ಲ' ಎಂದ ಮಾತ್ರ ಆದರ ಬಗ್ಗೆ 'ಯಾವ ಕ್ರಮವನ್ನು ತೆಗೆದುಕೊಳ್ಳುವುದ ಇಲ್ಲ' ಎಂದೇನೂ ಅರ್ಥಮಾಡಿಕೊಳ್ಳಬೇಕಿಲ್ಲ!"

ಅಷ್ಟು ಮಾತ್ರವಲ್ಲ, ಸರ್ಕಾರಿ ಸಂಸ್ಥೆಗಳಿಂದ ಹೂಡಿ ಹಿಂತೆಗೆದುಕೊಳ್ಳುವ ಬಗ್ಗೆಯೂ ಬಜೆಟ್ಟಿನಲ್ಲಿ ಹೆಚ್ಚೇನೂ ಹೇಳಿಲ್ಲ. ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಪ್ರಕಾ 2010ರ ಏಪ್ರಿಲ್ ವೇಳೆಗೆ ಸರ್ಕಾರ ಬಂಡವಾ ಹಿಂತೆಗೆದುಕೊಳ್ಳುವಿಕೆಯ ಮೂಲಕ ಕೇವಲ 120 ಕೋಟಿ ರೂ.ಗಳನ್ನು ಕ್ರೋಢೀಕರಿಸಲಿದೆಯಷ್ಟೆ. ಆದ ಮೋರ್ಗಾನ್ ಸ್ಟಾನ್ಲಿ ಸಂಸ್ಥೆಯ ಪ್ರಕಾರ "ಸರ್ಕಾರ ಸರ್ಕಾರಿ ಉದ್ಯಮಗಳಲ್ಲಿ ತನ್ನ ಹೂಡಿಕೆಯನ್ನು ಹಿಂತೆಗೆದುಕೊಳ್ಳು ಮೂಲಕ 2010ರ ಮಾರ್ಚಿಗೆ ಮುನ್ನ ಏನಿಲ್ಲವೆಂದರೂ 25,000 ಕೋಟಿ ರೂ. ಹಣವನ್ನು ಕ್ರೋಢೀಕರಿಸಲಿದೆ. ಮತ್ತೊಂದು ನುರಿತ ದೇಶಿ ಕಾರ್ಪೊರೇಟ್ ಸಂಸ್ಥೆಯಾದ **RPG Foundation** ಪ್ರಕಾರ "ಈ ಬಾರಿ ಸರ್ಕಾರ ತನ್ನ ಬಜೆಟ್ಟನ್ನು ಓಟು ಕೊಟ್ಟವರಿಗೆ ಕೃತಜ್ಞತೆ ಹೇಳಲು ಬಳಸಿಕೊಂಡಿದೆ. ಮುಂದಿನ ಬಜೆಟ್ಟುಗಳಲ್ಲಿ ಅಸಲಿ ಆರ್ಥಿ ಸುಧಾರಣೆಯ ಬಜೆಟ್ಟುಗಳು ಮಂಡನೆಯಾಗಲಿವೆ."

ಇವೆಲ್ಲಕ್ಕಿಂತ ಹೆಚ್ಚಿನ ನಿಜಾಯತಿಯನ್ನು ಯೋಜನಾ ಆಯೋಗ ತೋರಿಸಿದೆ. ಅದರ ಸದಸ್ಯರಾದ ಸೌಮಿತ್ರ ಚೌಧರಿಯವರ ಪ್ರಕಾರ "ಸರ್ಕಾರಿ ಯೋಜನೆಗಳ ಬಗ ಸೋಮವಾರ ಸಂಸತ್ತಿನಲ್ಲಿ ಮಂಡಿಸಲಾದ ಬಜೆಟ್ ಅಂತಿಮ ಮಾತನ್ನೇನೂ ಹೇಳಿಲ್ಲ, ಹಲವಾರು ವಿಷಯ ಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ ಬೇಕಾಗುತ್ತದೆ. ಉದಾಹರಣೆಗೆ ಪೆಟ್ರೋಲ್ ಬೆಲ ನಿಗದಿಯಂಥ ವಿಚಾರಗಳನ್ನು ಬಜೆಟ್ಟಿನ ಆಚೆಗೆ ಇರಿಸ ಲಾಗಿದೆ. ಇಂಥ ಹಲವಾರು ವಿಷಯಗಳಿವೆ!"

ಇದಲ್ಲದೆ 2010ರ ಏಪ್ರಿಲ್‌ನಿಂದ ಬಡವರ ಮೇಲ ಇನ್ನೂ ಹೆಚ್ಚಿನ ತೆರಿಗೆ ಭಾರವನ್ನು ಹೊರಿಸುವ **Goods and Service Tax (GST)** ಎಂಬ ಹೊಸ ತೆರಿಗೆ ಪದ್ಧತಿ ಜಾರಿಗೆ ಬರಲಿದೆಯೆಂಬುದನ್ನೂ ಘೋಷಿಸಲಾಗಿದೆ. ಅಂದರೆ ಸಾಲ ಮಾಡಿ ಸರ್ಕಾರ ಅನ್ನ ಹಾಕುತ್ತಿದೆ, ಕೆಲಸ ಕೊಡುತ್ತಿದೆ. ಆದಕ್ಕಿಂತ ಹೆಚ್ಚಾಗಿ ಖಾಸಗಿ ಉದ್ಯಮಿಗಳಿಗೆ ಬೇಕಿರುವುದೆಲ್ಲವನ್ನೂ ಈ ಸಾಲದಿಂದಲೇ ಮಾಡುತ್ತಿದೆ. ಆದರೆ ಆ ಸಾಲವನ್ನು ತೀರಿಸಲು **GST** ತೆರಿಗೆ ಪದ್ಧ ಮೂಲಕ ಬಡಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಿಸುವ ಮೂಲಕ ಜನರ ಆಸ್ತಿಯನ್ನು ಹರಾಜು ಮಾಡಿ ಶ್ರೀಮಂತರಿಗಾಗಿ ಮಾಡಿರುವ ಸಾಲವನ್ನು ತೀರಿಸಲಿದೆ.

ಸಾರಾಂಶವಿಷ್ಟೆ: ಈ ಬಜೆಟ್ಟಿನ ಮೂಲಕ "ಸಾಲವೆಂಬ ಹಾಲೋಗರವನ್ನು" ಉದ್ಯಮಪತಿಗಳೇ ಉಂಡರೂ "ಸಾಲಿಗರು ಬಂದಾಗ" "ಕಿಬ್ಬದಿಯ ಕೀಲು" ಮುರಿಯುವುದೂ ಮಾತ್ರ ಶ್ರೀ ಸಾಮಾನ್ಯನದೇ! ■


ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ ಎಂಬ ಸಂಜ್ಞಾಜ್ಯೋತಿ



ಕಂಡಹಾಗೆ

ಗೌರಿ ಲಂಕೇಶ್

...ವಾರ ಕಾಲಂನಲ್ಲಿ ಯಾವುದರ ಬಗ್ಗೆ ಬರೆಯಬೇಕೆಂದು ಚಿಂತಿಸುತ್ತಿರುವಾಗಲೇ ನನ್ನ ಕಣ್ಣಿಗೆ ಬಿದ್ದದ್ದು 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ...ತ ಲೇಖಕಿ ಅರುಂಧತಿ ರಾಯ್ ಅವರ ಹೊಸ ಪುಸ್ತಕದ ಮುನ್ನುಡಿ. 'ಲಿಸನಿಂಗ್ ಟು ಗ್ರಾಸ್ ಹಾಪರ್ಸ್; ಫೀಲ್ಡ್ ನೋಟ್ಸ್ ಆನ್ ಡೆಮಾಕ್ರಸಿ' ...ಬ ಪುಸ್ತಕದ ಈ ಮುನ್ನುಡಿ- ರಾಯ್ ಅವರ ಇತರೇ ಲೇಖನಗಳಂತೆ ಅದ್ಭುತವಾಗಿದೆ. ಜಾಗತೀಕರಣದ ಯುಗದಲ್ಲಿ ಹೇಗೆ ಚುನಾವಣೆಗಳೂ ...ರುಕಟ್ಟೆಯ ಸಾಮಗ್ರಿಯಾಗಿದೆ, ಭಾಷಾ ಕಳುವಿನಿಂದ ಹೇಗೆ ಜನಪರ ದನಿಗಳನ್ನೇ ದಮನ ಮಾಡಲಾಗಿದೆ ಎಂದೆಲ್ಲ ಅವರು ಈ ಲೇಖನದಲ್ಲಿ ...ರಿಸಿದ್ದಾರೆ. ಆದ್ದರಿಂದ ನಮ್ಮ ಓದುಗರಿಗೆ ಆ ಲೇಖನದ ಭಾವಾನುವಾದವನ್ನು ಇಲ್ಲಿ ನೀಡುತ್ತಿದ್ದೇನೆ.



ಪ್ರತಿಭಟನೆ....

...ಪ್ರಜಾಪ್ರಭುತ್ವದ ನಂತರ ಜೀವನವಿದೆಯೇ? ಅದೆಂತಹ ...ನವಾಗಿರುತ್ತದೆ? ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಚರ್ಚೆಗಳು ...ಾಗಲೆಲ್ಲ ಅದರ ಪ್ರತಿಪಾದಕರು ಹೇಳುತ್ತಾರೆ: "ನಿಜ ...ಲ್ಲಿ ಲೋಪಗಳಿವೆ. ಅದು ಅಷ್ಟು ಪರಿಪೂರ್ಣವೂ ... ಆದರೂ ಬೇರೆ ಎಲ್ಲ ವ್ಯವಸ್ಥೆಗಳಿಗಿಂತ ಇದೇ ವಾಸಿ." ...ಆದರೆ ಇಲ್ಲಿರುವ ಮೂಲಭೂತ ಪ್ರಶ್ನೆ ಯಾವುದೆಂದರೆ ...ಪ್ರಭುತ್ವ ವ್ಯವಸ್ಥೆಗೆ ನಾವೇನು ಮಾಡಿದ್ದೇವೆ. ಅದನ್ನು ... ಪರಿವರ್ತಿಸಿದ್ದೇವೆ? ಇದನ್ನ ಬಳಸಿಕೊಂಡ ನಂತರ ...ಪ್ರಭುತ್ವಕ್ಕೆ ಏನಾಗುತ್ತದೆ? ಅದರ ಎಲ್ಲ ಅರ್ಥವನ್ನು ...ದ ನಂತರ ಏನು ಉಳಿದಿರುತ್ತದೆ? ಅದರ ಪ್ರತಿ ...ದು ಅಂಗಾಂಗವೂ ಅಪಾಯಕಾರಿ ಸಂಸ್ಥೆಯಾಗಿ ...ರ್ತನೆಯಾಗಿರುವಾಗ ಏನಾಗುತ್ತದೆ? ಅದರಲ್ಲೂ ...ತ್ತು ಪ್ರಜಾಪ್ರಭುತ್ವ ಮತ್ತು ಮುಕ್ತ ಮಾರುಕಟ್ಟೆ ...ಲನಗೊಂಡು ಒಂದು ಪರಭಕ್ಷಕ ಜೀವಿಯಾಗಿರುವಾಗ, ...ವನ್ನು ಹೆಚ್ಚಿಸುವುದೇ ಸೀಮಿತ ಕಲ್ಪನೆಯಾಗಿರುವಾಗ? ...ಪ್ರಕ್ರಿಯೆಯನ್ನು ಹಿಮ್ಮೊಗವಾಗಿ ತಿರುಗಿಸಬಹುದೆ? ...ತವಾಗಿರುವ ಇದನ್ನು ಅದರ ಹಳೆ ರೂಪಕ್ಕೆ ...ಾಯಿಸಬಹುದೇ?

ಈ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರಗಳಿಲ್ಲ. ಆದರೆ ...ಪ್ರಭುತ್ವ ಎಂಬ ಸಂಜ್ಞಾಜ್ಯೋತಿಯು ಕ್ಷೀಣಿಸುತ್ತಿದ್ದು ...ಲ್ಲಿ ಕನಸಿದ್ದ ನ್ಯಾಯ ಮತ್ತು ಸ್ಥಿರತೆಯನ್ನು ಈ ವ್ಯವಸ್ಥೆ ...ಾರದೆಂದೆನಿಸುತ್ತಿದೆ.

ಮೂಲತಃ ಕಾದಂಬರಿಗಾರ್ತಿಯಾದ ನಾನು ನನ್ನ ...ನ ವಾಸ್ತವಗಳ ಬಗ್ಗೆ ಲೇಖನಗಳನ್ನು ಬರೆಯುವಾಗ ...ಸುತ್ತದೆ: ಇದರ ಬದಲಾಗಿ ಪಾಶವೀ ಊಳು ... ಬದಲಾವಣೆಗಳನ್ನು ತರಬಲ್ಲಂತಹ ಶಕ್ತಿಯುತ ... ಬೇಕಲ್ಲವೆ? ಆದರೆ ಕುತಂತ್ರ, ಜಟಿಲತನ, ...ರಶಾಹಿಯ 'ಸೂಕ್ತ ಮಾರ್ಗ'ಗಳಿಂದ ತುಂಬಿರುವ ...ದ ವ್ಯವಸ್ಥೆಯಲ್ಲಿ ಅದೆಂತಹ ಶೋಷಣೆ ಅಡಗಿದೆ ...ೆ, ಅದೆಲ್ಲ ನನ್ನನ್ನು ಓರ್ವ ಗುಮಾಸ್ತೆಯನ್ನಾಗಿಸಿದೆ. ...ನ ಹಾಲಿ ಜನಪ್ರಿಯ ಸೂಪರ್ ಪವರ್ ಆಗಿರುವ ... ದೇಶವು ಅದೆಂತಹ ನಿಷ್ಕರುಣೆ, ತಣ್ಣನೆ ಮತ್ತು ...ಂತ ಹಿಂಸೆಯನ್ನು ಹರಿಯಬಿಟ್ಟಿದೆ ಎಂದರೆ ಅದನ್ನು ...ಲು ವಿವಿಧ ಅಸ್ತ್ರಗಳೇ ಬೇಕಾಗಿವೆ. 'ಸೂಕ್ತ ಮಾರ್ಗ'ದ ...ನ್ಯಗಳು 'ಸೂಕ್ತ ಮಾರ್ಗ'ದ ಪ್ರತಿರೋಧವನ್ನು ...ಹಾಕುತ್ತದೆ. ನನ್ನದು ಅಷ್ಟು ಪ್ರಬಲವಾದ ...ೋಧವಲ್ಲ ಎಂದು ನನಗೆ ಗೊತ್ತು, ಆದರೆ ಈಗ ...ವುದು ಅದೊಂದೆ. ಪ್ರಾಯಶಃ ಮುಂದೊಂದು ...ದೇ ಪಾಶವೀ ಊಳಿಗೆ ಅಥವಾ ಪ್ರಭಾವಶಾಲಿ ... ಅಡಿಪಾಯವಾಗಬಹುದು.

* * * * *

ಜನಹತ್ಯೆಯ ಇತಿಹಾಸ ಮತ್ತು ಅದರ ನಿರಾಕರಣೆ ಒಂದೆಡೆಯಾದರೆ ಇನ್ನೊಂದೆಡೆ 'ಅಭಿವೃದ್ಧಿ' ಮತ್ತು 'ಜನಹತ್ಯೆ'ಯ ನಡುವೆ ಇವತ್ತು ಒಂದು ಆರ್ಗಾನಿಕ್ ಸಂಬಂಧ ಏರ್ಪಟ್ಟಿದೆ. ಹಾಗೆಯೇ ಇವತ್ತು 'ಪ್ರಗತಿ' ಮತ್ತು 'ಅಭಿವೃದ್ಧಿ' ಎಂಬ ಪದಗಳ ಬದಲಾಗಿ 'ಆರ್ಥಿಕ ಸುಧಾರಣೆ', 'ಅನಿಯಂತ್ರಣ' ಮತ್ತು 'ಖಾಸಗೀಕರಣ' ಎಂಬ ಪದಗಳನ್ನು ಬಳಸಲಾಗುತ್ತಿದೆ. ಇವತ್ತು 'ಸ್ವಾತಂತ್ರ್ಯ' ಎಂಬ ಪದ ಕೂಡ ಮನುಷ್ಯನ ಆಶಯಗಳನ್ನು ಬಿಂಬಿಸುವ ಬದಲಾಗಿ ವಿವಿಧ ಸುಗಂಧ ಬ್ರ್ಯಾಂಡ್‌ಗಳ ನಡುವಿನ 'ಆಯ್ಕೆ'ಗೆ ಸೀಮಿತವಾಗುತ್ತಿದೆ. ಮಾರುಕಟ್ಟೆ ಕೂಡ ನೀವು ಅಗತ್ಯ ವಸ್ತುಗಳನ್ನು ಖರೀದಿಸುವ ಜಾಗವಾಗಿಲ್ಲ. ಬದಲಾಗಿ ಮುಖರಹಿತ ಕಾರ್ಪೊರೇಟ್ ಕಂಪನಿಗಳು 'ಭವಿಷ್ಯಗಳನ್ನು' ಖರೀದಿ-ಮಾರಾಟ ಮಾಡುವ ಜಾಗವಾಗಿದೆ. 'ನ್ಯಾಯ' ಕೂಡ ಕನಿಷ್ಠ 'ಮಾನವ ಹಕ್ಕು'ಗಳಾಗಿ ಬಿಟ್ಟಿದೆ. ಭಾಷೆಯ ಈ ಕಳುವು, ಪದಗಳಿಗೆ ಹೊಸ ಅರ್ಥಗಳು- ಇವೆಲ್ಲವೂ ಈಗ ಅಸ್ತ್ರಗಳಾಗಿವೆ; ಅವುಗಳ ನಿಜವಾದ ಉದ್ದೇಶಗಳನ್ನು ಮರೆಮಾಚಿ ಅವು ಸಂಪ್ರದಾಯಿಕವಾಗಿ ನೀಡುತ್ತಿದ್ದ ಅರ್ಥಗಳನ್ನೇ ಈಗ ಅದಲುಬದಲು ಮಾಡಲಾಗಿದೆ. ಇದೇ ಹೊಸ ಕಾರುಬಾರಿನ ತ್ಸಾರ್‌ಗಳ ಸಾಧನೆ. ಹಾಗೆ ಮಾಡುವ ಮೂಲಕ ಅವರ ವಿರೋಧಿಗಳನ್ನು ಮೂಲೆಗುಂಪು ಮಾಡಿದ್ದಾರಲ್ಲದೆ, ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಪದಗಳೇ ಇಲ್ಲದಂತೆ ಮಾಡಿದ್ದಾರೆ. ಆ ಕಾರಣಕ್ಕಾಗಿಯೇ ಅವರು ತಮ್ಮ ಟೀಕಾಕಾರರನ್ನು 'ಪ್ರಗತಿ ವಿರೋಧಿಗಳು', 'ಅಭಿವೃದ್ಧಿಯ ವಿರೋಧಿಗಳು', 'ಸುಧಾರಣೆಯ ವಿರೋಧಿಗಳು', ಮತ್ತು ಮುಖ್ಯವಾಗಿ 'ದೇಶದ್ರೋಹಿಗಳು' ಎಂದು ಹಂಗಿಸುತ್ತಾರೆ. ಅರಣ್ಯಗಳ ಉಳಿವಿನ ಬಗ್ಗೆ ಅಥವಾ ನದಿಯೊಂದನ್ನು ಕಾಪಾಡುವ ಬಗ್ಗೆ ಯಾರಾದರೂ ಮಾತನಾಡಿದರೆ "ನಿಮಗೆ ಅಭಿವೃದ್ಧಿಯಲ್ಲಿ ನಂಬಿಕೆ ಇಲ್ಲವೆ?" ಎಂದು ಕೇಳುತ್ತಾರೆ. ದೊಡ್ಡ ಡ್ಯಾಮ್‌ಗಳಿಂದ ತಮ್ಮ ನೆಲ ಮತ್ತು ಬದುಕನ್ನೇ ಕಳೆದುಕೊಳ್ಳುವವರಿಗೆ "ನಿಮ್ಮಲ್ಲಿ ಬೇರೆ ರೀತಿಯ ಅಭಿವೃದ್ಧಿಯ ಮಾದರಿ ಇದೆಯೇ?" ಎನ್ನುತ್ತಾರೆ.




ಎಲ್ಲರಿಗೂ ಶಿಕ್ಷಣ, ಆರೋಗ್ಯ ವ್ಯವಸ್ಥೆ ಮತ್ತು ಸಾಮಾಜಿಕ ರಕ್ಷಣೆ ಕೊಡಬೇಕಿರುವುದು ಸರ್ಕಾರದ ಕರ್ತವ್ಯ-ಎಂದರೆ "ನೀವು ಮಾರುಕಟ್ಟೆ ವಿರೋಧಿಗಳು" ಎನ್ನುತ್ತಾರೆ.

ನಮ್ಮಿಂದ ಕದಿಯಲ್ಪಟ್ಟಿರುವ ಈ ಪದಗಳನ್ನು ಹಿಂದೆ ಪಡೆಯಬೇಕೆಂಬ ದೀರ್ಘ ವಿವರಣೆಯನ್ನು ಕೇಳಲು ಪ್ರಸ್ತುತ ಜಗತ್ತಿಗೆ ತಾಳ್ಮೆ ಇಲ್ಲ. ಇನ್ನು ಬಡವರಿಗಂತೂ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದೇ ಇವತ್ತಿನ ಯುಗದಲ್ಲಿ ತುಂಬಾ ದುಬಾರಿಯಾಗಿದೆ.

ಕಳೆದ ಎರಡು ದಶಕಗಳ ಇಂತಹ ಅಭಿವೃದ್ಧಿಯಿಂದಾಗಿ ಭಾರತದಲ್ಲಿ ಒಂದು ದೊಡ್ಡ ಮಧ್ಯಮ ವರ್ಗವೇ ಸೃಷ್ಟಿಯಾಗಿದೆ. ಇದ್ದಕ್ಕಿದ್ದಂತೆ ಬಂದಿರುವ ಐಶ್ವರ್ಯ ಮತ್ತು ಅದರೊಂದಿಗಿನ ಮರ್ಯಾದೆಯ ಅಮಲಿನಲ್ಲಿ ಆ ಮಧ್ಯಮ ವರ್ಗ ತೇಲಾಡುತ್ತಿದೆ. ಆದರೆ ಇದೇ ಪ್ರಕ್ರಿಯೆಯಲ್ಲಿ ಅವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹತಾಶ ಕೆಳವರ್ಗವೂ ಸೃಷ್ಟಿಯಾಗಿದೆ. ವಿವೇಚನಾರಹಿತ ಪರಿಸರದ ದೋಚುವಿಕೆ, ಬೃಹತ್ ಕಟ್ಟಡಗಳ ಮತ್ತು ಡ್ಯಾಮ್‌ಗಳ ನಿರ್ಮಾಣ, ಗಣಿಗಾರಿಕೆ ಮತ್ತು ವಿಶೇಷ ಆರ್ಥಿಕ ವಲಯಗಳಿಂದಾಗಿ ಲಕ್ಷಾಂತರ ಜನರ ಭೂಮಿಯನ್ನು ಕಸಿದು ಕೊಳ್ಳಲಾಗಿದೆಯಲ್ಲದೆ ಅವರನ್ನೆಲ್ಲ ನಿರಾಶ್ರಿತರನ್ನಾಗಿಸಿದೆ. ಇವೆಲ್ಲ 'ಅಭಿವೃದ್ಧಿ' ಕಾರ್ಯಗಳು ನಡೆದಿರುವುದು ಬಡವರ ಹೆಸರಿನಲ್ಲಾದರೂ ಅವುಗಳ ನಿಜವಾದ ಫಲಾನುಭವಿಗಳು ನವಕುಲೀನ ವರ್ಗ.

ಅಭಿವೃದ್ಧಿ ಕುರಿತ ವಾದವಿವಾದಗಳ ಕೇಂದ್ರಬಿಂದುವೇ ಭೂಮಿಗಾಗಿನ ಈ ಕಾಳಗ. ದೇಶದ ಆರ್ಥಿಕ ಸಚಿವರಾಗುವ ಮುನ್ನ ಪಿ. ಚಿದಂಬರಂ ಎನ್ರಾನ್ ಕಂಪನಿಯ ವಕೀಲರಾಗಿದ್ದರು ಮತ್ತು ಅಂತರರಾಷ್ಟ್ರೀಯ ಗಣಿಗಾರಿಕಾ ಕಂಪನಿಯಾದ ವೇದಾಂತದ ಅಧ್ಯಕ್ಷೀಯ ಮಂಡಳಿಯ ಸದಸ್ಯರಾಗಿದ್ದರು. ಒರಿಸ್ಸಾದ ನಿಯಾಂಗಿರಿ ಬೆಟ್ಟಗಳನ್ನು ಇವತ್ತು ನಾಶಪಡಿಸುತ್ತಿರುವ ಕಂಪನಿಯೇ ಈ ವೇದಾಂತ. ಸಂದರ್ಶನವೊಂದರಲ್ಲಿ ಚಿದಂಬರಂ ಅವರು ದೇಶದ ಶೇ. 85 ಜನ ನಗರನಿವಾಸಿಗಳಾಗುವಂತೆ ಮಾಡುವುದೇ ತಮ್ಮ ಯೋಜನೆ ಎಂದು ಹೇಳಿದ್ದರು. ಇದನ್ನು ಕಾರ್ಯರೂಪಕ್ಕೆ ತರಬೇಕಾದರೆ ಕಲ್ಪಿಸಿಕೊಳ್ಳಲೂ ಅಸಾಧ್ಯವಾದ ಪ್ರಮಾಣದಲ್ಲಿ ಸಾಮಾಜಿಕ ಇಂಜಿನಿಯರಿಂಗ್ ಮಾಡಬೇಕಾಗುತ್ತದೆ.



ಅಂದರೆ ಸುಮಾರು ಐನೂರು ಮಿಲಿಯನ್ ಜನ ತಮ್ಮ ಗ್ರಾಮಗಳನ್ನು ತೊರೆದು ನಗರಗಳನ್ನು ಸೇರುವಂತೆ ಅವರನ್ನು ಪುಸಲಾಯಿಸಬೇಕಾಗುತ್ತದೆ ಅಥವಾ ಬಲವಂತ ಮಾಡಬೇಕಾಗುತ್ತದೆ. ಅದಕ್ಕೆಲ್ಲ ಈಗಾಗಲೇ ಚಾಲನೆ ದೊರೆತಿದ್ದುಭಾರತವನ್ನು ವೇಗವಾಗಿ ಪೊಲೀಸ್ ರಾಜ್ಯವಾಗಿ ಪರಿವರ್ತಿಸಲಾಗುತ್ತಿದೆ. ಈ ಪೊಲೀಸ್ ರಾಜ್ಯದಲ್ಲಿ ತಮ್ಮ ಭೂಮಿಯನ್ನು ಬಿಟ್ಟುಕೊಡಲು ನಿರಾಕರಿಸುವ ಜನರಿಗೆ ಬಂದೂಕು ತೋರಿಸಲಾಗುತ್ತಿದೆ. ಈ ಸಾಧನೆಗೇ ಇರಬೇಕು ಚಿದಂಬರಮ್ ಅವರು ಆರ್ಥಿಕ ಸಚಿವ ಸ್ಥಾನದಿಂದ ಗೃಹ ಸಚಿವ ಸ್ಥಾನಕ್ಕೆ ಬಡ್ತಿ ಪಡೆದರು. ದುಃಸ್ವಪ್ನದಂತಿರುವ ಅವರ ಈ 'ಯೋಜನೆ'ಯಿಂದಾಗಿ ಸಾವಿರಾರು ಎಕರೆ ಭೂಮಿಯಲ್ಲಿನ ಭಾರತದ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯಲು ಕಾರ್ಪೊರೇಟ್ ಕಂಪನಿಗಳಿಗೆ ಈಗ ಅನುವು ಮಾಡಿಕೊಡಲಾಗಿದೆ. ಅಂದರೆ ಸ್ವಾತಂತ್ರ್ಯ ಬಂದನಂತರದ ಭೂಸುಧಾರಣೆ ಯೋಜನೆಗಳನ್ನು ಹಿಮ್ಮುಖವಾಗಿಸಲಾಗಿದೆ.

ದಿಕ್ಕು, ಉದ್ದೇಶ ಇಲ್ಲದಂತಾಗಿರುವ ಸರ್ಕಾರದ ಬೆಂಬಲದೊಂದಿಗೆ ಈಗಾಗಲೇ ಅಂತರರಾಷ್ಟ್ರೀಯ ಕಂಪನಿಗಳು ಕಾಡು, ಬೆಟ್ಟ ಮತ್ತು ಜಲ ವ್ಯವಸ್ಥೆಯನ್ನು ನಾಶಪಡಿಸುತ್ತಿದ್ದು 'ಪರಿಸರದ ಮಾರಣಹೋಮ' ಮಾಡುತ್ತಿವೆ. ಪೂರ್ವ ಭಾರತದಲ್ಲಿ ಬಾಕ್ಸೈಟ್ ಮತ್ತು ಕಬ್ಬಿಣದ ಅದಿರಿಗಾಗಿ ನಡೆಯುತ್ತಿರುವ ಗಣಿಗಾರಿಕೆ ಅಲ್ಲಿನ ಪರಿಸರ ವ್ಯವಸ್ಥೆಯನ್ನು ನಿರ್ನಾಮ ಮಾಡಿದೆಯಲ್ಲದೆ ಫಲವತ್ತಾಗಿದ್ದ ಭೂಮಿಯನ್ನು ಮರಳುಗಾಡಾಗಿಸುತ್ತಿದೆ. ಇನ್ನು ಹಿಮಾಲಯದಲ್ಲಿ ನೂರಾರು ಡ್ಯಾಮ್‌ಗಳನ್ನು ನಿರ್ಮಿಸುವ ಉದ್ದೇಶವಿದೆ; ಆದರಿಂದುಂಟಾಗುವ ಮಹಾವಿನಾಶದ ಬಗ್ಗೆ ಕಿಂಚಿತ್ತೂ ಯೋಚಿಸಿದಂತಿಲ್ಲ. ಇನ್ನು ಬಯಲು ಪ್ರದೇಶಗಳಲ್ಲಿ ಪ್ರವಾಹವನ್ನು ತಡೆಯುವ ಉದ್ದೇಶದಿಂದ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆಯಾದರೂ ಅವುಗಳಿಂದಾಗಿಯೇ ನದಿತಳಗಳೇ ಏರಿದ್ದು ಪ್ರವಾಹಗಳು ಹೆಚ್ಚಾಗಿವೆ, ಕೃಷಿ ಭೂಮಿನಾಶವಾಗಿ ಲಕ್ಷಾಂತರ ಜನರ ಬದುಕೇ ನುಚ್ಚು ನೂರಾಗಿದೆ. ಗಂಗೆ ಸೇರಿದಂತೆ ಭಾರತದ ಬಹಳಷ್ಟು ಪವಿತ್ರ ನದಿಗಳು ಇವತ್ತು ನೀರಿಗಿಂತ ಹೆಚ್ಚಾಗಿ ಕೊಳಚೆಯನ್ನೇ ಹರಿಸುವ ಅಪವಿತ್ರ ಚರಂಡಿಗಳಾಗಿವೆ.

ನದಿಗಳ ನೀರು ಸಮುದ್ರಕ್ಕೆ ಹರಿದು 'ವೇಸ್ಟ್' ಆಗಬಾರದೆಂಬ ಕಲ್ಪನೆಯಲ್ಲಿ ಸುಪ್ರೀಮ್ ಕೋರ್ಟ್ ಭಾರತದ ನದಿಗಳ ಜೋಡಣೆ ಯೋಜನೆಗೆ ಹಸಿರು ನಿಶಾನೆ ತೋರಿಸಿತು. ಕುಡಿಯುವ ನೀರನ್ನು ಸರಬರಾಜು ಮಾಡುವ ಪೈಪ್‌ಗಳನ್ನು ಜೋಡಿಸುವಷ್ಟು ಸುಲಭವಲ್ಲ ಈ ಯೋಜನೆ. ಇದಕ್ಕಾಗಿ ಬೆಟ್ಟಗಳನ್ನು ಅಗಿಯಬೇಕು, ಕಾಡುಗಳನ್ನು ಕತ್ತರಿಸಬೇಕು, ಸಹಜವಾಗಿ ನಿರ್ಮಿತವಾಗಿರುವ ನದಿ ಪಾತ್ರಗಳನ್ನೇ ಬದಲಾಯಿಸಬೇಕು, ನದೀ ಮುಖಜ ಭೂಮಿಯನ್ನು ಮತ್ತು ನದೀ ಮುಖಗಳನ್ನು ನಾಶಪಡಿಸಬೇಕು. ಅಂದರೆ ಈ ಉಪಖಂಡದ ಇಡೀ ಪರಿಸರವನ್ನೇ ನಿರ್ನಾಮ ಮಾಡಬೇಕು. (ಅಂದಹಾಗೆ ಇಂತಹ ತೀರ್ಪನ್ನು ನೀಡಿದ್ದ ನ್ಯಾಯಾಧೀಶ ಬಿ.ಎನ್. ಕೃಪಾಲ್ ಅವರು ನಿವೃತ್ತಿ ಹೊಂದಿದ ನಂತರ ಕೋಕಕೋಲಾ ಕಂಪನಿಯ ಪರಿಸರ ಮಂಡಳಿಯನ್ನು ಸೇರಿದರು!)

ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಯಿಂದಾಗಿ ಆಹಾರ ಧಾನ್ಯಗಳ ಬದಲಾಗಿ ವಾಣಿಜ್ಯ ಕೃಷಿಗೆ ಒತ್ತು ನೀಡಲಾಗಿದ್ದು ಇದರ ಪರಿಣಾಮವಾಗಿ ಭೂಮಿ ನಾಶವಾಗಿದೆ, ಅಂತರ್ಜಲ ಕಲ್ಮಷಗೊಂಡಿದೆ. ರೈತರನ್ನು ಸಾಲದ ಬೇಗುದಿಯಲ್ಲಿ ಸಿಲುಕಿಸಿದೆ. ಕಳೆದ ಕೆಲ ವರ್ಷಗಳಲ್ಲಿ 1,80,000 ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಒಂದೆಡೆ ಸರ್ಕಾರದ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳು ತುಂಬಿ ತುಳುಕುತ್ತಾ ಅಂತಿಮವಾಗಿ ಹುಳುತು ಹೋಗುತ್ತಿದ್ದರೆ ಇನ್ನೊಂದೆಡೆ ಹಸಿವು ಮತ್ತು ಅಪೌಷ್ಟಿಕತೆ ದೇಶದೆಲ್ಲಡೆ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಶೇ. 9 ಅಭಿವೃದ್ಧಿ ದರವೇ ವಿನಾಶಕಾರಿಯಾಗಿ ಕಾಣಿಸುತ್ತಿದೆ. ಏಕೆಂದರೆ ಇದು ಕ್ಯಾನ್ಸರ್‌ನಂತಹ ಅಭಿವೃದ್ಧಿಯಾಗಿದ್ದು ಇದು ಹೆಚ್ಚು ಬೆಳೆದಂತೆ ಸಾವು ಸನ್ನಿಹಿತವಾಗುತ್ತವೆ.

ಊಳಿಗಮಾನ್ಯ ವ್ಯವಸ್ಥೆ ಮತ್ತು ಜಾತಿ ಪದ್ಧತಿ ಎಂಬ ಎರಡು ಹೊರೆಗಳಿಂದಾಗಿ ಕೊಳೆಯುತ್ತಿದ್ದ ಒಂದು ಪ್ರಾಚೀನ ಸಮಾಜವನ್ನು ಒಂದು ದೊಡ್ಡ ಮಂಥನಿಯಲ್ಲಿ ಹಾಕಿ ಕದಡಿದಂತಾಗಿದೆ. ಆದರೆ ಮಂಥನದಲ್ಲಿ ಹಳೆಯ ಅಸಮಾನತೆಗಳ ಬಲೆ ಹರಿದು ಕೆಲವು ಬದಲಾವಣೆಗಳಾಗಿದ್ದರೂ ಹೆಚ್ಚಾಗಿ ಹಿಂದಿನ ಮೌಲ್ಯಗಳನ್ನೇ ಗಟ್ಟಿಗೊಳಿಸಿದೆ. ಹೀಗಾಗಿ ಈಗ ಈ ಹಳೇ ಸಮಾಜ ಹೆಪ್ಪುಗಟ್ಟಿದ್ದು ಮೇಲೆ ದಟ್ಟವಾದ ಕೆನೆ ಸೃಷ್ಟಿಯಾಗಿದ್ದರೆ ಅದಕ್ಕಿಂತ ಹೆಚ್ಚಿನ ಪ್ರಮಾಣದ ನೀರು ಆ ಕೆನೆಯ ಕೆಳಗೆ ನಿಂತಿದೆ. ಆ ಕೆನೆಯೇ ಭಾರತದ ಮಾರುಕಟ್ಟೆಯಲ್ಲಿರುವ ಕಾರ್, ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ವ್ಯಾಲೆಂಟೈನ್ ದಿನಾಚರಣೆಯ ಕಾರ್ಡುಗಳ ಗ್ರಾಹಕರು. ಆದರೆ ಈ ಕೆನೆಯಡಿ ಇರುವ ನೀರು ಅಷ್ಟು ಮುಖ್ಯವಲ್ಲ.

▶▶▶ 4

▶▶▶3

ಅದನ್ನು ಅಲ್ಲೇ ತುಳುಕಾಡಿಸಬಹುದು. ಯಾವುದೋ ಒಂದು ತೊಟ್ಟಿಯಲ್ಲಿ ಶೇಖರಿಸಿಡಬಹುದು. ಅಂತಿಮವಾಗಿ ಅದನ್ನು ತರಿಸಿ ಸುಮ್ಮನಾಗಬಹುದು....

ಹಾಗೆಂದು ಕೊಟ್ಟುಬಿಟ್ಟ ಜನ ಭಾವಿಸಿದ್ದಾರೆ. ಆದರೆ ಭಾರತದ ಒಳನಾಡುಗಳಾದ ಛತ್ತೀಸಗಢ, ಜಾರ್ಖಂಡ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳದಲ್ಲಿ ಉಗ್ರ ಆಂತರಿಕ ಯುದ್ಧಗಳು ಪ್ರಾರಂಭವಾಗುತ್ತವೆಂದು ಅವರು ಯೋಚಿಸಿರಲಿಲ್ಲ.

*****

1989 ಕ್ಕೆ ಹಿಂದಿರುಗೋಣ. 'ರಾಷ್ಟ್ರ' ಮತ್ತು 'ಅಭಿವೃದ್ಧಿ'ಯ ನಡುವಿನ ನಂಟನ್ನು ಸಾಬೀತುಪಡಿಸುವಂತೆ ಆ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಭಾರತದ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ಹೂಡಿಕೆಗೆ ತೆರವುಗೊಳಿಸುತ್ತಿರುವಾಗಲೇ ಆಗಿನ ವಿರೋಧ ಪಕ್ಷವಾದ ಬಲಪಂಥೀಯ ಭಾರತೀಯ ಜನತಾ ಪಕ್ಷ ವಿಷಪೂರಿತ ಹಿಂದೂತ್ವವಾದವೆಂಬ ರಾಷ್ಟ್ರೀಯತಾ ಸಿದ್ಧಾಂತವನ್ನು ಪ್ರಚುರಪಡಿಸುತ್ತಿತ್ತು. ಆ ಆಂದೋಲನದ ನಾಯಕ ಎಲ್.ಕೆ. ಅಡ್ವಾಣಿ ದೇಶದಾದ್ಯಂತ ಸುತ್ತಾಡಿ ಮುಸಲ್ಮಾನರ ವಿರುದ್ಧದ ಭಾವನೆಯನ್ನು ಉದ್ರೇಕಗೊಳಿಸಿದರಲ್ಲದೆ ಅಯೋಧ್ಯೆಯಲ್ಲಿದ್ದ 16 ನೇ ಶತಮಾನದ ಬಾಬ್ರಿ ಮಸೀದಿಯನ್ನು ಕೆಡವಿ ಅದರ ಜಾಗದಲ್ಲಿ ರಾಮಮಂದಿರವನ್ನು ಸ್ಥಾಪಿಸಬೇಕೆಂದು ಕರೆ ಕೊಟ್ಟರು. ಅವರಿಂದ ಪ್ರಚೋದಿತರಾದ ಗುಂಪುಗಳು 1992 ರಲ್ಲಿ ಆ ಮಸೀದಿಯನ್ನು ಕೆಡವಿದರು. ತಾನು ಹುಟ್ಟು ಹಾಕಿದ್ದ ಕೋಮುದ್ವೇಷದ ಅಲೆಯನ್ನೇ ಅವಲಂಬಿಸಿ 1984 ರಲ್ಲಿ ಕೇವಲ ಎರಡು ಸ್ಥಾನಗಳನ್ನು ಪಡೆದಿದ್ದ ಬಿಜೆಪಿ 1998 ರಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಿತು.



ಒಂದೇ ಸಂದರ್ಭದಲ್ಲಿ ಇತ್ತ ಹಿಂದೂತ್ವವಾದ ಹೆಚ್ಚಾಗಿದ್ದೂ, ಆಗ ಅಮೆರಿಕ ಇನ್ನು ಮುಂದೆ ತನ್ನ ವೈರಿ ಕಮ್ಯುನಿಸಂ ಅಲ್ಲ, ಬದಲಾಗಿ ಇಸ್ಲಾಮ್ ಎಂದು ಪರಿಗಣಿಸಲಾರಂಭಿಸಿದ್ದೂ ಕಾಕತಾಳೀಯವಲ್ಲ. ಹಿಂದೊಮ್ಮೆ ಯಾವ ಮೂಲಭೂತವಾದಿ ಇಸ್ಲಾಮಿಕ್ ಮುಜಾಹಿದ್ದೀನ್‌ಗಳನ್ನು ಅಮೆರಿಕದ ಅಧ್ಯಕ್ಷ ರೋನಾಲ್ಡ್ ರೇಗನ್ ಶ್ವೇತಭವನಕ್ಕೆ ಆಹ್ವಾನಿಸಿ ಅವರನ್ನು ಅಮೆರಿಕದ ಸಂಸ್ಥಾಪಕರಿಗೆ ಹೋಲಿಸಿದ್ದರೋ ಅದೇ ಜನರನ್ನು ಭಯೋತ್ಪಾದಕರು ಎಂದು ಬಣ್ಣಿಸಲಾಯಿತು. ಅದೇ ಹೊತ್ತಿಗೆ ಭಾರತ ಸರ್ಕಾರ ಕೂಡ ಪ್ಯಾಲಸ್ಟೀನಿಯರೊಂದಿಗಿನ ತನ್ನ ಸ್ನೇಹವನ್ನು ಕಳಚಿಕೊಂಡು ಇಸ್ರೇಲಿನ 'ಸಹಜ ಮಿತ್ರ' ಆಯಿತು. ಇವತ್ತು ಭಾರತ ಮತ್ತು ಇಸ್ರೇಲ್ ಜಂಟಿ ಸೇನಾ ಕಾರ್ಯಾಚರಣೆಗಳನ್ನು ನಡೆಸುತ್ತವಲ್ಲದೆ ಪ್ರಾಯಶಃ ಆಕ್ರಮಿತ ಪ್ರದೇಶಗಳಲ್ಲಿ ಹೇಗೆ ಆಡಳಿತ ನಡೆಸಬೇಕೆಂದು ಮಾಹಿತಿಗಳನ್ನು ಹಂಚಿಕೊಳ್ಳುತ್ತಿರಬಹುದು.

1998 ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಅಲ್ಲಿಯತನಕ ವಿರೋಧಿಸುತ್ತಿದ್ದ ಖಾಸಗೀಕರಣ ನೀತಿಯನ್ನು ಅಪ್ಪಿಕೊಂಡಿತಲ್ಲದೆ, ತಾನೇ 'ಉದಾರೀಕರಣದ ಮೂಲಕ ಲೂಟಿ' ಎಂದು ಜರಿಯುತ್ತಿದ್ದ ಮುಕ್ತ ಮಾರುಕಟ್ಟೆ ಸಿದ್ಧಾಂತವನ್ನು ಕೊಂಡಾಡಿ ಎನ್ರಾನ್ ತರಹದ ಕಾರ್ಪೊರೇಟ್ ಕಂಪನಿಗಳ ಬೆಂಬಲಕ್ಕೆ ನಿಂತಿತು. (ಪ್ರಾತಿನಿಧಿಕ ಪ್ರಜಾಪ್ರಭುತ್ವಗಳಲ್ಲಿ ಚುನಾವಣೆಗಳನ್ನು ಗೆದ್ದ ನಂತರ ಮತದಾರರಿಗೆ ನೀಡಿದ್ದ ಭರವಸೆಗಳನ್ನು ನುಚ್ಚುನೂರಾಗಿಸುವ ಸ್ವಾತಂತ್ರ್ಯ ಜನಪ್ರತಿನಿಧಿಗಳಿಗಿರುತ್ತದೆ).

ಅಧಿಕಾರ ವಹಿಸಿಕೊಂಡ ಕೆಲ ವಾರಗಳಲ್ಲಿ ಬಿಜೆಪಿ ಅಣುಬಾಂಬ್‌ಗಳನ್ನು ಸ್ಫೋಟಿಸಿತು. ಆ ಪ್ರಯೋಗಗಳನ್ನು ಅದೆಂತಹ ರಾಷ್ಟ್ರೀಯತಾ ಭಾವನೆಯ ಗೆಲುವಿನಂತೆ ಸ್ವೀಕರಿಸಲಾಯಿತೆಂದರೆ ರಾಜಕೀಯ ಚರ್ಚೆಯ ಮುಖ್ಯವಾಹಿನಿಗೆ ದ್ವೇಷಭರಿತ ಮತ್ತು ಆಕ್ರಮಣಕಾರಿ ಪರಿಭಾಷೆಯನ್ನು ಪರಿಚಯಿಸಿತು. ಅವತ್ತಿನಿಂದ ಕಾರ್ಪೊರೇಟ್ ಜಾಗತೀಕರಣದಂತೆ ಹಿಂದೂ ಕೋಮುವಾದ ಮತ್ತು ಅಣುಶಕ್ತಿ ರಾಷ್ಟ್ರೀಯವಾದ ರಾಜಕೀಯ ಪಕ್ಷಗಳ ಘೋಷಿತ ಸಿದ್ಧಾಂತಗಳನ್ನು ಲಂಘನೆ ಮಾಡಿದೆ. ಆ ವಿಷ ನಮ್ಮ ರಕ್ತದ ಹರಿವಿಗೆ ನೇರವಾಗಿ ಚುಚ್ಚಿ ತುಂಬಲಾಗಿದೆ. ಅದೀಗ ತನ್ನ ಎಲ್ಲ ಹಿಂಸೆ ಮತ್ತು ಸರ್ವಸಾಮಾನ್ಯತೆಯೊಂದಿಗೆ ಎಲ್ಲೆಡೆ ಇದೆಯಲ್ಲದೆ, 'ಜಾತ್ಯತೀತ' ಎಂದು ಕರೆದುಕೊಳ್ಳುವ ಪಕ್ಷ ಅಧಿಕಾರದಲ್ಲಿದ್ದರೂ ನಾವು ನಿತ್ಯಜೀವನದಲ್ಲೂ ಅದರೊಂದಿಗೆ ಸೆಣಸಬೇಕಾಗಿದೆ. ಒಂದು ದೇಶದ ಬದುಕಿನಲ್ಲಿ ಕೆಲ ಪ್ರಕರಣಗಳು ನಡೆದಾಗ ಸಾಮಾನ್ಯ ಜನರಿಗೆ ಪರದೆಯನ್ನು ಸರಿಸಿ ಭವಿಷ್ಯದಲ್ಲಿ ಏನು ಕಾದಿದೆ ಎಂದು ನೋಡುವ ಅವಕಾಶವನ್ನು ನೀಡುತ್ತದೆ. 1998 ರಲ್ಲಿ ನಡೆದ ಅಣುಬಾಂಬ್ ಸ್ಫೋಟ ಅಂತಹ ಪ್ರಕರಣಗಳಲ್ಲಿ ಒಂದು. ಅದು ನಡೆದಾಗ ಭಾರತ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂದು ಹೇಳಲು ಭವಿಷ್ಯವನ್ನು ನುಡಿಯುವ ಕಲೆ ಬೇಕಿರಲಿಲ್ಲ.

*****

2002 ರಲ್ಲಿ ಗುಜರಾತಿನ ಗೋಧ್ರಾ ರೈಲು ದುರಂತ ಸಂಭವಿಸಿದ ನಂತರ ಮುಖ್ಯಮಂತ್ರಿ ನರೇಂದ್ರ ಮೋದಿಯ ನೇತೃತ್ವದಲ್ಲಿ ಆ ರಾಜ್ಯದ ಮುಸಲ್ಮಾನರ ಮಾರಣಹೋಮ ನಡೆಯಿತು. 2001 ರ ಸೆಪ್ಟೆಂಬರ್ 11 ರಂದು ಅಮೆರಿಕದ ಮೇಲಾದ ದಾಳಿಯ ನಂತರ ಜಗತ್ತಿನೆಲ್ಲೆಡೆ ಉದ್ಭವಿಸಿದ 'Islamophobia' ಗುಜರಾತಿನ ಕೊಲೆಗಡುಕರ ನೆರವಿಗೆ ಬಂತು. ಜಗತ್ತಿನ ಅಚ್ಚುಮೆಚ್ಚಿನ ಪ್ರಜಾಪ್ರಭುತ್ವ ಭಾರತದಲ್ಲಿನ ಮುಸಲ್ಮಾನರಿಗೆ ಎಚ್ಚರಿಕೆಯನ್ನು ನೀಡಲಾಯಿತು.

ಈ ಹತ್ಯಾಕಾಂಡದ ನಂತರ ಶೀಘ್ರ ಚುನಾವಣೆಗಳಿಗೆ ಮೋದಿ ಒತ್ತಾಯಿಸಿದ. ಅದರಲ್ಲಿ ಗೆದ್ದೂ ಬಂದ. ಐದು ವರ್ಷಗಳ ನಂತರ ಮತ್ತೆ ಗೆದ್ದ ಮೋದಿ ಈಗ ಮೂರನೆ ಬಾರಿಗೆ ಮುಖ್ಯಮಂತ್ರಿಯಾಗಿದ್ದಾನೆ. ಅಷ್ಟೇ ಅಲ್ಲ, ಮುಕ್ತ ಮಾರುಕಟ್ಟೆಯಲ್ಲಿ ಅಪಾರ ನಂಬಿಕೆ ಹೊಂದಿರುವ ಮೋದಿ ಈಗ ಕಾರ್ಪೊರೇಟ್ ಕಂಪನಿಗಳ ಮೆಚ್ಚುಗೆಯನ್ನು ಪಡೆದಿದ್ದಾನೆ. ಇದನ್ನ 'ರಾಷ್ಟ್ರೀಯವಾದ' ಮತ್ತು 'ಅಭಿವೃದ್ಧಿ' ನಡುವಿನ ನಂಟು ಎಂದೂ ಭಾವಿಸಬಹುದು. ಅಥವಾ 'ಫ್ಯಾಸಿಸಂ' ಮತ್ತು 'ಮುಕ್ತ ಮಾರುಕಟ್ಟೆ'ಯ ನಡುವಿನ ನಂಟು ಎಂದೂ ಭಾವಿಸಬಹುದು.

2009 ರಲ್ಲಿ ಈ ನಂಟಿಗೆ ಸಾರ್ವಜನಿಕ ಸಭೆಯೊಂದರಲ್ಲಿ ಅಧಿಕೃತ ಮುದ್ರೆ ಬಿತ್ತು. 'ಗುಜರಾತಿನ ಹೆಮ್ಮೆ' ಎಂಬ ಪ್ರಶಸ್ತಿಯನ್ನು ಪಡೆದ ಟಾಟಾ ಕಂಪನಿಯ ರತನ್ ಟಾಟಾ ಮತ್ತು ರಿಲಯನ್ಸ್ ಕಂಪನಿಯ ಮುಖೇಶ್ ಅಂಬಾನಿ ಗುಜರಾತಿನ ಹತ್ಯಾಕಾಂಡಕ್ಕೆ ಕಾರಣನಾಗಿದ್ದ ಮೋದಿಯನ್ನು ಅಭಿವೃದ್ಧಿಯ ಹರಿಕಾರ ಎಂದು ಕೊಂಡಾಡಿದರಲ್ಲದೆ ಆತ ಈ ದೇಶದ ಪ್ರಧಾನಿಯಾಗಲೂ ಸೂಕ್ತ ವ್ಯಕ್ತಿ ಎಂದು ಘೋಷಿಸಿದರು.

*****

ಈಗತಾನೆ ಸುಮಾರು ಎರಡು ಬಿಲಿಯನ್ ಡಾಲರ್‌ಗಳ ವೆಚ್ಚದಲ್ಲಿ 2009 ರ ಚುನಾವಣೆಗಳು ಅಂತ್ಯಗೊಂಡಿದೆ. ಅದು ಅಮೆರಿಕದ ಚುನಾವಣಾ ಬಜೆಟ್‌ಗಿಂತ ದೊಡ್ಡ ಪ್ರಮಾಣದ್ದು. ಕೆಲ ಮಾಧ್ಯಮಗಳ ವರದಿಗಳ ಪ್ರಕಾರ ಕಳೆದ ಚುನಾವಣೆಗಳಲ್ಲಿ ನಿಜವಾಗಲೂ ವೆಚ್ಚವಾಗಿದ್ದು ಹತ್ತಿರಹತ್ತಿರ ಹತ್ತು ಬಿಲಿಯನ್ ಡಾಲರ್‌ಗಳಷ್ಟು. ಅಷ್ಟೊಂದು ಹಣ ಅದೆಲ್ಲಿಂದ ಬಂತು ಎಂದು ಕೇಳಬಹುದೇ?

ಕಾಂಗ್ರೆಸ್ ಮತ್ತದರ ಯುಪಿಎ ಮಿತ್ರಪಕ್ಷಗಳು ಬಹುಮತ ಪಡೆದಿವೆ. ಅಂದಹಾಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸ್ವತಂತ್ರ ಅಭ್ಯರ್ಥಿಗಳಲ್ಲಿ ಶೇ. 90 ಮಂದಿ ಸೋತರು. ಅದರರ್ಥ ಇಷ್ಟೇ: ಅಭ್ಯರ್ಥಿಯ ಹಿಂದೆ ಪ್ರಾಯೋಜಕರು ಇಲ್ಲದಿದ್ದರೆ ಗೆಲ್ಲುವುದು ಕಷ್ಟ. ಮಾತ್ರವಲ್ಲ ಸ್ವತಂತ್ರ ಅಭ್ಯರ್ಥಿಗಳಿಗೆ ಮತಗಳಿಗಾಗಿ ಟಿವಿ ಮತ್ತು ಹಣ ನೀಡಲಾಗುವುದಿಲ್ಲ, ಕಡಿಮೆ ದರದಲ್ಲಿ ಅಕ್ಕಿ ಹಂಚುತ್ತೇವೆ ಎಂದು ಹೇಳಲಾಗುವುದಿಲ್ಲ ಹಾಗೆಯೇ ಅಸಹ್ಯ ಹುಟ್ಟಿಸುವಂತಹ ದಾನಗಳನ್ನೂ ಚುನಾವಣೆ ಎಂಬ ಪ್ರಹಸನದಲ್ಲಿ ಮಾಡಲಾಗುವುದಿಲ್ಲ.

ಆದರೆ ಚುನಾವಣಾ ಫಲಿತಾಂಶ ಎಂಬ ಲೆಕ್ಕಾಚಾರದ ಹಿಂದಿರುವ ವಾಸ್ತವಾಂಶಗಳನ್ನು ಗಮನಿಸಿದಾಗ 'ಬಹುಮತ' ಎಂಬ ಪದಪ್ರಯೋಗ ಕಪಟವಾಗಿ ಕಾಣಿಸುತ್ತದೆಯಲ್ಲದೆ ಅದು ಅರ್ಥಹೀನ ಎಂದೂ ಗೊತ್ತಾಗುತ್ತದೆ. ಉದಾಹರಣೆಗೆ ಕಳೆದ ಚುನಾವಣೆಯಲ್ಲಿ ಯುಪಿಎ ಪಡೆದದ್ದು ದೇಶದ ಜನಸಂಖ್ಯೆಯ ಕೇವಲ ಶೇ. 10.3 ಮತಗಳನ್ನು!


ಅದೇನೇ ಇರಲಿ, ಆರ್ಥಿಕ ನೀತಿಯ ಬಗ್ಗೆ ಎಲ್ಲಾ ಪಕ್ಷಗಳೂ ಒಂದೇ ಸಿದ್ಧಾಂತವನ್ನು ಹೊಂದಿದ್ದರಿಂದ ಗೋವಿಂದಾಚಾರ್ಯ ಎಂಬ RSS ಸಿದ್ಧಾಂತಿ "ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿ ಸರ್ಕಾರವನ್ನು ರಚಿಸಬಹುದು" ಎಂದು ವ್ಯಂಗ್ಯವಾಡಿದ್ದ. ಆದರೆ ವಾಸ್ತವವಾಗಿ ಅದು ಈಗಾಗಲೇ ಹಲವು ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಉದಾಹರಣೆಗೆ ಛತ್ತೀಸಗಢದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಕಾಂಗ್ರೆಸ್ ನಾಯಕರು ಸರ್ಕಾರಿ ಯೋಜನೆಗಳನ್ನು ವಿರೋಧಿಸುವವರ ವಿರುದ್ಧ 'ಸಲ್ವಾ ಜುಡುಂ' ಎಂಬ ಸಂಘಟನೆಯನ್ನು ಹುಟ್ಟು ಹಾಕಿದ್ದಾರೆ. ಕಾಡಿನ ಒಡಲಾಳದಲ್ಲಿರುವ ಉಕ್ಕು, ತವರ, ಅದಿರು ಮತ್ತು ಇತರೆ ನೈಸರ್ಗಿಕ ಸಂಪತ್ತುಗಳನ್ನು ದೋಚಲು ಸಿದ್ಧವಾಗಿರುವ ಕಂಪನಿಗಳ ವಿರುದ್ಧ ಹೋರಾಡುತ್ತಿರುವ ಮಾವೋವಾದಿಗಳ ವಿರುದ್ಧ ಈ ಸಲ್ವಾ ಜುಡುಂ ಮತ್ತು ಸರ್ಕಾರ ಜೊತೆಗೂಡಿದೆ. ಅದರರ್ಥ ಛತ್ತೀಸಗಢದಲ್ಲಿ ದೇಶದ ಪ್ರಮುಖ ಎರಡು ವೈರಿ ಪಕ್ಷಗಳು ಕೈಜೋಡಿಸಿ ಭಾರತದ ಅತಿಬಡ ಸಮುದಾಯವಾದ ದಂಟೇವಾಡದ ಆದಿವಾಸಿಗಳ ವಿರುದ್ಧ ಯುದ್ಧ ಸಾರಿದೆ. ಈಗಾಗಲೆ 644 ಹಳ್ಳಿಗಳು ಖಾಲಿಯಾಗಿವೆ. ಐವತ್ತು ಸಾವಿರ ಜನ ಸಲ್ವಾ ಜುಡುಂ ನಡೆಸುತ್ತಿರುವ ನಿರಾಶ್ರಿತರ ಶಿಬಿರಗಳ ಪಾಲಾಗಿದ್ದಾರೆ. ಮೂರು ಲಕ್ಷ ಜನ ಕಾಡುಗಳಲ್ಲಿ ಅವಿತುಕೊಂಡಿದ್ದು ಅವರನ್ನು ಮಾವೋವಾದಿಗಳೆಂದೋ, ಮಾವೋವಾದಿಗಳ ಬೆಂಬಲಿಗರೆಂದೋ ಕರೆಯಲಾಗುತ್ತಿದೆ. ಯುದ್ಧ ಮುಂದುವರೆದಿದೆ ಮತ್ತು ಕಾರ್ಪೊರೇಟುಗಳು ಕಾಯುತ್ತಿವೆ.

ಗಮನಾರ್ಹ ವಿಷಯ ಯಾವುದೆಂದರೆ ಇತ್ತೀಚೆಗೆ ಎಲ್‌ಟಿಟಿಇಯ ತಮಿಳು ಹುಲಿಗಳನ್ನು ಸದ್ದುಬಡಿಯುವಲ್ಲಿ ಶ್ರೀಲಂಕಾದ ಸರ್ಕಾರ ನಡೆಸಿರಬಹುದಾದಂತಹ ಯುದ್ಧ ಅಪರಾಧಗಳನ್ನು ಅಂತರರಾಷ್ಟ್ರೀಯ ವಿಚಾರಣೆಗೆ ಒಳಪಡಿಸಬೇಕೆಂಬ ಯುರೋಪಿನ ಪ್ರಸ್ತಾಪವನ್ನು ತಡೆಯುವಲ್ಲಿ ಭಾರತ ಕೂಡ ಪಾತ್ರ ವಹಿಸಿತ್ತು. ಜಗತ್ತಿನ ಈ ಭಾಗದ ಸರ್ಕಾರಗಳು 'ಭಯೋತ್ಪಾದನೆ'ಯನ್ನು ನಿಗ್ರಹಿಸಲು ಗಾಜಾ ಪ್ರದೇಶದಲ್ಲಿ ಇಸ್ರೇಲ್ ಜಾರಿಗೆ ತಂದ ನೀಲನಕ್ಷೆಯ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಂಡಿವೆ. ಅದರ ಪ್ರಕಾರ: ಕೊಲೆಗೆ ಮುನ್ನ ಮಾಧ್ಯಮಗಳನ್ನು ಹೊರಗಿಡಬೇಕು. ಹಾಗೆ ಮಾಡಿದಾಗ ಯಾವ ಭಯೋತ್ಪಾದಕನನ್ನು ಅಥವಾ ಸಾಮಾನ್ಯನನ್ನು ನಿಖಾಲಿ ಮಾಡಿದರೂ ಚಿಂತೆ ಇಲ್ಲ. ಕೆಲ ಸಮಯ ಅಂತರರಾಷ್ಟ್ರೀಯ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತವೆ. ಆದರೆ ಅದು ಬಹಳ ಕಾಲ ಉಳಿಯುವಂತಹ ಕಾಳಜಿಯಲ್ಲ.

ರಾಜಕೀಯ ಪಕ್ಷಗಳ ನಡುವೆಯೇ ಒಮ್ಮತ ಇದ್ದುದರಿಂದ "ರಚನಾತ್ಮಕ ಸಹಯೋಗ"ದ ಬಗ್ಗೆ ಹುರುಪುಗೊಂಡ ಕಾರ್ಪೊರೇಟ್ ಕಂಪನಿಗಳು ಕಳೆದ ಚುನಾವಣೆಗಳ ಬಗ್ಗೆ ಉತ್ಸುಕವಾಗಿದ್ದವು. ತಮ್ಮ ಲೂಟಿಗೆ ಪ್ರಜಾಸತ್ತಾತ್ಮಕ ಮುದ್ರೆ ಬೀಳುವುದರ ಪ್ರಾಮುಖ್ಯತೆ ಅರಿತ ಆ ಕಂಪನಿಗಳು ಬಾಲಿವುಡ್‌ನ ಸ್ಟಾರ್‌ಗಳನ್ನು ಉಪಯೋಗಿಸಿಕೊಂಡು ಎಲ್ಲರೂ ಮತ ಚಲಾಯಿಸಬೇಕೆಂಬ ಜಾಹೀರಾತು ಆಂದೋಲನವನ್ನು ಟಿವಿ ಮತ್ತು ಪತ್ರಿಕೆಗಳಲ್ಲಿ ನಡೆಸಿದವು.

ದೆಹಲಿಯ ಪ್ರತಿಷ್ಠಿತ ಖಾನ್ ಮಾರ್ಕೆಟ್‌ನಲ್ಲಿ ಕೆಲ ಅಂಗಡಿ ಮತ್ತು ಹೋಟೆಲ್‌ಗಳು ಮತ ಚಲಾಯಿಸಿದ ಗುರುತನ್ನು ತೋರಿಸಿದರೆ ವಿಶೇಷ ರಿಯಾಯಿತಿಗಳನ್ನು ನೀಡಿದವು. ಇಂತಹ ತರ್ಕಗಳಿಂದಾಗಿ ಪ್ರಜಾಪ್ರಭುತ್ವ ಎಂಬುದೇ ಒಂದು ಫ್ಯಾಷನ್ ಆಯಿತು. ಅದು ಹೇಗೆ ಎಂದರೆ: ಚೈನಾದಲ್ಲಿ ಕ್ರೀಡೆಗೆ ಪ್ರಾಮುಖ್ಯತೆ ಇರುವುದರಿಂದ ಅವರು ಒಲಂಪಿಕ್ಸ್ ಅನ್ನು ಆಯೋಜಿಸಿದರು. ಹಾಗೆಯೇ ಇಲ್ಲಿ ಪ್ರಜಾಪ್ರಭುತ್ವ ಇರುವುದರಿಂದ ಇಲ್ಲಿ ಚುನಾವಣೆಗಳನ್ನು ಆಯೋಜಿಸಲಾಗಿದೆ. ಈ ಎರಡರ ಹಿಂದೆ ಅಪಾರ ಬಂಡವಾಳ ಹೂಡಿದ ಪ್ರಾಯೋಜಕರಿದ್ದು ಎರಡೂ ಟಿವಿ ಪರದೆಗಳ ಮೇಲೆ ವೀಕ್ಷಿಸುವ ಪ್ರೇಕ್ಷಕ ಸ್ನೇಹಿ ಕ್ರೀಡೆಗಳಾದವು.

ಭಾರತದ ಚುನಾವಣೆಯನ್ನು ವೀಕ್ಷಿಸಿ ವರದಿ ಮಾಡಲು ಬಿಬಿಸಿ ಸಂಸ್ಥೆ ಒಂದು ರೈಲುಬೋಗಿಯನ್ನೇ ಮೀಸಲಿಟ್ಟಿತ್ತು. ಆ ರೈಲು ಬೋಗಿಯ ಹೊರಗಡೆ ಒಂದು ಘೋಷಣೆಯನ್ನು ಪ್ರಕಟಿಸಲಾಗಿತ್ತು. ಅಮೆರಿಕದ ಮಾಜಿ ಅಧ್ಯಕ್ಷ ಬೆನ್ ಫ್ರಾಂಕ್ಲಿನ್‌ನ ಛಾಯಾಚಿತ್ರವನ್ನು ಹೊಂದಿರುವ ನೂರು ಡಾಲರ್ ನೋಟು ನಿಧಾನವಾಗಿ ಗಾಂಧಿಯ ಭಾವಚಿತ್ರವನ್ನು ಹೊಂದಿರುವ ಐನೂರು ರೂಪಾಯಿ ನೋಟಿಗೆ ಪರಿವರ್ತನೆಗೊಳ್ಳುತ್ತಿರುವ ಚಿತ್ರದೊಂದಿಗೆ ಪ್ರಕಟಿಸಲಾಗಿದ್ದ ಆ ಘೋಷಣೆ ಹೀಗಿತ್ತು: "ಭಾರತೀಯ ವೋಟುಗಳು ಜಗತ್ತಿನ ನೋಟುಗಳನ್ನು ರಕ್ಷಿಸುತ್ತವೆಯೇ?" ಹೀಗೆ ನಾಚಿಕೆಗೇಡಿನ ಮತ್ತು ಮುಜುಗರವಿಲ್ಲದ ರೀತಿಯಲ್ಲಿ ಭಾರತದ ಮತಗಳನ್ನು ಒಂದು ಮಾರುಕಟ್ಟೆಯಾಗಿ, ಮತದಾರರನ್ನು ಗ್ರಾಹಕರನ್ನಾಗಿ, ಪ್ರಜಾಪ್ರಭುತ್ವವನ್ನು ಮುಕ್ತ ಮಾರುಕಟ್ಟೆಯನ್ನಾಗಿ ಪರಿವರ್ತಿಸಲಾಯಿತು. ಆದ್ದರಿಂದ: ಈ ವ್ಯವಸ್ಥೆಯಲ್ಲಿ ಗ್ರಾಹಕರಾಗದವರು ಲೆಕ್ಕಕ್ಕೆ ಇಲ್ಲ.



ತನ್ನ ಆರ್ಥಿಕ ನೀತಿಗಳಿಂದಾಗಿರುವ ಅನಾಹುತಗಳನ್ನು ತಗ್ಗಿಸಲು ಕಳೆದ ಬಾರಿ ಕಾಂಗ್ರೆಸ್ ಪಕ್ಷ ಮೂರು ಕಾನೂನುಗಳನ್ನು ಜಾರಿಗೊಳಿಸಿತು. ಅವುಗಳಲ್ಲಿ ಮುಖ್ಯವಾದದ್ದು NREGA. ಇದರ ಪ್ರಕಾರ ಪ್ರತಿ ಗ್ರಾಮೀಣವಾಸಿ ಬಡ ಸಂಸಾರಕ್ಕೆ ಕನಿಷ್ಠ ವೇತನದಲ್ಲಿ ಪ್ರತಿ ವರ್ಷ ನೂರು ದಿನಗಳ ಕೂಲಿ ನೀಡಲಾಗುತ್ತದೆ. ಅದರಂತೆ ವರ್ಷಕ್ಕೆ ಸುಮಾರು 8000 ರೂಪಾಯಿಗಳನ್ನು ಪ್ರತಿ ಸಂಸಾರ ಪಡೆಯಬಹುದು. (ಇಷ್ಟು ಹಣವನ್ನು ಸಾಹುಕಾರರು ಹೋಟೆಲ್ಲಿನ ಒಂದು ಊಟಕ್ಕೆ ವೆಚ್ಚ ಮಾಡುತ್ತಾರೆ). ಹಾಗೆ ನೋಡಿದಾಗ, ಈ ಹಣ ಸಾಹುಕಾರರ ಊಟದ ಮೇಜಿನಿಂದ ಉದುರಿದ ತುಣುಕುಗಳಂತೆ ಭಾಸವಾಗುತ್ತವೆ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ತಮ್ಮ ಭೂಮಿ ಮತ್ತು ಬದುಕನ್ನೇ ಕಳೆದುಕೊಂಡಿರುವ ಜನ ಅಂತಹ ತುಣುಕುಗಳನ್ನೇ ಅವಲಂಬಿಸಿದ್ದಾರೆಂದರೆ ಅವರ ಬದುಕು ಇನ್ನೆಷ್ಟು ನರಕಸದೃಶವಾಗಿರಬಹುದೆಂದು ಊಹಿಸಿ. ಅಂದಹಾಗೆ ಮೇಜಿನ ಮೇಲಿಂದ ಉದುರಿದ ಈ ತುಣುಕುಗಳ ವಿರು[...] ಚಕಾರವೆತ್ತಲು ನಮ್ಮಲ್ಲಿ ಯಾರಿಗಾದರೂ ಮನಸ್ಸಾಗ[...] ಹಕ್ಕಾಗಲಿ ಇದೆಯೇ? ಏನೂ ಇಲ್ಲದಿರುವವರಿಗೆ [...] ತುಣುಕುಗಳಾದರೂ ಸಿಗಲಿ ಎಂಬ ನಿಲುವು ಚುನಾವಣೆಗ[...] ಇಲ್ಲದಂತಹ ಪರಿಸ್ಥಿತಿಗಿಂತ ಅರ್ಥಹೀನ ಚುನಾವ[...] ಗಳಾದರೂ ವಾಸಿ ಎಂಬ ನಿಲುವಿಗೆ ಸಮಾನವಲ್ಲವೇ[...] NREGA ಯಿಂದ ಸಿಗುವ ತುಣುಕುಗಳಾದರ[...] ಬಡಬಗ್ಗರಿಗೆ ಸಿಗಲೆಂದು ನೋಡಿಕೊಳ್ಳುವುದರಲ್[...] ಹಲವಾರು ಸಾಮಾಜಿಕ ಸಂಘಟನೆಗಳ ಸಮಯ[...] ವ್ಯರ್ಥವಾಗಿದೆ. ಎಷ್ಟರಮಟ್ಟಿಗೆಂದರೆ ಭ್ರಷ್ಟ ಅಧಿಕಾರಿಗ[...] ಮತ್ತು ದಳ್ಳಾಳಿಗಳು ಮಧ್ಯಸ್ಥಿಕೆ ವಹಿಸುವುದರಿಂದ ಹೊರ[...] ಮತ್ತು ಜೀವ ಬೆದರಿಕೆಗಳನ್ನು ಎದುರಿಸಿದ್ದಾ[...] ಜಾರ್ಖಂಡದ ಓರ್ವ ಸಮಾಜ ಸೇವಕ ಇದೆಲ್ಲದ[...] ವಿರುದ್ಧದ ಕೋಪ ಮತ್ತು ನಿಸ್ಸಹಾಯಕತೆಯಿಂದ ತ[...] ದೇಹಕ್ಕೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂ[...]

ವಿಪರ್ಯಾಸದ ಸಂಗತಿ ಯಾವುದೆಂದರೆ ಯಾ[...] NREGA ಕಾನೂನು ಎಡಪಕ್ಷಗಳ ಮತ್ತು ಸೋನಿಯ[...] ಗಾಂಧಿಯವರ ಮುತುವರ್ಜಿಯಿಂದ ಜಾರಿಗೆ ಬಂದಿತೋ[...] ಅದೇ ಕಾನೂನು ಆ ಪಕ್ಷವನ್ನು ಮತ್ತೆ ಅಧಿಕಾರ[...] ತಂದಿದ್ದರೂ ಈಗ ಕಾರ್ಪೊರೇಟ್ ಕಂಪನಿಗಳು [...] ಜಯವನ್ನು ತಮ್ಮದು ಎಂದು ಬಣ್ಣಿಸುತ್ತಿರುವುದು.

ಅದಕ್ಕಿಂತಲೂ ಮುಖ್ಯ ವ್ಯಂಗ್ಯ ಇನ್ನೊಂದಿದೆ: [...] ಚುನಾವಣಾ ರಾಜಕೀಯ ಪಕ್ಷಗಳಂತೆ ಕುತಂತ್ರವನ್[...] ಮೈಗೂಡಿಸಿಕೊಂಡಿರುವ ಎಡಪಕ್ಷಗಳು ಕೂಡ ಬ[...] ಪಂಥೀಯವಾದದತ್ತ ತಿರುಗಿದ್ದು. ಕೇಂದ್ರದ ಆರ್ಥಿ[...] ನೀತಿಗಳನ್ನು ಟೀಕಿಸುತ್ತಲೇ ಅದೇ ನೀತಿಗಳನ್ನು ತ[...] ನೆಲವಾದ ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲೆತ್ನಿಸಿದವ[...] ನಂದಿಗ್ರಾಮದಲ್ಲಿ ಒಂದು ಕೆಮಿಕಲ್ ಕೇಂದ್ರವನ್[...] ಸಿಂಗೂರಿನಲ್ಲಿ ಟಾಟಾ ಫ್ಯಾಕ್ಟರಿಯನ್ನು, ಲಾಲ್‌ಗಢದ[...] ಜಿಂದಾಲ್ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದ[...] ಘೋಷಿಸಿತು. ಅದರಂತೆ ಬಂದೂಕುಗಳನ್ನು ತೋರಿ[...] ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿತ[...] ಅದನ್ನು ಪ್ರತಿಭಟಿಸಿ ಹುಟ್ಟಿದ ಬೃಹತ್ ಜನಹೋರಾ[...] ಗಳನ್ನು ಬುಲೆಟ್ ಮತ್ತು ಲಾಠಿಗಳ ಮೂಲಕ ಸದ್ದುಬ[...] ಯಲೆತ್ನಿಸಿತು. ಪಕ್ಷದ ಪುಂಡರು ಪ್ರತಿಭಟನಾಕಾರರ ಮೇ[...] ದಾಳಿಗಳನ್ನು ಮಾಡಿದರಲ್ಲದೆ ಮಹಿಳೆಯರ ಮೇ[...] ಅತ್ಯಾಚಾರವೆಸಗಿದರು. ಅಮಾಯಕರನ್ನ ಕೊಂದರು. ಆದ[...] ಕೊನೆಗೆ ನೈಜವಾದ ಜನ ಹೋರಾಟ ಮತ್ತು ಉಗ್ರಗಾಮಿ[...] ನಿಲುವು ಗೆದ್ದಿತು. ಜನಾಭಿಪ್ರಾಯ ಮೇಲುಗೈ ಸಾಧಿಸಿತು[...] ಎಲ್ಲ ಮೂರು ಯುದ್ಧಗಳನ್ನು ಜನತೆ ಗೆದ್ದು ಸರ್ಕಾ[...] ಹಿಂದೆ ಸರಿಯುವಂತೆ ಮಾಡಿತು. ಫ್ಯಾಸಿಸಂ[...] ಪ್ರಯೋಗಾಲಯವಾದ ಗುಜರಾತಿಗೆ ಟಾಟಾನ ನ್ಯಾನೋ[...] ಕಾರ್ ಯೋಜನೆ ಸ್ಥಳಾಂತರಗೊಂಡಿತು. ಕಳೆದ 30 ವರ್[...] ಪಶ್ಚಿಮ ಬಂಗಾಳವನ್ನು ಆಳಿರು[...] ಎಡಪಕ್ಷಗಳು ಕಳೆದ ಚುನಾವಣೆಯ[...] ಇನ್ನಿಲ್ಲದಂತಹ ಸೋಲು ಕಂಡವು. [...] ವಿಪರ್ಯಾಸ ಇಲ್ಲಿಗೇ ಅಂತ್ಯಗೊಳ್ಳುವುದಿಲ್[...] ಕೈಚಳಕದಂತೆ ಎಡಪಕ್ಷಗಳ ಸೋಲನ್[...] ಅವುಗಳ ವಿಳಂಬ ನೀತಿ ಮತ್ತು ಅಭಿವೃ[...] ವಿರೋಧಿ ನೀತಿಗಳಿಗೆ ಆರೋಪಿಸಲಾಗು[...]ತ್ತಿದೆ! ಸ್ಟಾಕ್ ಮಾರ್ಕೆಟ್ಟು ಮತ್ತು ಟಿ[...] ಚಾನೆಲ್‌ಗಳು ಎಡಪಕ್ಷಗಳಿಂದ ಕಾಂಗ್ರೆಸ್[...] 'ಬಿಡುಗಡೆ' ಹೊಂದಿದ್ದನ್ನು ಸಂಭ್ರಮಿಸಿ[...]

ಪ್ರಜಾಪ್ರಭುತ್ವದ 'ಸೌಂದರ್ಯ[...] ಇದೇನೆ. ಇದರಲ್ಲಿ ನಿಮಗೆ ಬೇಕಿರು[...] ಅರ್ಥವನ್ನು ನೀವು ಹುಡುಕಿಕೊಳ್ಳಬಹುದು[...]

ರಾಜಕೀಯ ಮುಖ್ಯವಾಹಿನಿಯ[...] ನೈಜವಾದ ಎಡಪಕ್ಷಗಳ ಗೈರುಹಾಜರಾತಿಯನ್[...] ಸಂಭ್ರಮಿಸಲಾಗುವುದಿಲ್ಲ. ಆದರೆ ಇವತ್ತಿನ ಅವಮಾನಕ[...] ಸ್ಥಿತಿಗೆ ಚುನಾವಣಾ ರಾಜಕೀಯದಲ್ಲಿ ತೊಡಗಿಸಿಕೊಂಡಿರು[...] ಎಡಪಕ್ಷಗಳೇ ಹೊಣೆ. ಇದರಿಂದಲಾದರೂ ಅವುಗಳ[...] ಪಾಠ ಕಲಿತುಕೊಂಡು ಪ್ರಗತಿಪರ ರಾಜಕೀಯವನ್[...] ಅವಲಂಬಿಸುವಂತಾಗಲಿ.

ಚರ್ಚೆಯ ಕಾರಣಕ್ಕಾಗಿ ಒಂದುಕ್ಷಣ ನಾವು ಭಾರತ[...] ಮಿಲಿಯನ್‌ಗಟ್ಟಲೆ ಮತದಾರರು ಮಾರುಕಟ್ಟೆಯ[...] ಸುಧಾರಣೆ ಪರವಾಗಿಯೇ ಮತ ಚಲಾಯಿಸಿದರು ಎಂಬ[...] ಕಾರ್ಪೊರೇಟ್ ಕಂಪನಿಗಳ ವಾದವನ್ನೇ ಒಪ್ಪಿಕೊಳ್ಳೋಣ[...] ಅದು ಶುಭ ಸುದ್ದಿಯೋ ಅಥವಾ ಅಶುಭ ಸುದ್ದಿಯೋ[...] ಈ ಜಗತ್ತಿಗೆ ಪಾಠ ಹೇಳಿಕೊಡಬಲ್ಲ, ತಮ್ಮದೇ ಆ[...] ಜೀವನಕ್ರಮದ ಕಲ್ಪನೆಯನ್ನು ಹೊಂದಿರುವ, ಸಮರ್ಥನೀಯ[...] ಜೀವನ ಶೈಲಿಯನ್ನು ಹೊಂದಿರುವ ಜನರೇ ಈಗಾಗಲ[...] ಸೋತಿರುವ 'ಮಾರುಕಟ್ಟೆಯೇ ಅಂತಿಮ' ಎಂಬ ಸಿದ್ಧಾಂ[...] ವನ್ನು ಒಪ್ಪಿಕೊಂಡಿದ್ದಾರೆಂದು, ಎಂದೂ ಚೇತರಿಸಿಕೊ[...] ದಂತಹ ಪರಿಸ್ಥಿತಿಗೆ ಈ ಜಗತ್ತನ್ನು ದೂಡಿರುವ ಸಿದ್ಧಾಂತವನ್[...] ಸ್ವೀಕರಿಸಿದ್ದಾರೆಂದು ಒಪ್ಪಿಕೊಳ್ಳುವುದಾದರೂ ಹೇಗೆ?


ಕಾಡುಗಳೇ ಸರ್ವನಾಶವಾದ ನಂತರ ಕಾಡುಗ[...] ಕುರಿತ ಕಾನೂನು ಯಾವ ಲೆಕ್ಕಕ್ಕೆ? ನಮ್ಮ ಅಹವಾಲನ್[...] ಕೇಳಿಸಿಕೊಳ್ಳಲು ಯಾರೂ ಇಲ್ಲದಿರುವಾಗ ಮಾಹಿ[...] ಹಕ್ಕು ಕಾನೂನು ಯಾತಕ್ಕೆ? ನೀರಿಲ್ಲದ ನದಿಗಳು ಯಾತ[...] ನೀರನ್ನು ಹಿಡಿದು ನದಿಗಳನ್ನು ಹರಿಸುವ ಬೆಟ್ಟಗಳ[...]

▶▶▶1

...ದಿಯಲಿರುವ ಭೂಮಿಗೆ ಸರ್ಕಾರಿ ಖರ್ಚಿನಲ್ಲಿ ರಸ್ತೆ!

ಕಳೆದ ಜೂನ್ 25 ರಂದು ಮುಖ್ಯಮಂತ್ರಿ ಯಡಿಯೂರಪ್ಪ 'ಸುಗಮ ಸಂಚಾರಕ್ಕೆ 6 ರಹದಾರಿಗಳು' ಎಂದು ಒಟ್ಟು 240 ...ೋಟಿ ರೂಪಾಯಿಗಳ ರಸ್ತೆ ಕಾಮಗಾರಿ ಅನೌನ್ಸ್ ಮಾಡಿದ್ದಾರೆ. ಹೆಬ್ಬಾಳದಿಂದ ಶುರುವಾಗುವ ಈ ಹೊರವರ್ತುಲ ರಸ್ತೆ ...ರಣ್ಣನ ಪಳ್ಯ, ಹೆಣ್ಣೂರು, ಕಲ್ಯಾಣನಗರ ಹಾಗೂ ದೇವರಬಿಸನಹಳ್ಳಿ, ಬೆಳ್ಳಂದೂರು ಮೂಲಕ ಎಚ್.ಎಸ್.ಆರ್. ಲೇಔಟಿಗೆ ...ಂದು ಸೇರುವಂತೆ ಬಿಡಿಎ ಪ್ಲ್ಯಾನ್ ರೂಪಿಸಿದೆ. ಆಶ್ಚರ್ಯ ಅಂದರೆ ಲಿಂಬಾವಳಿ ಅಂಡ್ ಚಾಕೂ ರೆಡ್ಡಿ ನುಂಗಲು ಹೊರಟಿರುವ ...ಡತಿ ಸರ್ವೆ ನಂ. 82,83 ಇತ್ಯಾದಿ ಜಮೀನು ಇದಕ್ಕೆ ಹತ್ತಿರದಲ್ಲಿದೆ.

ಅಂದರೆ ತಾವು ಲಪಟಾಯಿಸಲಿರುವ ಸರ್ಕಾರಿ ಜಮೀನಿಗೆ ಈಗಲೇ ಒಳ್ಳೆಯ ರಸ್ತೆ ಸಂಪರ್ಕ ಸಿಗುವಂತೆ ಈ ಭೂಗಳ್ಳರು ...ವಸ್ಥೆ ಮಾಡಿಕೊಂಡುಬಿಟ್ಟಿದ್ದಾರೆ.



100 ಕೋಟಿ ರೂಪಾಯಿ ಹಗರಣ

ಭೂಗಳ್ಳ ಲಿಂಬಾವಳಿ

...ಹುಟ್ಟಾ ದೇಶಭಕ್ತ ರಾಜ್ಯ ಬಿಜೆಪಿಯ ಯುವ ನೇತಾರ, ...ಉನ್ನತ ಶಿಕ್ಷಣ ಸಚಿವ ಶ್ರೀಮಾನ್ ಅರವಿಂದ ...ಬಾವಳಿಯವರ ದಿನಚರಿ ಏನೆಂದು ನಿಮಗೆ ಗೊತ್ತಾ?

.........!!

...ಬೇರೆ ಏನೂ ಇಲ್ಲ, ಬೆಂಗಳೂರು ಸಿಟಿಯಲ್ಲಿ ಹಾಗೂ ...ಮು ಹೊರವಲಯದಲ್ಲಿ ಎಲ್ಲೆಲ್ಲಿ ಸರ್ಕಾರಿ ಭೂಮಿ ಇದೆ, ...ವುದಕ್ಕೆ ಬೇಲಿ ಸುತ್ತಬೇಕು, ಯಾವುದನ್ನು ಗುಳುಂ ಮಾಡಬೇಕು ... ದಿನಬೆಳಗಾದರೆ ಸ್ಕೆಚ್ ಹಾಕುವುದೇ ಈ ಲಿಂಬಾವಳಿ ...ಾಶಯರ ನಿತ್ಯ ಕಾಯಕ.

ಅಂಥಾದ್ದೊಂದು ಭೂಗಳ್ಳತನದ ಎಫ್ಐಆರ್ ಇಲ್ಲಿದೆ. ...ಈ ಹಗರಣ ಮೂವತ್ತು ಎಕರೆ ಸರ್ಕಾರಿ ಜಾಗದ್ದು!

...ಇದರ ಇವತ್ತಿನ ಬೆಲೆ ನೂರು ಕೋಟಿ ...ಪಾಯಿಗಳು!!



...ಬಾವಳಿ ಭಂಟ ಚಾಕು ಶ್ರೀನಿವಾಸ ...ಬೆಂಗಳೂರಿನ ವರ್ತೂರು-...ದೂರು ಏರಿಯಾದಲ್ಲಿ ಕುಡತಿ ...ಿ ಇದೆ. ಇದರ ಸುತ್ತಮುತ್ತ ಸರ್ವೆ ...ರ್ 76, 82, 83 ರಲ್ಲಿ ಸುಮಾರು ...ವತ್ತು ಎಕರೆಯಷ್ಟು ಸರ್ಕಾರಿ ಭೂಮಿ

...ಚಿವ ಅರವಿಂದ ಲಿಂಬಾವಳಿ ಈ ...ರಿ ಭೂಮಿ ನುಂಗಲು ಮಾಸ್ಟರ್ ... ಒಂದನ್ನು ರೆಡಿ ಮಾಡಿಕೊಂಡು ...ದ್ದಾರೆ. ಇದೇ ಏರಿಯಾದ ತನ್ನ ಕ್ರಿಮಿ... ಭಂಟ ಶ್ರೀನಿವಾಸ ರೆಡ್ಡಿ ಎಂಬುವನ ...ಗೆ ಈ ಜಮೀನು ಮಂಜೂರು ಮಾಡಿಸಲು ಲಿಂಬಾವಳಿ ... ರೀತಿಯ ಸರ್ಕಸ್ ನಡೆಸುತ್ತಿದ್ದಾರೆ. ಬೆಂಗಳೂರು ನಗರದ ... ಡಿಸಿ ರಾಮಾಂಜಿನಪ್ಪನಿಗೆ ವಿಪರೀತ ಕಾಟ ಕೊಡುತ್ತಾ, ... ಹಾಕುತ್ತಾ ಈ ಅಕ್ರಮ ಭೂಕಬಳಿಕೆಗೆ ಪ್ರಯತ್ನ ...ತ್ತಿದ್ದಾರೆ. ಯಡ್ಡಿ ಮಗ ವಿಜಯೇಂದ್ರನಿಗೆ ಅನಾಮತ್ತು ... ಕೋಟಿ ರೂಪಾಯಿ ಲಂಚ ಕೊಟ್ಟು ಬೆಂಗಳೂರಿನ ... ಡಿಸಿಯಾಗಿ ಬಂದಿರುವ ರಾಮಾಂಜಿನಪ್ಪ ಲಂಚ ಬೇಡ ...ಂಥ ಸುಡಿವಂತನೇನಲ್ಲ. ಆದರೆ ಈ ರೀತಿ ಸರ್ಕಾರಿ ...ನನ್ನು ಅದರಲ್ಲೂ ನೂರು ಕೋಟಿ ರೂಪಾಯಿ ಬೆಲೆ ...ವ 30 ಎಕರೆಯಷ್ಟು ಭೂಮಿಯನ್ನು ಹೀಗೆ ಏಕಾಏಕಿ ...ವಳಿ ಭಂಟನ ಹೆಸರಲ್ಲಿ ಮಂಜೂರು ಮಾಡಿಕೊಡಲು ...ಮುಂದೆ ನೋಡುತ್ತಿದ್ದಾನೆ ಅಷ್ಟೆ.

...ಈಗ ಬೆಂಗಳೂರು ನಗರ ಡಿಸಿ ಆಫೀಸ್ ತುಂಬಾ ಬರೀ ...ವಳಿ ಲ್ಯಾಂಡ್ ಡೀಲ್‌ನದ್ದೇ ಚರ್ಚೆಯಾಗಿ ಬಿಟ್ಟಿದೆ.

ಇಷ್ಟಕ್ಕೂ ಈ 30 ಎಕರೆ ಭೂಮಿ ಖಾಲಿ ಏನು ಇಲ್ಲ, ಸರ್ಕಾರಿ ದಾಖಲೆಗಳ ಪ್ರಕಾರವೇ ಹಿಂದಿನ ಧರಂಸಿಂಗ್ ಸರ್ಕಾರವು 10 ಎಕರೆಯಷ್ಟನ್ನು ಸ್ಥಳೀಯ ಬಡವರಿಗೆಂದು ಆಶ್ರಯ ನಿವೇಶನ ಹಂಚಲು ಮಂಜೂರು ಮಾಡಿತ್ತು, ನಂತರ ಇನ್ನೊಮ್ಮೆ ಮೊರಾರ್ಜಿ ವಸತಿ ಶಾಲೆಗೆಂದು 10 ಎಕರೆ ಮಂಜೂರಾಗಿದೆ. ಉಳಿದ ಹತ್ತೆಕರೆಯಲ್ಲಿ ಸ್ವಲ್ಪಭಾಗ ರಸ್ತೆ ಇತ್ಯಾದಿಗಳಿಗೆಂದು ಗುರುತಿಸಲಾಗಿದೆ.

ವಸ್ತುಸ್ಥಿತಿ ಹೀಗಿದ್ದಾಗಲೂ ಲಿಂಬಾವಳಿ ಮಹಾಶಯರು ಹಿಂದಿನ ಸರ್ಕಾರಿ ಆದೇಶಗಳನ್ನು ನಿರ್ಲಕ್ಷಿಸಿ ಅದೇ ಭೂಮಿ ಸ್ವಾಹಾ ಮಾಡಲು ಹೊರಟಿದ್ದಾರೆ.

ಇಷ್ಟಕ್ಕೂ ಯಾರಿಗೆ ಜಮೀನು ಮಂಜೂರು ಮಾಡಿ ಎಂದು ಲಿಂಬಾವಳಿ ಒತ್ತಡ ಹಾಕುತ್ತಿದ್ದಾರೋ ಅವನ ಜಾತಕವಾದರೂ ಸರಿ ಇದೆಯಾ ಅಂಥ ನೋಡಿದರೆ ಜಿಗುಪ್ಸೆಯಾಗುತ್ತದೆ.

ಬೆಳ್ಳಂದೂರು, ಕುಡತಿ, ಮಹದೇವಪುರ, ಮಾರತ್‌ಹಳ್ಳಿ ಏರಿಯಾಗಳಲ್ಲಿ ಶ್ರೀನಿವಾಸ ರೆಡ್ಡಿ ಅಂದರೆ ಯಾರಿಗೂ ಗುರುತು ಸಿಗುವುದಿಲ್ಲ, ಬದಲಿಗೆ ಚಾಕು ಶ್ರೀನಿವಾಸ ರೆಡ್ಡಿ ಅನ್ನಬೇಕು!

ಅಂತ ಕ್ರಿಮಿನಲ್, ಭೂಗಳ್ಳ ಇವನು. ಆಲನಾಯಕನ ಹಳ್ಳಿಯವನಾದ ಈ ಚಾಕು ಶ್ರೀನಿವಾಸ ಕೆಲಕಾಲ ಸಿಟಿ ಕಾರ್ಪೊರೇಷನ್ನಿನ ಹೆಲ್ತ್ ವಿಭಾಗದಲ್ಲಿದ್ದ. ಅಲ್ಲಿ ಮೈಬಗ್ಗಿಸಿ ದುಡಿಯಲಾಗದೆ ಪೋಲಿ ತಿರುಗುತ್ತಾ ತನ್ನ ಊರಿನ ಸುತ್ತಾಮುತ್ತಾ ರಿಯಲ್ ಎಸ್ಟೇಟ್ ದಂಧೆಗೆ ಕೈಯಿಟ್ಟ. ಒಂದಿಷ್ಟು ಕಾಸೂ ಮಾಡಿಕೊಂಡ. ಈ ದಂಧೆಗಿಳಿದ ಮೇಲೆ ನಕಲಿ ದಾಖಲೆ, ಗೂಂಡಾಗಿರಿ, ಕಂಡೋರ ಆಸ್ತಿ ಕಿತ್ತುಕೊಳ್ಳುವುದು ಎಲ್ಲಾ ಇರಲೇಬೇಕಲ್ಲವೆ? ಈ ರೆಡ್ಡಿ ಅದನ್ನು ಮಾಡಿದ. ಕೆಲವು ಕ್ರಿಮಿನಲ್ ಕೇಸುಗಳಾಗಿ ಜೈಲಿಗೂ ಹೋಗಿ ಬಂದ. ಸರ್ಕಾರಿ ಅಧಿಕಾರಿಗಳಿಗೆ, ಪೊಲೀಸರಿಗೆ ಲಂಚ ಕೊಟ್ಟು ಜನರನ್ನು ಬೆದರಿಸುತ್ತಾ ದಂಧೆ ಮುಂದುವರೆಸಿದ.

ಈ ಘನಂದಾರಿ ಕೆಲಸ ಮಾಡಿದ್ದಕ್ಕೇನೆ ಈ ಘಡವನಿಗೆ ಚಾಕೂ ಶ್ರೀನಿವಾಸ ರೆಡ್ಡಿ ಎಂಬ ಬಿರುದು ಸಿಕ್ಕಿದ್ದು.

ಇಂಥ ಸಮಾಜ ಕಂಟಕನ ಜೊತೆ ಉನ್ನತ ಶಿಕ್ಷಣ ಸಚಿವ ಲಿಂಬಾವಳಿಗೆ ಯಾವ ತರದ ದೋಸ್ತಿ?

ಈ ಚಾಕೂ ರೆಡ್ಡಿಗೆ ಕೇವಲ ಹೊಸೂರು ರಸ್ತೆ ಸುತ್ತಮುತ್ತಲೇ ಕನಿಷ್ಠ 500 ಎಕರೆ ಜಮೀನಿದೆ ಎನ್ನಲಾಗುತ್ತಿದೆ.

ಇದೆಲ್ಲಾ ಅಪರಾತಪರಾ ಡೀಲ್‌ಗಳಿಂದಲೇ ರೆಡ್ಡಿ ಬೆಳೆಸಿಕೊಂಡಿರುವ ಆಸ್ತಿ.

ಇಂಥವನಿಗೆ ಮತ್ತೆ 30 ಎಕರೆ ಸರ್ಕಾರಿ ಜಮೀನು ಕೊಡಿಸಲು ಲಿಂಬಾವಳಿ ಯಾಕೆ ಲಾಬಿ ಮಾಡುತ್ತಿದ್ದಾರೆ?

ಪಾಲುದಾರಿಕೆ ಡೀಲಾ ಇದು? ●

'ಎಲೆಕ್ಷನ್‌ಗೆ 50 ಲಕ್ಷ ಕೊಟ್ಟಿದ್ದ'

...ಸ್ಟೇಷನ್ ಡಿಸಿ ರಾಮಾಂಜಿನಪ್ಪನ ಹತ್ತಿರ ಚಾಕೂ ರೆಡ್ಡಿಗೆ 30 ಎಕರೆ ಭೂಮಿ ಮಂಜೂರು ಮಾಡುವಂತೆ ಒಡಾಡುತ್ತಿರುವ ...ವರಿಗೆ ಸ್ವಲ್ಪವೂ ನಾಚಿಕೆ ಇದ್ದಂತಿಲ್ಲ.

"ನಾನು ರೆಡ್ಡಿ ಹತ್ತಿರ ಕಮಿಟ್ ಆಗಿಬಿಟ್ಟಿದ್ದೀನಿ. ಅದಕ್ಕೆ ಈ ಲ್ಯಾಂಡ್ ಕೊಡಿಸಲೇಬೇಕು" ಅನ್ನುತ್ತಿದ್ದಾರೆ.

ಕಳೆದ ವರ್ಷ ಅಸೆಂಬ್ಲಿ ಎಲೆಕ್ಷನ್ ನಡೆದಾಗ ಈ ಚಾಕೂ ರೆಡ್ಡಿ ಲಿಂಬಾವಳಿಯ ಖರ್ಚಿಗೆ 50 ಲಕ್ಷ ಕೊಟ್ಟಿದ್ದ. ತಿರುಗಿ ಬರದ ...ಷನ್ ಖರ್ಚಿಗೆ ಇಷ್ಟು ಕಾಸು ಕೊಡುತ್ತಾನೆಂದರೆ ಇನ್ನು 100 ಕೋಟಿ ರೂಪಾಯಿ ಬಾಳುವ ಜಮೀನಿಗೆ ಈ ರೆಡ್ಡಿ ಇನ್ನೆಷ್ಟು ...ಬೇಕು!?

...ಬಾವಳಿಗೆ ಇಂಥ ಡೀಲ್‌ಗಳು ಹೊಸದೇನಲ್ಲ.

...ಹಳ್ಳಿ ಏರ್‌ಪೋರ್ಟ್ ಹತ್ತಿರ ಐದೆಕರೆ ಸರ್ಕಾರಿ ಭೂಮಿ ಗುಳುಂ ಮಾಡಿ, ಯೂನಿವರ್ಸಿಟಿ ವಿಸಿಗಳ ನೇಮಕಾತಿಯಲ್ಲೂ ...ಹಾರ, ಚಿರಿಬಿಸಿ ಬಿರುದ್ದರ ಪ್ರಚಾರಾಂದೋಲನದಲ್ಲೂ ಕಮಿಷನ್ ದಂಧೆ... ಎಂದು ಕೈ ಕೊಳ್ಳೆ ಮಾಡಿಕೊಂಡಿರುವಾತನಿಗೆ ... ಕುಡತಿ ಭೂಗಳ್ಳತನ ಇನ್ನೊಂದು ಸೇರ್ಪಡೆಯಷ್ಟೆ.

ಇಂಜನ್ನು ತಾಳಗುಪ್ಪದ ಡೆಡ್ ಎಂಡಲ್ಲಿ ನಿಂತೋಯ್ತು

ಕಾಂಗ್ರೆಸ್ ಎಂಬ ಹಳೆ ಮನೆ ಹುಡುಕುತ್ತ ಬಂದು ಆಸೀನರಾದ ದಳದವರನ್ನು ನೋಡಿದ ಕಾಂಗ್ರೆಸ ಸೋಮಾರಿಗಳು ಮುನಿಸಿಕೊಂಡು ಮನೆ ಬಿಟ್ಟು ಹೊರಗೇ ತಿರುಗುತ್ತಿವೆಯಂತಲ್ಲಾ, ಇದನ್ನು ಕಂಡು ದುಃಖಿತನಾದ ದೇಶಪಾಂಡೆ ಎಂಬ ಅಧ್ಯಕ್ಷ "ಎಲ್ಲರ ಸಹಕಾರವಿದ್ದರೆ ನಾನು ಕಳೆದ ಲೋಕಸಭಾ ಚುನಾವಣೆಯಲ್ಲಿ ಎದುರಪ್ಪನಿಗೆ ಕೇವಲ ಎರಡು ಸೀಟು ಬಿಟ್ಟು ಕೊಡುತ್ತಿದ್ದೆ" ಎಂದರಂತಲ್ಲಾ, ತನ್ನ ಸ್ವಜಾತಿ ಜನರೆಲ್ಲಾ ಬಿಜೆಪಿಗೆ ಮತ ಒತ್ತುವಾಗ ಈತನ ಒಂದು ಮತದಿಂದ ಅದ್ಯಾವ ಸೀಟು ಗೆಲ್ಲುತ್ತಿದ್ದ? ಹೋಗಲಿ ಆ ಡಿ.ಕೆ. ಶಿವಕುಮಾರನ ವರ್ಗವೆಲ್ಲಾ ದಳದ ಕಡೆ ವರ್ಗವಾಗಿ ಹೋಗಿರುವಾಗ ಈ ಕಾಂಗ್ರೆ ಪಾರ್ಟಿಗೆ ಮುಂದಾದರೂ ಉಳಿಗಾಲವಿದೆಯೆ ಎಂದು ಎ.ಕೆ. ಸುಬ್ಬಯ್ಯ ತಮ್ಮ ಎಂದಿನ ಉರಿಮಾರಮ್ಮನ ಚಾಟಿಯನ್ನ ಇಬ್ಬರಿಗೂ ಬೀಸಿದರಂತಲ್ಲಾ, ಥೂತ್ತೇರಿ!

* * * * *

"ಕಾಂಗ್ರೆಸ್ ಪಾರ್ಟಿ ಲೋಕಸಭಾ ಚುನಾವಣೆಯಲ್ಲಿ ಕೇವಲ ಆರು ಸೀಟು ಗೆದ್ದಿರೋದು ತಲೆ ತಗ್ಗಿಸೊ ಅಂತದ್ದು. ಇದೇ ತರ ಆದ್ರೆ ಇನ್ನು ಮುಂದೆ ಇದು ಸೋಲೋ ಪಾರ್ಟಿ ಅಂತ ಹೆಸರು ಮಾಡುತ್ತೆ. ಹೈಕಮಾಂಡು ಸರಿಯಾದ ತೀರ್ಮಾನ ತಗೊಳ್ಳಿಲ್ಲ. ಇದಕ್ಕೆಲ್ಲಿ ಅದನ್ನೆ ಹೊಣೆ ಮಾಡಬೇಕಾಗುತ್ತೆ" - ಈ ಮಾತುಗಳನ್ನು ನಮ್ಮ ಹಿಂದುಳಿದ ವರ್ಗದ ಪ್ರಖ್ಯಾತೀತ ನಾಯಕರಾದ ಬಂಗಾರಪ್ಪನವರು ತಮ್ಮ ಸ್ವಂತ ಬಾಯಿಂದಲೇ ಆಡಿದರಂತಲ್ಲಾ, ಕಾಂಗ್ರೆಸ್ಸಿನಲ್ಲೇ ಗೂಟ ಹೊಡೆದುಕೊಂಡಿದ್ದ ಖರ್ಗೆ-ಧರಂ ಸಿಂಗನ ಬಾಯಿಂದಲೂ ಇಂತಹ ಮಾತು ಬಾರದಿರುವಾಗ 'ಬಂ' ಇಂತಹ ಕಾಳಜಿಪೂರಿತ ಮಾತನಾಡಬೇಕಾದರೆ ಅದಿನ್ನೆಂತಹ ಮಮತೆ ಕಾಂಗ್ರೆಸ್ ಪಾರ್ಟಿಯ ಮೇಲೆ ಉಕ್ಕಿ ಹರಿದಿರಬೇಕು? ಅಂತೂ ಇಂತೂ 'ಕುಂತೀ ಕೊಡಕುಲುಕು ರಾಜ್ಯಂಲೇದು' ಎನ್ನುವಂತೆ 'ಬಂ'ಗೆ ಅತ್ತ ಬಿಜೆಪಿಯಿಂದಲೂ ಏನೂ ಆಗಲಿಲ್ಲ, ಇತ್ತ ಕಾಂಗ್ರೆಸ್‌ನಿಂದಲೂ ಗೆಲ್ಲಲಿಲ್ಲ, ಹೀಗೇ ಆಯಸು ಮುಗಿಸಿಬಿಟ್ಟೆನಲ್ಲ ಎಂಬ ಕೊರಗನ್ನ ಯಾರಲ್ಲೂ ಹೇಳಿಕೊಂಡಿಲ್ಲವಂತಲ್ಲಾ, ಥೂತ್ತೇರಿ!!

* * * * *

ಚುನಾವಣಾ ಸೋಲಿನ ಕಾರಣವನ್ನು ಕೇಂದ್ರದ ಮೇಲೆ ಹಾಕಿರುವ 'ಬಂ' ಧೈರ್ಯವನ್ನು ಮೆಚ್ಚಲೆಂದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಯಾರೇ ಕೂಗಾಡಲಿ ಊರೇ ಹೋರಾಡಲಿ ನಿನ್ನ ನೆಮ್ಮದಿಗೆ ಭಂಗವಿಲ್ಲ. ಎಮ್ಮೇ ನಿನಗೆ ಸಾಟಿಯಿಲ್ಲ...."

"ಹಲೋ ಯಾರು?"

"ನಮಸ್ಕಾರ ಸಾರ್, ನಾನು ಯಾಹೂ."


"ಎಲ್ರಿ ಯಾಹೂ ಪತ್ತೆನೆ ಇಲ್ಲ?"

"ಬರನ ಅಂತ ತುಂಬ ಟ್ರೈ ಮಾಡಿದೆ ಸಾರ್, ಆಗಲಿಲ್ಲ."

"ಬರಬೇಕು ಅಂದ್ರೆ ಹೇಗಾದ್ರು ಬರಬವುದು. ಮನಸಿಲ್ಲ ಅನ್ನಿ."

"ಅಂಗೇನು ಇಲ್ಲಾ ಸಾರ್. ಚುನಾವಣೆ ಟೈಮಲ್ಲೇ ಕೆಲುವು ಗುಟ್ಟು ಹೇಳನ ಅಂತ ಹೊರಟೆ, ಆಗಲಿಲ್ಲ. ಆಮೇಲೆ ನೀವು ಎಲ್ಲಾ ಪಾರ್ಟಿಯಿಂದ್ಲೂ ಚುನಾವಣೆ ಎದುರಿಸಿದ್ದಿರಿ, ಎಲ್ಲಾ ಗೊತ್ತಿರೊ ನಿಮಗೆ ಏನ್ಹೇಳದು ಅಂತ ಸುಮ್ಮನಾದೆ."

"ಹೋಗ್ಲಿ ಪೋನು ಮಾಡಿದ್ದೇಕೆ ಹೇಳಿ."



"ರಿಜಲ್ಟು ಬಂದಮೇಲೆ ನಿಮ್ಮನ್ನ ಮಾತ್ನೆ ಆಡಿಸಿರಲಿಲ್ಲ."

"ರಿಜಲ್ಟು ಬಂತು ನಾನು ಅದನ್ನ ಮರತು ಆರಾಮಾಗಿದ್ದಿನಿ."

"ಅಂದ್ರೆ ನಿವೃತ್ತಿಯಾದ್ರ ಸಾರ್?"

"ನಿವೃತ್ತಿ ಅನ್ನದು ಈ ಬಂಗಾರಪ್ಪನ ಜಾಯಮಾನದಲ್ಲಿಲ್ಲ."

"ಈ ಸೋಲು ಏನನ್ನುಸುತ್ತೆ ಸಾರ್?"

"ನೂರು ಕೋಟ ಎದುರಿಗೆ, ಮೂರು ಕೋಟ ಸೋಲ್ತು."

"ನಿಜ ಸಾರ್, ಬಂಗಾರಪ್ಪನಿಗೆ ಓಟು ಕೊಡಿ ಅಂತ ಕೇಳೋರೆಲ್ಲಾ ಬಕರಿಯಾಗಿದ್ರಂತೆ."

"ಅದೋಗ್ಲಿ ಕಂಡ್ರೀ, ನಾನು ಬರಗಾಲ ಬಂದಾಗ ಶಿಕಾರಿಪುರ, ಹೊಸನಗರ, ಸೊರಬ ಅಲ್ಲೆಲ್ಲಾ ಬೀಜ ಹಂಚಿದ್ದೆ, ಸುಮಾರು ಜನಗಳ ಕಾಯಿಲೆಗೆ ಹಣ ಖರ್ಚು ಮಾಡಿದ್ದಿನಿ. ತೊಂದ್ರೆ ಅಂತ ಬಂದೋರನ್ನ ಬರಿಗೈಲಿ ಕಳಿಸಿಲ್ಲ, ಆದ್ರು ಕೈಕೊಟ್ರು ದ್ರೋಹಿಗಳು, ನಂಬಿಕೆಗೆ ಯೋಗ್ಯರಲ್ಲದ ಜನ."

"ಅಂಗೇ ನೋಡಿದ್ರೆ ನೀವು ಕಳೆದ ಚುನಾವಣೇಲಿ ಸೋಲ್ತಿದ್ರಿ ಸಾರ್. ದೇವೇಗೌಡ್ರು ತಿಮ್ಮಪ್ಪ ಹೆಗಡೆ ನಿಲ್ಸಿ ಐವತ್ತು ಸವುರ ಓಟು ಕೀಳದೆಯಿದ್ರೆ ಆಗ್ಲೆ ಸೋಲ್ತಿದ್ರಿ. ಈಗ್ಲು ನೋಡಿ ದೇವೇಗೌಡ್ರು ಕಡಿಯೋರೆ ನಿಮ್ಮ ಕೈ ಹಿಡದ್ರೂ ಈಡಿಗರೇ ನಿಮ್ಮ ಕೈಬಿಟ್ರು."

"ನಿಜ ಕಂಡ್ರಿ. ಹೊಸ ಈಡಿಗರಿಗೆ ನನ್ನ ತಿಮ್ಮಪ್ಪನ ತ್ಯಾಗ ಏನು ಗೊತ್ತು. ಅನಾಮಧೇಯ ಜಾತಿಯಾಗಿ ಬದ್ದಿದ್ರು. ಅಂತವುರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡ್ಸಿ ಐದು ಜನ ಎಂ.ಪಿ. ಗೆಲ್ಲಂಗೆ ಮಾಡಿದ್ದೆ. ಈಗ ನೋಡಿ ಒಬ್ರೂ ಇಲ್ಲ, ಸರಿಯಾದ್ದಾಯ್ತು ಇವುರಿಗೆ."

"ನಿಮ್ಮ ತಪ್ಪುಗಳೇನು ಒಸಿ ಇದ್ದವ ಸಾರ್? ಇದ್ದಕ್ಕಿದ್ದಂತೆ ಸೋನಿಯಾ ಗಾಂಧಿ ದುರ್ಬಲ ಮಹಿಳೆ, ವಾಜಪೇಯಿ ಸ್ಟ್ರಾಂಗು ಅಂತ ಬಿಜೆಪಿಗೋದ್ರಿ. ಗುಲಾಮಗಿರಿಗೆ ಹೇಳಿ ಮಾಡಿಸಿದಂಗಿರೊ ಹರತಾಳು ಹಾಲಪ್ಪ, ಬೇಳೂರು ಗೋಪಾಲಕೃಷ್ಣ ಅನ್ನೊ ಅನಾಮಧೇಯರನ್ನು ಬಿಜೆಪಿ ಶಾಸಕರಾಗಿ ಮಾಡಿದ್ರಿ. ಸಾಗರದಲ್ಲಿ ಮತೀಯ ಗಲಭೆಗೆ ಕಾರಣ ಆದ್ರಿ. ಇಷ್ಟೆಲ್ಲ ಆದಮೇಲೆ ಕೈಲಿದ್ದ ಕಮಲ ಬಿಸಾಡಿ ಬರಿ ಹಸ್ತ ತೋರುಸ್ತ ಕಾಂಗ್ರೆಸ್ಸಿಗೆ ಒಬ್ಬರೇ ಬಂದ್ರಿ. ಆದ್ರೆ ನೀವು ಕರಕಂಡೋಗಿದ್ದ ಜನಾಂಗ ಬಿಜೆಪಿಲೇ ಉಳಿತು. ಇಲ್ಲಿ ಬಂದು ಗೆಲ್ಲಕ್ಕಾಯ್ತದ ಸಾರ್. ನಾನು ಯಾವತ್ತಿದ್ರೂ ಇಂಜನ್ನು, ಬೋಗಿ ಆಗಲ್ಲ ಅಂದಿದ್ರಿ. ಈಗ ನೋಡಿ ಆ ಇಂಜನ್ನಿಗೆ ಇದ್ದಲೂ ಇಲ್ಲ, ಡಿಜೇಲು ಇಲ್ಲ, ತಾಳಗುಪ್ಪನ ಡೆಡ್ ಎಂಡಲ್ಲಿ ನಿಂತೋಗ್ಯದೆ."

"ಏಸೆ ಶಟಪ್!"

"ಥೂತ್ತೇರಿ!!!" ■



ಚನ್ನಿಗನ ಚಿತ್ತ ಈಗ ಹಸ್ತದತ್ತ!


ಗೌರಿಶಂಕರ


ಪಕ್ಕಾ ಅವಕಾಶವಾದಿ, ಕುಖ್ಯಾತಿಪುಷ್ಟ ಚನ್ನಿಗಪ್ಪ ಮೂರೂ ಬಿಟ್ಟವನೆಂಬುದು ಜಗತ್ತಿಗೇ ಗೊತ್ತಿರುವ ವಿಷಯ. ಅದಕ್ಕೆ ನೂರಾ ಒಂದನೇ ಪುರಾವೆ ಒದಗಿಸಲು ಹೊರಟಿರುವ ಚನ್ನಿಗಪ್ಪ ಈಗ ಮಗ ಗೌರಿ ಶಂಕರನನ್ನು ಕಾಂಗ್ರೆಸ್‌ಗೆ ಸೇರಿಸಲು ಹವಣಿಸುತ್ತಿದ್ದಾನೆ.

ದೇವೇಗೌಡರ ಮನೆಮಗ ಎನ್ನುತ್ತಲೇ ಅವರ ಬೆನ್ನಿಗೆ ಚೂರಿ ಹಾಕಿದ್ದ ಚನ್ನಿಗಪ್ಪ ಮಧುಗಿರಿಯಿಂದ ಜೆಡಿಎಸ್‌ನಿಂದ ಗೆದ್ದಿದ್ದ ಮಗ ಗೌರಿಶಂಕರನೊಂದಿಗೆ ಬಿಜೆಪಿ ಸೇರಿ, ಗಣಿ ರೆಡ್ಡಿಗಳ ಜೊತೆ ಚಕ್ಕಂದವಿಟ್ಟುಕೊಂಡು ದುಡ್ಡು ಬಾಚಿಕೊಂಡ. ಹೇಗೂ ಗಣಿ ರೆಡ್ಡಿಗಳು ಕೋಟಿಕೋಟಿ ಚೆಲ್ಲುವುದರಿಂದ ಮಧುಗಿರಿ ಉಪಚುನಾವಣೆಯಲ್ಲಿ ಮಗನ ಗೆಲುವು ಗ್ಯಾರಂಟಿ ಎಂದುಕೊಂಡಿದ್ದ. ಗೌರಿಶಂಕರನನ್ನು ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷನನ್ನಾಗಿ ಮಾಡಿ, ದೊಡ್ಡ ಮೊತ್ತಗಳನ್ನು ಬಾಚುವ ಸ್ವಂತ ಅಭಿವೃದ್ಧಿಗೆ ಕೈಹಾಕಿದ. ಆದರೆ ಇವನ ನೀಚ ಬುದ್ಧಿಗೆ ಹೇಸಿಕೊಂಡ ಮಧುಗಿರಿ ಜನ ಪಾಠ ಕಲಿಸಲು ಮನಸ್ಸು ಮಾಡಿದರು. ಚನ್ನಿಗ ಮತ್ತು ಮಗ ಗೌರಿ ದೊಡ್ಡ ದೊಡ್ಡ ನೋಟಿನ ಚೀಲಗಳೊಂದಿಗೆ ಮಧುಗಿರಿ ಸುತ್ತಲು ಆರಂಭಿಸಿದರು. ಯಾವಾಗ ಜೆಡಿಎಸ್‌ನಿಂದ ಅನಿತಾ ಕುಮಾರಸ್ವಾಮಿ ಕಣಕ್ಕಿಳಿದರೋ ಚನ್ನಿಗನ ಮೀಟರ್ ಆಫ್ ಆಯ್ತು. ಮಧುಗಿರಿಯ ಜನರೂ ದಿಟ್ಟ ನಿರ್ಣಯ ತೆಗೆದುಕೊಂಡು ಚನ್ನಿಗ ಮತ್ತು ಅವನ ಮಗ ಗೌರಿಶಂಕರನನ್ನು ಗಟಾರಕ್ಕೆ ಎಸೆದುಬಿಟ್ಟರು....

ದೇವೇಗೌಡರ ರ್‍ಯಾಲಿಗೆ ಹೊರಟ ಜನರೊಂದಿಗೆ ತಗಾದೆ ತೆಗೆದು ರೋಡಿನಲ್ಲೇ ಚಪ್ಪಲಿ ಏಟು ತಿಂದವನಿಗೆ ಈ ಸೋಲಿನಿಂದೇನೂ ನಾಚಿಕೆ ಆಗಲಿಲ್ಲ.

ಆದರೆ ಯಾವಾಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದು, ಜೈರಾಮ್ ರಮೇಶ್ ಪರಿಸರ ಮತ್ತು ಅರಣ್ಯ ಸಚಿವರಾದರೋ ಆಗಲೇ ಚನ್ನಿಗನಿಗೆ ಭಯ ಶುರುವಾಗತೊಡಗಿತು. ಗಣಿ ಅವ್ಯವಹಾರಗಳ ತನಿಖೆ ಮಾಡುವುದಾಗಿ ಜೈರಾಮ್ ರಮೇಶ್ ಹೇಳತೊಡಗಿದಾಗಿನಿಂದ ಚನ್ನಿಗ ಚಿಂತೆಗೆ ಬಿದ್ದ.


ಹಿಂದೆ ಅರಣ್ಯ ಮಂತ್ರಿಯಾಗಿದ್ದಾಗ ಗಣಿ ರೆಡ್ಡಿಗಳಿಂದ ನೂರಾರು ಕೋಟಿ ಬಾಚಿರುವ ಹಗರಣದಲ್ಲಿ ತಾನೆಲ್ಲಿ ಸಿಕ್ಕಿಬೀಳುವೆನೋ ಎಂಬ ಆತಂಕ ಶುರುವಾಯ್ತು. ಮುಂದೆಯೂ ಬಿಜೆಪಿಯಿಂದ ಮಗ ಗೆಲ್ಲುವುದು ಅಸಾಧ್ಯ ಎಂದು ಮನಗಂಡ ಚನ್ನಿಗ ಮೊದಲು ಜೆಡಿಎಸ್ ಕಡೆ ಇಣುಕಿದ್ದಾನೆ. ಅಲ್ಲಿ ಹಚ್ಯಾತುಚ್ಯಾ ಎಂಬ ಪದಗಳೇ ಕೇಳಿಬಂದಿವೆ.


ಚನ್ನಿಗಪ್ಪ

ತ್ಯಾಮಗೊಂಡ್ಲು ಕ್ಷೇತ್ರದಿಂದ ಜೆಡಿಎಸ್‌ನಿಂದ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದಾಗಲೇ ನೆಲಮಂಗಲದ ಸುತ್ತಮುತ್ತ ನೂರಾರು ಎಕರೆ ಭೂಕಬಳಿಕೆ ಮಾಡಿದ ಕುಖ್ಯಾತಿ ಹೊಂದಿರುವ, ನೆಲಮಂಗಲದ ಸುತ್ತ ರಿಯಲ್ ಎಸ್ಟೇಟ್ ದಂಧೆಯಲ್ಲಿ ನಡೆದ ಹಲವು ಕೊಲೆಗಳಿಗೆ ಕಾರಣನಾಗಿರುವ ಗೌರಿಶಂಕರ್‌ನಂತವನು ಯಾವ ಪಕ್ಷ ಸೇರಿದರೂ ಅದು ಆ ಪಕ್ಷಕ್ಕೇ ಕಳಂಕ. ದಾಬಸ್‌ಪೇಟೆಯ ಬೈರನಾಯಕನಹಳ್ಳಿಯಲ್ಲಿ ಕೆರೆ ಒತ್ತುವರಿ ಮಾಡಿ ಹೈಟೆಕ್ ಅನಾಥಾಶ್ರಮ ಕಟ್ಟಿಸಿ, ಅದಕ್ಕೊಂದು ಅವರಿವರಿಂದ ಎತ್ತುವಳಿ ಮಾಡಿರುವ ಕುಖ್ಯಾತಿ ಹೊಂದಿರುವ ಈ ಅಪ್ಪ-ಮಗ ಇಂದು ಬೀದಿಗೆ ಬಿದ್ದವರಂತಾಗಿದ್ದಾರೆ. ಇವತ್ತು ಅವರನ್ನು ಸೇರಿಸಿಕೊಳ್ಳಲು ಯಾವ ಪಕ್ಷವೂ ಮುಂದೆ ಬರುತ್ತಿಲ್ಲ. ಬಹುಶಃ ಆ ಹೈಟೆಕ್ ಅನಾಥಾಶ್ರಮದಲ್ಲೇ ಕಾಲಹಾಕಬೇಕೇನೋ...

ಆದರೂ ಪ್ರಳಯಾಂತಕ ಚನ್ನಿಗ ಕೈಕಾಲು ಹಿಡಿದಾದರೂ ಕಾಂಗ್ರೆಸ್ ಸೇರಿಬಿಡಬಲ್ಲ. ದಿಕ್ಕುಗೊಬ್ಬರಂತಾಗಿರುವ ರಾಜ್ಯ ಕಾಂಗ್ರೆಸ್ ನಾಯಕರು ಚನ್ನಿಗನನ್ನು ಅಪ್ಪಿಕೊಂಡರೂ ಆಶ್ಚರ್ಯವಿಲ್ಲ.


ಅದು ಕಾಂಗ್ರೆಸ್ಸಿನ ದುರಂತವಾಗುತ್ತದಷ್ಟೇ. ●



ಫೆಡರರ್ ಜೊತೆಗೆ ಟೆನಿಸ್ಸೂ ಗೆದ್ದಿತು!

ಹದಿನೈದು ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು ಗೆಲ್ಲುವ ಮೂಲಕ ಸ್ವಿಟ್ಜರ್ಲ್ಯಾಂಡಿನ ದೇಶದ ರೋಜರ್ ಫೆಡರರ್ ಹೊಸ ವಿಶ್ವದಾಖಲೆ ಬರೆದಿದ್ದಾನೆ. ಸದ್ಯಕ್ಕೆ ಆತನಿಗಿನ್ನೂ 28 ವರ್ಷ. ಅಂದರೆ 18-19 ಗ್ರ್ಯಾಂಡ್ ಸ್ಲ್ಯಾಮ್‌ವರೆಗೂ ಆತ ತಲುಪಬಹುದು.

ಅವತ್ತು ರವಿವಾರ ಜುಲೈ 5. ವಿಂಬಲ್ಡನ್ ಫೈನಲ್ ನೋಡಲು ಟೆನ್ನಿಸ್ ಪ್ರಿಯರೆಲ್ಲ ತುದಿಗಾಲ ಮೇಲೆ ನಿಂತಿದ್ದರು. ಫೆಡರರ್ ವಿಶ್ವದಾಖಲೆ ಬರೆಯುತ್ತಾನಾ ಎಂಬ ಕುತೂಹಲ ಎಲ್ಲರಲ್ಲಿ.


ರೋಜರ್ ಫೆಡರರ್

ಅಮೆರಿಕದ ರಾಡಿಕ್ ವಿರುದ್ಧ ನಡೆದ ಆ ಪಂದ್ಯ ಎಷ್ಟು ತುರುಸಿನಿಂದ ಕೂಡಿತ್ತೆಂದರೆ ಫಲಿತಾಂಶ ಬರಲು 4 ಗಂಟೆ 16 ನಿಮಿಷಗಳಷ್ಟು ದೀರ್ಘಕಾಲ ಹಿಡಿಯಿತು.

ಒತ್ತಡ, ಭಾವೋದ್ವೇಗ, ನಾಟಕೀಯ ತಿರುವುಗಳಿಂದ ಕೂಡಿದ್ದ ಈ ಪಂದ್ಯ ಟೆನ್ನಿಸ್ ಆಟವನ್ನು ಉಚ್ಛ್ರಾಯ ಮಟ್ಟಕ್ಕೇರಿಸಿಬಿಟ್ಟಿತು. ಆ ಮೂಲಕ ಅತಿ ಸುದೀರ್ಘವಾಗಿ ನಡೆದ ವಿಂಬಲ್ಡನ್ ಫೈನಲ್ ಎಂದು ದಾಖಲಾಗಿತು. 77 ಗೇಮ್ಸ್‌ಗಳನ್ನೊಳಗೊಂಡಿದ್ದ ಈ ಪಂದ್ಯದಲ್ಲಿ ಫೆಡರರ್ 50 ಏಸಸ್ ಹಾಕಿದ!

ಹಾಗೆ ನೋಡಿದರೆ ಆರಂಭದಲ್ಲಿ ರಾಡಿಕ್‌ನೇ ಮುಂದಿದ್ದ. ಎರಡನೇ ಸೆಟ್ ಟೈ ಬ್ರೇಕ್‌ನಲ್ಲಿ 6-2 ರಲ್ಲಿ ಮುಂದಿದ್ದಾಗ, ರಾಡಿಕ್ ಇನ್ನೂ ಸ್ವಲ್ಪ ಹಿಡಿತ ಸಾಧಿಸಿದ್ದರೆ ಫಲಿತಾಂಶವೇ ಬೇರೆಯಾಗುತ್ತಿತ್ತೇನೋ... ಆದರೆ ಆತ ತಪ್ಪಿದ. ಈ ಕಾಣಿಕೆಯೇ ಫೆಡರರ್‌ಗೆ ವರವಾಗಿ ಪರಿಣಮಿಸಿತು. ಒಂದಂತೂ ಸತ್ಯ; ಇಬ್ಬರ ಪ್ರತಿ ಶಾಟ್‌ಗಳೂ ಟೆನ್ನಿಸ್‌ಗೂ ರೋಚಕತೆ ತಂದವು. ಒಬ್ಬರಿಗೊಬ್ಬರು ಪಟ್ಟು-ಪ್ರತಿಪಟ್ಟು ಹಾಕುತ್ತಾ, ಮಿಂಚಿನ ವೇಗದಲ್ಲಿ ಮೈದಾನದ ಇಂಚಿಂಚನ್ನು ಬಿಡದಂತೆ ಓಡುತ್ತಾ ಆಡಿದ ರೀತಿ ಟೆನ್ನಿಸ್ ಪ್ರೇಮಿಗಳಿಗೆ ಹಬ್ಬದಂತಿತ್ತು.

ಕೊನೆಯಲ್ಲಿ 5-7, 7-6(6), 7-6(5), 3-6, 16-14 ರಿಂದ ಫೆಡರರ್ ಗೆದ್ದ. ಅದು ಐತಿಹಾಸಿಕ ಕ್ಷಣ. ಫೆಡರರ್ ಮಗುವಿನಂತೆ ಹಾರಾಡಿದ, ಕುಣಿದ... ಇಲ್ಲಿವರೆಗೆ ಈ ದಾಖಲೆಯ ಒಡೆಯನಾಗಿದ್ದ ಪೀಟ್ ಸ್ಯಾಂಪ್ರಾಸ್ ಎದ್ದು ನಿಂತು ಗೌರವ ಸೂಚಿಸಿ 'ಫೆಡರರ್ ಸಾರ್ವಕಾಲಿಕ ಶ್ರೇಷ್ಠ ಆಟಗಾರ' ಎಂದು ಕರೆದ. ಟೆನ್ನಿಸ್ ದಿಗ್ಗಜಗಳಾದ ಬಾರ್ನ್ ಬೋರ್ಗ್, ರಾಡ್ ಲೀವರ್ ಈ ಪಂದ್ಯವನ್ನು ಆನಂದಿಸಿ ಸಂಭ್ರಮ ಪಟ್ಟರು.

ಈ ವರ್ಷವಷ್ಟೇ ಫ್ರೆಂಚ್ ಓಪನ್ ಗೆದ್ದು ತನ್ನ 'ಮಾಡೆಲ್' ಪೀಟ್ ಸ್ಯಾಂಪ್ರಾಸ್‌ನ ದಾಖಲೆಯ ಸಮಕ್ಕೆ ಬಂದಿದ್ದ ಫೆಡರರ್ ವಿಂಬಲ್ಡನ್ ಗೆದ್ದು ಇನ್ನೂ ಎತ್ತರಕ್ಕೆ ಏರಿದ.

ಅಂದಂತೆ, ಕಳೆದ ವರ್ಷ ಇದೇ ಮೈದಾನದಲ್ಲಿ ಇಷ್ಟೇ ತುರುಸಿನ ಫೈನಲ್‌ನಲ್ಲಿ ರಫೆಲ್‌ನಡೆಲ್ ವಿರುದ್ಧ ಫೆಡರರ್ ಸೋತಿದ್ದ. ಅವರಿಬ್ಬರ ನಡುವಿನ ಆ ಪಂದ್ಯವನ್ನು ಜಾನ್ ಮೆಕೆನ್ರೊ-ಬಾರ್ನ್ ಬೋರ್ಗ್ ನಡುವಿನ ಹೋರಾಟಕ್ಕೆ ಹೋಲಿಸಲಾಗಿತ್ತು.

ದಕ್ಷಿಣ ಆಫ್ರಿಕಾ ಮೂಲದ ತಾಯಿ, ಸ್ವಿಸ್ ಮೂಲದ ತಂದೆಯ ಫೆಡರರ್ ಎಂಟನೇ ವರ್ಷವಿದ್ದಾಗಲೇ ಟೆನ್ನಿಸ್ ರಾಕೆಟ್ ಎತ್ತಿಕೊಂಡ. ಆಗೆಲ್ಲ ಆತನಿಗೆ ಬೋರಿಸ್ ಬೇಕರ್ ಸ್ಫೂರ್ತಿ. 1998 ರಲ್ಲಿ ಮೊದಲ ಜ್ಯೂನಿಯರ್ ವಿಶ್ವಕಪ್ ಗೆದ್ದ... ಅದೇ ವರ್ಷ ವಿಂಬಲ್ಡನ್ ಜ್ಯೂನಿಯರ್ ಸಿಂಗಲ್ಸ್ ಮತ್ತು ಡಬಲ್ಸ್ ಚಾಂಪಿಯನ್ ಆದ.

ಮಣ್ಣಿನ ಅಂಕಣ, ಹಸಿರು ಹಾಸಿನ ಅಂಕಣಗಳೆರಡಲ್ಲೂ ಫೆಡರರ್ ಪ್ರವೀಣನಾದರೂ, ಹಸಿರು ಹಾಸಿನಲ್ಲೇ ಆತನ ಶ್ರೇಷ್ಠ ಗೆಲುವುಗಳು ದಾಖಲಾಗಿವೆ. 2004 ರಿಂದ 237 ವಾರ ಕಾಲ ರ್‍ಯಾಂಕಿಂಗ್‌ನಲ್ಲಿ ನಂಬರ್‌ಒನ್ ಪಟ್ಟ ಪಡೆದ ಹೆಗ್ಗಳಿಕೆ ಫೆಡರರ್‌ನದು. ತನ್ನೊಳಗಿನಿಂದಲೇ, ತನ್ನನ್ನೇ ತಾನು ಚಾಲೆಂಜ್ ಮಾಡಿಕೊಳ್ಳುವುದರಿಂದಲೇ ತಾನು ಹೊಸ ಸ್ಫೂರ್ತಿ ಪಡೆಯುವುದಾಗಿ ಹೇಳುವ ಫೆಡರರ್ ಎದುರಾಳಿಗಳನ್ನು ಎಂದೂ ತುಚ್ಛವಾಗಿ ಕಂಡವನಲ್ಲ. ಕಳೆದ ವರ್ಷದ ಐತಿಹಾಸಿಕ ಫೈನಲ್‌ನಲ್ಲಿ ಫೆಡರರ್ ಸೋತ. ಈ ಸಲದ ಅಂತಹುದೇ ಪಂದ್ಯದಲ್ಲಿ ರಾಡಿಕ್ ಸೋತ....

'Defeat has a dignity that noisy victory does not have' ಎಂದು ಅರ್ಜೆಂಟಿನಾ ಕವಿ ಲೂಯಿಸ್ ಬೋರ್ಗ್ಸ್ ಹೇಳಿದ ಮಾತು ಇಂತಹ ಶ್ರೇಷ್ಠ ಪಂದ್ಯಗಳಿಗೂ ಅನ್ವಯಿಸುತ್ತದೆ. ಇಂತಹ ಪಂದ್ಯಗಳಿಂದ ಬರೀ ಫೆಡರರ್ ಗೆಲ್ಲುವುದಿಲ್ಲ, ಅಲ್ಲಿ ಟೆನ್ನಿಸ್ ಕೂಡಾ ಗೆಲ್ಲುತ್ತದೆ. ಕ್ರೀಡೆಯೂ ವಿಜಯಮಾಲೆ ಧರಿಸುತ್ತದೆ.

● ಮಲ್ಲಿ

ಚಕ್‌ದೇ ಹುಡುಗಿಯರಿಗೆ ಬೊಕೆಯೂ ಇಲ್ಲ

ಜೂನ್ 29 ರಂದು ಬೆಳಗುವ ಮುಂಜಾನೆಯಲ್ಲಿ ವಿಮಾನ ದೆಹಲಿಯ ಇಂದಿರಾಗಾಂಧಿ ಏರ್‌ಪೋರ್ಟಿನಲ್ಲಿ ಇಳಿಯತೊಡಗಿದಂತೆ ಈ ಹುಡುಗಿಯರು ಒಬ್ಬರನ್ನೊಬ್ಬರು ಅಪ್ಪಿಗೊಳ್ಳುತ್ತ ತಮ್ಮ ಚಾಲೆಂಜಿಂಗ್ ಗೆಲುವಿನ ಬಗ್ಗೆ ಸಂಭ್ರಮದಿಂದ ಹೆಮ್ಮೆ ಪಡತೊಡಗಿದರು. ವಿಮಾನ ರನ್‌ವೇಗೆ ಜಾರಿದಾಗ ಈ ಹುಡುಗಿಯರು ತಮಗೆ ಸ್ವಾಗತ ಹೇಗಿರಬಹುದು ಎಂದು ಕನಸಿಗೆ ಜಾರಿದರು.

ವಿಮಾನವಿಳಿದು ಬ್ಯಾಗ್ ಎಳೆದುಕೊಂಡು ಲಾಂಜ್‌ಗೆ ಬರುತ್ತಾರೆ. ಅತ್ತಿತ್ತ ನೋಡುತ್ತಾರೆ; ಸಂಭ್ರಮವೆಲ್ಲ ಕ್ಷಣಗಳಲ್ಲಿ ಜರ್ರಂತ ಇಳಿದುಹೋಗಿ ನಿರಾಶೆಗೊಳ್ಳುತ್ತಾರೆ... ಅವರು ಕನಸಿದಂತೆ ಅಲ್ಲಿ ಏನೂ ಇಲ್ಲ. ಒಬ್ಬನೇ ಒಬ್ಬ 'ಹಾಕಿ ಇಂಡಿಯಾ'ದ ಅಧಿಕಾರಿ ಅಲ್ಲಿಲ್ಲ. ಒಂದೇ ಒಂದು ಸರ್ಕಾರಿ ಬೊಕೆಯ ಸ್ವಾಗತವಿಲ್ಲ!



ಇದು ರಷ್ಯಾದ ಕಜನ್‌ನಲ್ಲಿ 'ಚಾಂಪಿಯನ್‌ಶಿಪ್ ಚಾಲೆಂಜ್', ಹಾಕಿ ಚಾಂಪಿಯನ್ ಶಿಪ್ ಗೆದ್ದು ಭಾರತಕ್ಕೆ ಮರಳಿದ ಮಹಿಳಾ ಹಾಕಿತಂಡಕ್ಕೆ ಸಿಕ್ಕ ಬಹುಮಾನ! ಬಾಡಿಗೆ ಆಟೋದಲ್ಲಿ ಪೋಷಕರೊಂದಿಗೆ ಆ ಹುಡುಗಿಯರು ಮುಖ ಸಪ್ಪೆ ಮಾಡಿಕೊಂಡು ತೆರಳಿದರು. ಅವತ್ತು ಅಲ್ಲಿರಬೇಕಾಗಿದ್ದ 'ಹಾಕಿ ಇಂಡಿಯಾ'ದ ಅಧ್ಯಕ್ಷ ಎ.ಕೆ. ಮಟು ಮತ್ತು ಇನ್ನಿಬ್ಬರು ಪದಾಧಿಕಾರಿಗಳು ಸಿಂಗಾಪೂರ್‌ನಲ್ಲಿ ಬ್ಯುಸಿನೆಸ್ ಮಾಡುತ್ತಿದ್ದರು!

ಟ್ವೆಂಟಿ-ಟ್ವೆಂಟಿ ಗುಂಗಲ್ಲಿ ಕಂಟ್ರಿ

ಈ ಹುಡುಗಿಯರಲ್ಲಿ ಬಹುತೇಕರು ಗ್ರಾಮೀಣ ಬಡ ಕುಟುಂಬದಿಂದ ಬಂದವರು. ತಂದೆ-ತಾಯಿ ಕೂಲಿ ಮಾಡಿಯೇ ಜೀವನ ಸಾಗಿಸಬೇಕು. ಚಾಂಪಿಯನ್‌ಶಿಪ್ ಟೂರ್ನಮೆಂಟಿನಲ್ಲಿ 'ಶ್ರೇಷ್ಠ ಯುವ ಆಟಗಾರ್ತಿ' ಪ್ರಶಸ್ತಿ ಪಡೆದ ಹರಿಯಾಣದ ರಾಣಿ ರಾಮಪಾಲ್‌ಳ ತಂದೆ ಇಂದಿಗೂ ಸರಕು ಬಂಡಿ ಎಳೆದು ಬದುಕು ಸವೆಸುತ್ತಾರೆ. ಕುರುಕ್ಷೇತ್ರ ಜಿಲ್ಲೆಯ ಶಹ್‌ಬಾದ್ ಎಂಬ ಪುಟ್ಟ ಹಳ್ಳಿಯಿಂದ ಹೊಮ್ಮಿರುವ ಐವರ ಹುಡುಗಿಯರ ಕತೆಯೂ ಇಂತದ್ದೇ......

ಇದು ಕ್ರಿಕೆಟ್ ಹುಚ್ಚಿನಲ್ಲಿ ಇತರೆ ಕ್ರೀಡೆಗಳಿಗೆ ಈ ದೇಶ ಮಾಡುತ್ತಲೇ ಬಂದಿರುವ ಮಹಾನ್ ಅನ್ಯಾಯ. ಕಳೆದ ವರ್ಷ ಐಪಿಎಲ್ ಟ್ವೆಂಟಿ- 20 ವಿಶ್ವಕಪ್ ಗೆದ್ದಾಗ ಧೋನಿ ಬಳಗಕ್ಕೆ ಮುಂಬೈನ ಬೀದಿಗಳಲ್ಲಿ ರಾಜಮರ್ಯಾದೆಯೊಂದಿಗೆ, ಸರ್ಕಾರಿ ಮರ್ಯಾದೆಯೊಂದಿಗೆ ಮೆರವಣಿಗೆ. ಆ ಸಂಭ್ರಮೋತ್ಸವದಲ್ಲಿ ಮಿಂದೆದ್ದ ಜನಸ್ತೋಮ. ಇಂಚಿಂಚು ಬಿಡದೇ ಲೈವ್ ರಿಲೇ ನೀಡಿದ ಚಾನೆಲ್‌ಗಳು. ಮುಖಪುಟ, ತಿಕಪುಟ, ನಡುಪುಟಗಳನ್ನೆಲ್ಲ ವಾರಪೂರ್ತಿ ಕ್ರಿಕೆಟ್‌ಮಯ ಮಾಡಿದ ದಿನಪತ್ರಿಕೆಗಳು.... ರಾಜ್ಯ ಸರ್ಕಾರಗಳಿಂದ ಆಯಾ ರಾಜ್ಯದ ಆಟಗಾರರಿಗೆ 5 ಲಕ್ಷದಿಂದ 20 ಲಕ್ಷದವರೆಗೆ ಕ್ಯಾಷು, ಸೈಟು.....

ಮೇಲಿನಂತಹ ಅಸಹ್ಯ ಸ್ವಾಗತವನ್ನೇನೂ ಬಯಸಿರಲಿಲ್ಲ ಚಾಂಪಿಯನ್‌ಶಿಪ್ ಗೆದ್ದ ಹಾಕಿ ಹುಡುಗಿಯರು. ಕನಿಷ್ಠ ಒಂದು ಬೊಕೆ ಹಿಡಿದು ಸ್ವಾಗತಿಸಿದ್ದರೆ ಸಾಕಿತ್ತು. ಇದು ರಾಷ್ಟ್ರೀಯ ಕ್ರೀಡೆ ಹಾಕಿಗೆ ತೋರಿಸುತ್ತಿರುವ ಅನಾದರ ಮಾತ್ರವಲ್ಲ; ಕಬಡ್ಡಿ, ವಾಲಿಬಾಲ್, ಖೋಖೋ, ಈಜು, ಅಥ್ಲೆಟಿಕ್ಸ್.... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಅತ್ಯುತ್ತಮ ಅಥ್ಲೀಟ್‌ಗಳಿರುವ ಉತ್ತರ ಕರ್ನಾಟಕದಲ್ಲಿ ಒಂದೇ ಒಂದು ಸಿಂಥೆಟಿಕ್ ಟ್ರ್ಯಾಕ್ ಇಲ್ಲ. ರಾಷ್ಟ್ರಮಟ್ಟದ ಸೈಕ್ಲಿಸ್ಟ್‌ಗಳನ್ನು ಕೊಡುತ್ತಿರುವ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಇನ್ನೂ ಸೈಕ್ಲಿಂಗ್ ವೆಲೊಡ್ರೋಮ್ ಇಲ್ಲ. ಪಕ್ಕಾ ಬ್ಯುಸಿನೆಸ್ ಆಗಿ ಹೋಗಿರುವ ಕ್ರಿಕೆಟ್ ಈಗ ಮಾರುಕಟ್ಟೆಯ ವಶವಾಗಿ ಹೋಗಿದೆ. ಅದು ಜಾಹೀರಾತು, ಸ್ಪಾನ್ಸರ್‌ಶಿಪ್, ಮಾಡೆಲಿಂಗ್, ಬೆಟ್ಟಿಂಗ್ ಇತ್ಯಾದಿಗಳ ಕೂಪದಲ್ಲಿ ಸಿಲುಕಿ ಸ್ಥಾಪಿತ ಹಿತಾಸಕ್ತಿಗಳಿಗೆ ಲಾಭ ತರುತ್ತಿದೆ. ಆ ಕಾರಣಕ್ಕೆ ಪ್ರತಿದಿನವೂ ಕ್ರಿಕೆಟನ್ನು ಜನಪ್ರಿಯಗೊಳಿಸುತ್ತಿದ್ದಾರೆ. ಡಿ.ಡಿ.ಯಲ್ಲೂ ಕೂಡಾ ಹಾಕಿ ಆಟದ ಪ್ರಸಾರವಿರುವುದಿಲ್ಲ! ಅಲ್ಲೂ ಸದಾ ಕ್ರಿಕೆಟ್ಟೇ!


ಧೋನಿ ಬೆಂಗಳೂರಲ್ಲಿ ಕಟಿಂಗ್ ಮಾಡಿಸಿದ ನ್ಯೂಸ್, ಶ್ರೀಶಾಂತ್ ಬೋಳು ಹೊಡೆಸಿದ ನ್ಯೂಸ್‌ಗಳ ಮಧ್ಯೆ ಹಾಕಿ ಹುಡುಗಿಯರು ಕಳೆದುಹೋಗುತ್ತಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳೂ ತಮ್ಮ ಜವಾಬ್ದಾರಿ ಮರೆತು ಕುಳಿತಿವೆ. ●

ಮೈಸೂರಿಗೆ ಬೆಂಕಿ ಇಟ್ಟ ಮುತಾಲಿಕ್

ಅನಿಲ್‌ಕುಮಾರ್ ಸುನೀಲ್‌ಕುಮಾರ್‌ಗಳೆಂಬ ಮಾರ್ವಾಡಿಗಳ ಪಾತ್ರ

ಮೈಸೂರಿನ ಶ್ರೀರಾಂಪೇಟೆಯಲ್ಲಿ ಸುನೀಲ್ ಆಟೋ ಫೈನಾನ್ಸ್ ನಡೆಸುತ್ತಿರುವ ಅನಿಲ್‌ಕುಮಾರ್-ಸುನೀಲ್ ಕುಮಾರ್ ಎಂಬ ಮಾರ್ವಾಡಿ ಸೋದರರೇ ಮೈಸೂರಿನ ಭಜರಂಗಿ ಪುಂಡರಿಗೆ ಪೋಷಕರು. ತಮ್ಮ ವೆಹಿಕಲ್ ಸೀಝಿಂಗ್ ದಂಧೆಗೆ ಇವರು ಭಜರಂಗಿ ನಾಯಕರಾದ ಪ್ರೇಂಕುಮಾರ್, ಸಂಜಯ್ ಮುಂತಾದವರನ್ನು ಬಳಸಿಕೊಳ್ಳುತ್ತಿದ್ದಾರಲ್ಲದೆ ಮುಸ್ಲಿಂ ವಿರೋಧಿ ಕೆಲಸಗಳಿಗೂ ಹಣ ಸಪ್ಲೈ ಮಾಡುತ್ತಿದ್ದಾರೆ.

ಈಗಿನ ಗಲಭೆ-ದೊಂಬಿಯಲ್ಲಿ ಈ ಮಾರ್ವಾಡಿಗಳ ಪಾತ್ರದ ಬಗ್ಗೆ ಪೊಲೀಸರು ತನಿಖೆ ನಡೆಸುವುದೊಳಿತು.



...ಪ್ರಮೋದ್ ಮುತಾಲಿಕ್ ಮೈಸೂರಿಗೆ ...ದು ಹೋದ!

...ಮೈಸೂರಿಗೆ ಈಗ ಬೆಂಕಿ ಬಿದ್ದಿದೆ!!

...ಕಳೆದ ಏಪ್ರಿಲ್‌ನಲ್ಲಿ ಸ್ಫೋಟಗೊಂಡಿದ್ದ ...ಮು ಗಲಭೆಯ ಗಾಯಗಳಿನ್ನೂ ...ಲ್ಲದಿರುವಾಗಲೇ ಮೈಸೂರು ಈ ವರ್ಷದ ...ಡನೇ ಗಲಭೆ ಅನುಭವಿಸುತ್ತಿದೆ.

...ಈ ಎರಡೂ ಕೋಮು ಗಲಭೆಗಳ ...ಚೋದನೆಯ ಕೇಂದ್ರ ಸ್ಥಳವಾಗಿರುವುದು ...ತಮಾರನಹಳ್ಳಿ.

...ನಾಯಕ ಜನಾಂಗದವರು ಹಾಗೂ ...ಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ...ಮಾ ಮೇಲೆ ಬ್ರಾಹ್ಮಣ ಹಿಂದೂ ...ಘಟನೆಗಳಿಗೆ ಮೊದಲಿನಿಂದಲೂ ಒಂದು ಕಣ್ಣಿದೆ. ...ದರೆ ಕೆಳ ಜಾತಿಯ ನಾಯಕ ಜನಾಂಗದ ...ಟೆಂಟ್ ಯುವಕರ ಕೈಗೆ ...ಚ್ಚು-ಲಾಂಗು ಕೊಡಿಸಿ ... ಏರಿಯಾದ ...ಸ್ಲಿಮರ ವಿರುದ್ಧ ಛೂ ಬಿಡುವುದು ಸಂಘ ...ವಾರಗಳ ಉದ್ದೇಶವಾಗಿತ್ತು. ಕರ್ನಾಟಕದ ...ಲ್ಲೆಡೆ ಇವರ ಪ್ಲಾನ್‌ಗಳು ಹೀಗೇ ಇರುತ್ತವೆ. ...ಸೂರು ಕೂಡ ಈಗ ಅದಕ್ಕೆ ಹೊರತಾಗಿಲ್ಲ.


ಕ್ಯಾತಮಾರನಹಳ್ಳಿಯ ಅಲಿಮಾ ಅರೇಬಿಕ್ ...ದರಸಾದೊಳಗೆ ಜೂನ್ 1 ನೇ ತಾರೀಖು ರಾತ್ರಿ ...ಹಂದಿ ತಲೆ ... ...ಲಾಯಿತು. ...ಮುಸ್ಲಿಮರನ್ನು ...ಗೆಬ್ಬಿಸುವ ...ತ್ರದ ಈ ...ೂ ...ರ್ಣೋದ್ಧಾರ ...ರ್ಶ ...ದವನು ...ರ್ ಕುಮಾರ ...ವನು.

...ವನು ಭಜರಂಗಿ ಪ್ರಮೋದ್ ಮುತಾಲಿಕನ ...ರ್ಶದಲ್ಲಿರುವಾತ. ಅದೇ ಮದರಸಾದ ...ಲ್ಲೇ ಪೇಪರ್ ಕುಮಾರನ ಮನೆಯೂ ಇದೆ. ...ಪೊಲೀಸರು ಮನಸ್ಸಿಲ್ಲದ ಮನಸ್ಸಿನಿಂದ ...ರ್ ಕುಮಾರ ಹಾಗೂ ವೆಂಕಟೇಶ್ ...ವರನ್ನು ಅರೆಸ್ಟ್ ಮಾಡುವ ಹೊತ್ತಿಗೆ ಪರಿಸ್ಥಿತಿ ...ೀರಿಹೋಗಿತ್ತು. ಏಕೆಂದರೆ ಅಷ್ಟು ಹೊತ್ತಿಗೆ ...ಂಗಿ-ಶ್ರೀರಾಮ ಸೇನೆಯವರ ಕ್ರೌರ್ಯಕ್ಕೆ, ... ಮೂವರು ಮುಸ್ಲಿಮರು ಸತ್ತಿದ್ದರು. ...ದ ಮೇಲೆ ಬರೆ ಎನ್ನುವಂತೆ ಇದನ್ನು ...ಸುತ್ತಿದ್ದ 230 ಮಂದಿ ಮುಸ್ಲಿಮರನ್ನು ... ಹಾಡಿ ಜೈಲಿಗೆ ಹಾಕಲಾಗಿತ್ತು. ಪೊಲೀಸರ ...ಜರಂಗಿ ಪರ ನಿಲುವುಗಳಿಂದಾಗಿ ...ನಲ್ಲಿ ಭುಗಿಲೆದ್ದಿರುವ ಕೋಮು ಗಲಭೆ ...ಗುವಂತೆ ಕಾಣುತ್ತಿಲ್ಲ. ಅದು ತಣ್ಣಗಾಗುವುದೂ ಇಲ್ಲ.

ಬಳಿದಾಳೆ ಪಾರ್ವತೀಶ್

ಕೋಮು ದ್ವೇಷವನ್ನೇ ಅಜೆಂಡಾ ಮಾಡಿಕೊಂಡಿರುವ ಸರ್ಕಾರ, ಬಿಜೆಪಿಯ ಅಂಗಸಂಸ್ಥೆಯ ರೀತಿ ಬದಲಾಗಿರುವ ಮೈಸೂರು ಪೊಲೀಸರು ಹಾಗೂ ಭಜರಂಗ ದಳ-ಶ್ರೀರಾಮ ಸೇನೆಯ ಪುಂಡರ ಕಾಂಬಿನೇಷನ್‌ನ ದುಷ್ಟ ಕೆಲಸಗಳೇ ಈಗಿನ ಗಲಭೆಗೆ ನೇರ ಕಾರಣವಾಗಿದೆ. ಇದರಿಂದ ಬಹಳ ಬೇಗನೆ ಪ್ರಚೋದನೆಗೊಳಗಾದ ಮುಸ್ಲಿಂ ಯುವಕರು ಪ್ರತಿದಾಳಿ ಮಾಡಿ ಪರಿಸ್ಥಿತಿ ಇನ್ನಷ್ಟು ಉದ್ವಿಗ್ನಗೊಳ್ಳುವಂತಾಯಿತು.

ಮೈಸೂರಿಗರ ದುರಾದೃಷ್ಟ ಏನೆಂದರೆ ಇಲ್ಲಿನ ಕಾಂಗ್ರೆಸ್ ಹಾಗೂ ಜಾತ್ಯತೀತ ದಳದ ನಾಯಕರಿಗೆ ಇಂಥ ಆತಂಕಕಾರಿ ಸನ್ನಿವೇಶದಲ್ಲಿ ಶಾಂತಿ ತರಲು ಏನು ಮಾಡಬೇಕು ಎಂಬುದೇ ಗೊತ್ತಿಲ್ಲ. ಹಾಗಾಗಿ ಸಿದ್ದರಾಮಯ್ಯ, ಎಚ್. ವಿಶ್ವನಾಥ್, ಶ್ರೀನಿವಾಸ್ ಪ್ರಸಾದ್ ತರದ ಕೋಮುವಾದಿಗಳನ್ನು ವಿರೋಧಿಸುವ ನಾಯಕರು ಇಲ್ಲಿದ್ದಾರಾದರೂ ಅವರು ಸ್ವಯಂಪ್ರೇರಣೆಯಿಂದ ಜನರೊಂದಿಗೆ ನಿಂತು ಪರಿಸ್ಥಿತಿ ನಿಯಂತ್ರಿಸುವುದಿಲ್ಲ. ಬದಲಾಗಿ ಎಲ್ಲವನ್ನು ಪೊಲೀಸರಿಗೆ ಬಿಟ್ಟು ಕೇವಲ ಪತ್ರಿಕಾ ಹೇಳಿಕೆ ಕೊಟ್ಟು ಸುಮ್ಮನಾಗುತ್ತಾರೆ. ಮತ್ತೊಂದೆಡೆ ಮೈಸೂರು ಪೊಲೀಸರಿಗೂ ಈಗ ಹಿಂದೂ ಕೋಮುವಾದಿ ವೈರಸ್ ಅಂಟಿಕೊಂಡಿರುವುದರಿಂದ ಅವರು ಕೇವಲ ಮುಸ್ಲಿಮರನ್ನು ಸದೆಬಡಿಯುವ ಕೆಲಸ ಶುರು ಮಾಡಿದ್ದಾರೆ.



ಮೀಡಿಯಾಗಳಂತೂ ಸರ್ಕಾರ, ಪೊಲೀಸು ಹಾಗೂ ಸಂಘ ಪರಿವಾರದ ಪಾಂಪ್ಲೆಟ್‌ಗಳಂತೆ ಪೂರ್ವಾಗ್ರಹ ಪೀಡಿತ ವರದಿಗಳಿಗೆ ಆದ್ಯತೆ ನೀಡುತ್ತಾ ಮೈಸೂರಿನ ಪರಿಸ್ಥಿತಿ ಇನ್ನಷ್ಟು ಕೆಡುವಂತೆ ಮಾಡುತ್ತಿವೆ.

ಹಂದಿ ತಲೆ ವಿವಾದ

ಕ್ಯಾತಮಾರನಹಳ್ಳಿಯ ಅಲಿಮಾ ಅರೇಬಿಕ್ ಮದರಸಾದೊಳಗೆ ಜುಲೈ 2 ರ ಗುರುವಾರ ಬೆಳಗ್ಗೆ 6.30 ರ ಸುಮಾರಿಗೆ ಹಂದಿಯೊಂದರ ರುಂಡ-ಮುಂಡಗಳು ಕಾಣಿಸಿದವು.

ಈ ಸುದ್ದಿ ಬೇಗ ಹರಡಿ ಏಳೂವರೆ ಗಂಟೆ ಸುಮಾರಿಗೆ ನೂರಾರು ಮುಸ್ಲಿಮರು ಅಲ್ಲಿ ಸೇರಿಬಿಟ್ಟರು. ಆಗಲೇ ಸ್ಥಳಕ್ಕೆ ಪೊಲೀಸರು ಬಂದರಾದರೂ ಹಂದಿಯನ್ನು ಅಲ್ಲಿಂದ ತೆರವುಗೊಳಿಸಲು ಪ್ರತಿಭಟನಾಕಾರರು ಅವಕಾಶ ನೀಡಲಿಲ್ಲ. ಈ ದುಷ್ಕೃತ್ಯಕ್ಕೆ ಕಾರಣರಾದವರನ್ನು ಪತ್ತೆಹಚ್ಚಿ ಬಂಧಿಸುವಂತೆ ಒತ್ತಾಯಿಸಿ ಕೆಲಕಾಲ ದೂಡಿದರು. ಕೊನೆಗೆ ಮದರಸಾ ಶುಚಿಯಾಯಿತಾದರೂ ನಿರೀಕ್ಷಿಸಿದಂತೆ ಗಲಭೆ ಶುರುವಾಗೇಬಿಟ್ಟಿತು. ಮುಸ್ಲಿಮರಿಂದ ಪ್ರತಿಕ್ರಿಯೆ ಬರುವ ಮೊದಲೇ ಶ್ರೀರಾಮ ಸೇನೆ ಹಾಗೂ ಭಜರಂಗಿಗಳ ಪುಂಡರ ಗುಂಪು ದಾಂಧಲೆ ಆರಂಭಿಸಿಬಿಟ್ಟರು. ಗೌಸಿಯಾ ನಗರ, ಶಾಂತಿನಗರ, ವಿನಾಯಕ ನಗರ, ರಾಜೀವ್‌ನಗರ, ಬೀಡಿ ಕಾಲೋನಿ, ಕಲ್ಯಾಣಗಿರಿ ಏರಿಯಾಗಳಲ್ಲಿ ದೊಂಬಿ ಕಾಣಿಸಿತು. ಗೌಸಿಯಾ ನಗರದ ಲಾರಿ ಡ್ರೈವರ್ ವೃತ್ತಿಯ ಮುಬಾರಕ್ ಎಂಬ ಯುವಕ ತನ್ನ ಪಾಡಿಗೆ ಬೈಕಿನಲ್ಲಿ ಹೋಗುತ್ತಿದ್ದಾಗ ತಲವಾರ್‌ಗಳನ್ನು ಹಿಡಿದಿದ್ದ ಭಜರಂಗಿಗಳ ಗುಂಪು ಅಡ್ಡಗಟ್ಟಿ ಕೊಚ್ಚಿ ಕೊಂದಿತು. ಅದಾದ ಕೆಲ ಹೊತ್ತಿನಲ್ಲೇ ಅಪ್ಪು ಅಲಿಯಾಸ್ ತಿರುಪತಿಯ ಹತ್ಯೆಯಾಯಿತು. ಇವನನ್ನು ಕೊಂದವರೂ ಚೆಡ್ಡಿಗಳೇ. ಈ ಅಪ್ಪು ಆಂಧ್ರದವನಾಗಿದ್ದು ಕನ್ನಡ ಸರಿಯಾಗಿ ಬರದ ಕಾರಣ ತನ್ನನ್ನು ಅಡ್ಡಗಟ್ಟಿದವರೊಂದಿಗೆ ಹಿಂದಿಯಲ್ಲಿ ಮಾತನಾಡಿದ್ದ. ಅಷ್ಟೇ ಸಾಕೆಂಬಂತೆ ಅಪ್ಪು ಮುಸ್ಲಿಂ ಎಂದು ಭಾವಿಸಿ ಅವನನ್ನು ಕೊಲ್ಲಲಾಯಿತು. ವಸೀಂ ಎಂಬ ಇನ್ನೊಬ್ಬನನ್ನು ಕ್ಯಾತಮಾರನಹಳ್ಳಿಯ ಹುಡುಗರು ಬೆನ್ನಟ್ಟಿ ಹೋಗಿ ಇರಿದು ಗಾಯಗೊಳಿಸಿದರು. ಈ ಹತ್ಯೆ ದಾಂಧಲೆಗಳು ನಡೆಯುತ್ತಿದ್ದಾಗ ಉದಯಗಿರಿ ಪೊಲೀಸರು ಹತ್ತಿರದಲ್ಲೇ ಇದ್ದರೂ ಬಿಜೆಪಿ



ಪರಿವಾರದ ಕೊಲೆಗಡುಕರನ್ನು ತಡೆಯಲೂ ಇಲ್ಲ. ಕೊನೆಪಕ್ಷ ಚೆದುರಿಸಿ ಓಡಿಸಲೂ ಇಲ್ಲ.

ಆದರೆ ಯಾವಾಗ ಈ ಹತ್ಯೆಗಳ ಸುದ್ದಿ ಹರಡಿತೋ ಆಗ ರೊಚ್ಚಿಗೆದ್ದ ಮುಸ್ಲಿಮರು ಪ್ರತಿಭಟಿಸುತ್ತಾ ರಸ್ತೆಗಿಳಿದರು. ಕಲ್ಲು ತೂರಾಟ, ವಾಹನಗಳಿಗೆ ಬೆಂಕಿ ದೊಂಬಿ ಶುರುವಾಯಿತು. ಆಗ ಎಚ್ಚೆತ್ತರು-ನೋಡಿ, ಪೊಲೀಸರು ಮುಖಮೂತಿ ನೋಡದೆ ಮುಸ್ಲಿಮರನ್ನು ಲಾಠಿಯಿಂದ ಚಚ್ಚಿ, ಅಶ್ರುವಾಯು ಸಿಡಿಸಿ ಕೊನೆಗೆ ಗುಂಪಿನ ಮೇಲೆ ನೇರವಾಗಿ ಫೈರಿಂಗ್ ಕೂಡ ಮಾಡಿಬಿಟ್ಟರು.

ಅಲ್ಲಿ ಜುನೈದ್ ಪಾಶ ಎಂಬ ಹದಿನಾರರ ಬಾಲಕ ಸತ್ತ.

ಅಷ್ಟು ಹೊತ್ತಿಗೆ ಡಿಸಿಪಿ ಡಿಸೋಜಾ ಹಾಗೂ ಎಸಿಪಿ ಹನುಮಂತಪ್ಪನವರಿಗೂ ಪೆಟ್ಟಾಗಿತ್ತು. ಒಂದು ಪೊಲೀಸ್ ಜೀಪಿಗೆ ಬೆಂಕಿ ಬಿದ್ದಿತ್ತು.

ಇದರಲ್ಲಿ ಮುಸ್ಲಿಂ ಯುವಕರ ಸಿಟ್ಟು, ಆಕ್ರೋಶ ವ್ಯಕ್ತವಾಗಿತ್ತಾದರೂ ಅದಕ್ಕೂ ಪೊಲೀಸರೇ ಕಾರಣರಾಗಿದ್ದರು. ಮಸೀದಿಯೊಳಗೆ ಹಂದಿ ತಲೆ ಹಾಕಿದವರನ್ನು ಪತ್ತೆಹಚ್ಚದೆ, ಮೂವರು ಮುಸ್ಲಿಮರ ಹತ್ಯೆಯಾಗುತ್ತಿರುವಾಗ ತಡೆಯದೆ ಸುಮ್ಮನಿದ್ದ ಪೊಲೀಸರು ಈ ದೌರ್ಜನ್ಯಗಳ ವಿರುದ್ಧ ಮುಸ್ಲಿಮರು ಪ್ರತಿಭಟಿಸಲು ಬೀದಿಗಿಳಿದಾಗ ಕೈಗೆ ಗನ್ ಎತ್ತಿಕೊಂಡಿದ್ದರು.

ಇಡೀ ಮೈಸೂರಿನ ದೊಂಬಿಯಲ್ಲಿ ಪೊಲೀಸರು ಭಜರಂಗಿ ಪುಂಡರೊಂದಿಗೆ ಶಾಮೀಲಾಗಿದ್ದುದು ಗೊತ್ತಾಗುವಂತಿದೆ.

ಗಿರಿಧರ್‌ಗೆ ಇರಿತ, ಪೊಲೀಸರು ಮಾಡಿಸಿದ ಬಂದ್

ಗುರುವಾರದ ದೊಂಬಿಗಳು ಕಂಟ್ರೋಲಿಗೆ ಬರುವ ಬದಲಾಗಿ ಶುಕ್ರವಾರ ಬೇರೊಂದು ರೂಪ ತಳೆಯಿತು. ಮೈಸೂರು ಜಿಲ್ಲಾ ಬಿಜೆಪಿ ಯುವ ಮೋರ್ಚಾ ನಾಯಕ ಗಿರಿಧರ್ ಇರಿತಕ್ಕೊಳಗಾದ. ಇವನು ಗಾಂಧಿನಗರದ ತನ್ನ ಮನೆ ಮುಂದೆ ಮೊಬೈಲಿನಲ್ಲಿ ಮಾತಾಡುತ್ತಾ ನಿಂತಿದ್ದಾಗ ಎರಡು ಬೈಕುಗಳಲ್ಲಿ ಬಂದ ಆಗಂತುಕರು ಇರಿದು ಪರಾರಿಯಾದರು. ಸಾಮಾನ್ಯವಾಗಿ ಎಲ್ಲೇ ಕೋಮುಗಲಭೆಗಳಾದರೂ ಆಯಾ ಏರಿಯಾದ ಬಿಜೆಪಿ, ಆರ್‌ಎಸ್‌ಎಸ್, ಎಬಿವಿಪಿ, ಭಜರಂಗ ದಳ, ಹಿಂದೂ ಜಾಗರಣ ವೇದಿಕೆ, ವಿಶ್ವಹಿಂದೂ ಪರಿಷತ್‌ನವರು ಭಾಗಿಯಾಗಿ ದೊಂಬಿ ನಡೆಸುತ್ತಾರೆ.

▶▶▶12

ಮೈಸೂರು ಪೊಲೀಸರಿಗೆ ಭಜರಂಗಿ ಪ್ರೇಮ ಮುಸ್ಲಿಮರ ಮೇಲೆ ದ್ವೇಷ


ಕಳೆದ ಹಲವಾರು ತಿಂಗಳುಗಳಿಂದ ನಡೆಯುತ್ತಿರುವ ವಿದ್ಯಮಾನ ಇದು. ಮೈಸೂರು ಮಾತ್ರವಲ್ಲ, ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ ಸುತ್ತಾಮುತ್ತ ಎಲ್ಲಿ ಏನೇ ನಡೆದರೂ ಅದನ್ನು ಮುಸ್ಲಿಮರ ಪ್ರಗತಿಪರ ಸಂಘಟನೆಯಾಗಿರುವ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (ಕೆಎಫ್‌ಡಿ)ಯನ್ನು ಗುರಿ ಮಾಡಲಾಗುತ್ತಿತ್ತು. ಈಗ ಕೆಎಫ್‌ಡಿ ಇಲ್ಲ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ(ಪಿಎಫ್‌ಐ) ಎಂಬ ಹೊಸ ಸಂಘಟನೆ ಹುಟ್ಟಿದೆ. ಇದು ಮೈಸೂರಿನಲ್ಲಂತೂ ಬಲಿಷ್ಠ ಸಂಘಟನೆಯಾಗಿ ಬೆಳೆದಿದ್ದು ಕೇವಲ ಹಿಂದೂ ಕೋಮುವಾದಿಗಳ ವಿರುದ್ಧ ಮಾತ್ರವಲ್ಲದೇ ಅರೆ ಕೋಮುವಾದಿ ಕಾಂಗ್ರೆಸ್ ವಿರುದ್ಧವೂ ಪ್ರತಿರೋಧ ತೋರುತ್ತಿದೆ. ಕಳೆದ ವಿಧಾನಸಭಾ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ತನ್ವೀರ್ ಸೇಠ್ ವಿರುದ್ಧ ಪಿಎಫ್‌ಐಯ ಖಲೀಮುಲ್ಲಾ 20 ಸಾವಿರ ಓಟು ಗಳಿಸಿ ಕಾಂಗ್ರೆಸ್‌ಗೆ ನಡುಕ ಹುಟ್ಟಿಸಿದ್ದರು. ಹಾಗಾಗಿ ಮುಸ್ಲಿಮರ ಈ ಸಂಸ್ಥೆಯ ಬಗ್ಗೆ ಸಂಘ ಪರಿವಾರಿಗಳಿಗೆ, ಪೊಲೀಸರಿಗೆ, ಕೊನೆಗೆ ತನ್ವೀರ್ ಸೇಠ್‌ಗೂ ಅಸಮಾಧಾನವಿದೆ. ಮುಸ್ಲಿಮರು ಸಂಘಟಿತರಾಗುವ ಪ್ರಯತ್ನವನ್ನು ಸಂದರ್ಭ ಸಿಕ್ಕಾಗಲೆಲ್ಲಾ ಮುರಿದು ಹಾಕಲು ಇವರೆಲ್ಲ ಪ್ಲಾನ್ ಮಾಡುತ್ತಿರುತ್ತಾರೆ.

ಈಗಿನ ಗಲಭೆಯಲ್ಲೂ ಕೂಡ. ಈ ಗುರುವಾರ ಬೆಳಗ್ಗೆ ಪೆಟ್ರೋಲ್ ಬಾಂಬ್ ಒಂದು ಮೈಸೂರಲ್ಲಿ ಸ್ಫೋಟಿಸಿದೆ. ಇದು ಯಾರ ಕೈವಾಡ ಎಂಬುದು ಗೊತ್ತಾಗಿಲ್ಲ. ಆದರೆ ತಮ್ಮವರ ಅಕ್ರಮ ಬಂಧನ ಖಂಡಿಸಿ ಜೈಲ್ ಭರೋ ನಡೆಸಲು ಬಂದಿದ್ದ ಮೂರು ಸಾವಿರ ಮುಸ್ಲಿಮರೊಂದಿಗೆ ಪೊಲೀಸರು ನೀಚವಾಗಿ ವರ್ತಿಸಿದ್ದಾರೆ. 300 ಜನರನ್ನು ಅರೆಸ್ಟ್ ಮಾಡಿದ್ದಾರೆ. ಅತೀ ದಾರುಣ ಸಂಗತಿ ಏನೆಂದರೆ ಪೊಲೀಸರು ಪ್ರತಿಭಟನೆಗಿಳಿದ ಮುಸ್ಲಿಂ ಯುವಕರನ್ನು ಮನಸೋಇಚ್ಛೆ ಥಳಿಸುತ್ತಿದ್ದಾರೆ.

ಪ್ರತ್ಯಕ್ಷದರ್ಶಿಯೊಬ್ಬರ ಪ್ರಕಾರ ಟಾಟಾ ಸುಮೋದಲ್ಲಿ ಹೋಗುತ್ತಿದ್ದ ಮುಸ್ಲಿಂ ಯುವಕರನ್ನು ತಡೆದ ಪೊಲೀಸರು ಅವರನ್ನೆಲ್ಲ ರಸ್ತೆಗೆ ಹಾಕಿ ತುಳಿದು, ಒದ್ದು, ಹೊಡೆದಿದ್ದಾರೆ. ಈ ಹೀನ ದೌರ್ಜನ್ಯ ನಡೆಯುತ್ತಿದ್ದಾಗ ಕೆಲ ಪೊಲೀಸರು ಆ ಮುಸ್ಲಿಂ ಯುವಕರತ್ತ ಗನ್ ಗುರಿ ಮಾಡಿ ನಿಂತಿದ್ದರಂತೆ.

ಇಂತಹ ದೌರ್ಜನ್ಯಗಳಿಗೆ ಬಲಿಯಾಗುವ ಪ್ರತಿ ಯುವಕನ ಎದೆಯಲ್ಲೂ ಸೇಡು, ಆಕ್ರೋಶದ ಜ್ವಾಲಾಮುಖಿ ಹುಟ್ಟುತ್ತದೆಂದು ಪೊಲೀಸರಿಗೆ ಹೇಗೆ ಅರ್ಥವಾಗಬೇಕು ಹೇಳಿ?

ಪ್ರಜ್ವಲ್ ಯೋಗೇಶ್ ರಂಗಿನಾಟ




ಉಂಡು, ಆಡಿ, ಹೊದ್ದು ಮಲಗುತ್ತಾ, ಶಾಲೆ, ಕಾಲೇಜಿಗೆ ಹೋಗಿ ಎರಡಕ್ಷರ ಕಲಿಯುವ ವಯಸ್ಸಿನ ಹುಡುಗರ ಕೈಗೆ ಹಣದ ಅಮಲು, ಬಣ್ಣದ ತೆವಲು ಜೊತೆಯಾದರೆ ಏನಾಗುತ್ತದೆ? ಎಂದು ಪ್ರಶ್ನಿಸಿದರೆ ಉತ್ತರವಾಗಿ ಸಿಗುವುದು ಯೋಗೇಶ್ ಮತ್ತು ಪ್ರಜ್ವಲ್ ಎಂಬ ಇನ್ನೂ ಮೀಸೆ ಚಿಗುರದ ಇಬ್ಬರು ಚಪೋರಿ ಹುಡುಗರು.

ಮೀಸೆ ಬಂದವನಿಗೆ ದೇಶ ಕಾಣಲ್ಲ ..... ಬಂದವಳಿಗೆ ನೆಲ ಕಾಣಲ್ಲ ಅನ್ನೋ ಮಾತಿದೆ. ಹಾಗೇ ಆಗಿದೆ ಈ ಇಬ್ಬರು ಹುಡುಗರ ಕಥೆ. ಸಿನಿಮಾದ ಎಬಿಸಿಡಿ ತಿಳಿಯುವ ಮೊದಲೇ ದೊಡ್ಡ ಮಟ್ಟದ ಸ್ಟಾರ್‌ಗಿರಿ, ಬದುಕು, ಬವಣೆಗಳನ್ನು ಅರಿಯುವ ಮುನ್ನವೇ ಜೇಬು ತುಂಬಾ ಕಾಸು, ಸುತ್ತಾಡಲು ಮಜಬೂತು ಕಾರುಗಳು... ಹೀಗೆ ಆಡುವ ಹುಡುಗರಿಗೆ ಇಷ್ಟುಬೇಗ ವಿಲಾಸೀ ಜೀವನ ಕೈಗೆಟುಕಿಬಿಟ್ಟರೆ ಮತ್ತೇನಾಗಲು ಸಾಧ್ಯ?

ಹೀಗಾಗಿ ಇನ್ನೂ ಮೂಗಿನ ಕೆಳಗೆ ನೆಟ್ಟಗೆ ಮೀಸೆಯೇ ಮೂಡದ ಪ್ರಜ್ವಲ್ ಹಾಗೂ ಲೂಸ್ ಮಾದ ಎಂಬ 20ರ ವಯಸ್ಸಿನ ಇಬ್ಬರು ಹುಡುಗರ ಹುಚ್ಚಾಟಗಳು ದಿನದಿಂದ ದಿನಕ್ಕೆ ಮಿತಿಮೀರುತ್ತಾ ಹೋಗುತ್ತಿದೆ.

ಪೋರ್ಕಿಯಾದನೇ ಪ್ರಜ್ವಲ್?

ಸಜ್ಜನ ಎಂದೇ ಉದ್ಯಮದಲ್ಲಿ ಗುರುತಿಸಿಕೊಂಡ ದೇವರಾಜ್ ಅವರು ಪ್ರೇಮಿಸಿದ ಚಿತ್ರಲೇಖಾರನ್ನೇ ಮದುವೆಯಾಗಿ, ಕಲಾವಿದ ದಂಪತಿಗಳೆಂದರೆ ಮೂಗು ಮುರಿಯುತ್ತಿದ್ದವರ ಮಧ್ಯೆಯೇ ಆದರ್ಶಯುತವಾಗಿ ಸಂಸಾರ ಸಾಗಿಸುತ್ತಾ ಸೋಲು, ಗೆಲುವುಗಳನ್ನು ಸರಿಸಮವಾಗಿ ತೂಗಿಸಿಕೊಂಡುಬಂದವರು. ಅದೇ ದೇವರಾಜ್‌ರ ಪುತ್ರ ಪ್ರಜ್ವಲ್ ಉದ್ಯಮಕ್ಕೆ ಕಾಲಿಟ್ಟ



ಒಂದೆರಡು ವರ್ಷಗಳಲ್ಲೇ ತನ್ನ ಕೃಷ್ಣಲೀಲೆಗಳಿಂದ ಇಷ್ಟೊಂದು ಫೇಮಸ್ ಆಗುತ್ತಾನೆ ಎಂದು ಯಾರೂ ಊಹಿಸಿರಲಿಲ್ಲ. 'ಮೆರವಣಿಗೆ' ಚಿತ್ರದಲ್ಲಿ ನಟಿಸುವಾಗಲೇ ಆ ಚಿತ್ರದ ನಾಯಕಿ ಅಂದ್ರಿತಾಳೊಂದಿಗೇ ನಾದಿಂದಿನ್ನಾ... ಅಂತಾ 'ಮೆರವಣಿಗೆ' ಆರಂಭಿಸಿದ್ದ. ಈ ಬಗ್ಗೆ ಪತ್ರಿಕೆಗಳು ಬರೆದಾಗ ಅವರ ವಿರುದ್ಧವೇ ಮುನಿಸಿಕೊಂಡು ಮೂತಿ ತಿರುಗಿಸಿದ್ದ. ಆದರೆ ಆಗ ಈತನದ್ದು ಇನ್ನೂ ಹುಡುಗಾಟಿಕೆ ಎಂದು ಮಾಧ್ಯಮದವರೂ ನಕ್ಕು ಸುಮ್ಮನಾಗಿಬಿಟ್ಟಿದ್ದರು.

ಪ್ರಜ್ವಲ್ ಪ್ರಲಾಪ

ತನ್ನ ಮೊದಲ ಚಿತ್ರ 'ಸಿಕ್ಸರ್' ಸಮಯದಲ್ಲಿ ಮಗ್ಗನಂತಿದ್ದ ಪ್ರಜ್ವಲ್ 'ಮೆರವಣಿಗೆ' ಮಾಡುವ ಹೊತ್ತಿಗಾಗಲೇ ಕಳ್ಳಾಟ ಪ್ರಾರಂಭಿಸಿದ್ದ. ಚಿತ್ರೀಕರಣಕ್ಕಾಗಿ ಬಿ.ಆರ್. ಹಿಲ್ಸ್‌ನ ಫಾರೆಸ್ಟ್‌ಗೆ ಹೋದಾಗಲಂತೂ ಈತನ ಆಟ ಇನ್ನೂ ಹೆಚ್ಚಾಗಿತ್ತು, ತನ್ನ ಕಾಲ್‌ಶೀಟ್ ಕೇಳಲು ಬಂದ ನಿರ್ಮಾಪಕರಿಗೆ "ಅಂದ್ರಿತಾಳನ್ನೇ ಹೀರೋಯಿನ್ ಮಾಡಿ" ಎಂದು ಆಜ್ಞಾಪಿಸುತ್ತಿದ್ದ. ಇದೇ ಕಾರಣಕ್ಕೇ 'ಸಜ್ಜನರು' ಚಿತ್ರಕ್ಕೂ ಪ್ರಜ್ವಲ್

ಮೂಗಿನ ಕೆಳಗೆ ನೆಟ್ಟಗೆ ಮೀಸೆಯೇ ಮೂಡದ ಪ್ರಜ್ವಲ್ ಹಾಗೂ ಲೂಸ್ ಮಾದ ಎಂಬ 20ರ ವಯಸ್ಸಿನ ಇಬ್ಬರು ಹುಡುಗರ ಹುಚ್ಚಾಟಗಳು ದಿನದಿಂದ ದಿನಕ್ಕೆ ಮಿತಿಮೀರುತ್ತಾ ಹೋಗುತ್ತಿದೆ. ಒಮ್ಮೆ ಬೇಲಿ ಹಾರಿ ರುಚಿ ಕಂಡವನಿಗೆ ಮತ್ತದೇ ಸಂಜೆಗತ್ತಲ ಚಡಪಡಿಕೆಗಳು ಶುರುವಾಗುವುದು ಸಹಜ. ಅಂತೆಯೇ ಪ್ರಜ್ವಲ್ ಮತ್ತು ಲೂಸ್‌ಮಾದರ ಚಾರಿತ್ರ್ಯವೂ ಸಿನಿಮಾದಿಂದ ಸಿನಿಮಾಕ್ಕೆ ಬದಲಾಗುತ್ತಾ ಹೋಗುತ್ತಿದೆ. ಆದಷ್ಟು ಬೇಗ ಅವರ ಪೋಷಕರು ತಮ್ಮ ಮಕ್ಕಳನ್ನು ಸರಿದಾರಿಯಲ್ಲಿ ಕೊಂಡೊಯ್ಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ತಂತಮ್ಮ ಮಕ್ಕಳಿಗೆ ಮೂಗುದಾರ ಹಾಕಲಿ.

● ಅರುಣ್‌ಕುಮಾರ್ .ಜಿ



ಅಂದ್ರಿತಾ

ಜೊತೆ ಅಂದ್ರಿತಾಳೇ ಬುಕ್ ಆದಳು. ಇದೇ ಹೊತ್ತಿಗೆ ಲೀಲಾ ಪ್ಯಾಲೇಸ್‌ನಂಥ ಸೆವೆನ್ ಸ್ಟಾರ್ ಹೋಟೇಲುಗಳಿಗೆ ಪ್ರಜ್ವಲ್ ಹುಡುಗಿಯರನ್ನು ಕರೆದುಕೊಂಡು ಹೋಗಿ ಅವರೊಂದಿಗೆ ಉರುಳು ಸೇವೆ ಮಾಡುತ್ತಿರುತ್ತಾನೆ ಎಂಬ ಸುದ್ದಿಯೂ ಎಲ್ಲೆಡೆ ಹಬ್ಬಲಾರಂಭಿಸಿತು.




ಅಭಿನಯಶ್ರೀ

ಇದೆಲ್ಲಾ ಒಂದೆಡೆಯಾದರೆ, ಚಿತ್ರೀಕರಣಕ್ಕಾಗಿ ಔಟ್ ಡೋರ್‌ಗೆ ಹೋದಾಗಲಂತೂ ಸಂಜೆ ಶೂಟಿಂಗ್ ಪ್ಯಾಕಪ್ ಹೇಳುತ್ತಿದ್ದಂತೇ ಈತನಿಗೆ ತೀರ್ಥಪ್ರಸಾದದ ವ್ಯವಸ್ಥೆಯನ್ನೂ ಮಾಡಬೇಕು ಎಂಬುದೇ ಆತಂಕದ ವಿಚಾರ. ನಿನ್ನೆಮೊನ್ನೆಯ ತನಕ ಆಡುವ ಹುಡುಗನಂತಿದ್ದ ಪ್ರಜ್ವಲ್‌ಗೆ ಪ್ರತಿದಿನ ಕುಡಿತ ಬೇಕು ಎಂದರೆ ಯಾರಿಗಾದರೂ ಆಶ್ಚರ್ಯವಾಗದೇ ಇರದು. ದಿ. ಉದಯಕುಮಾರ್ ಅವರ ಪುತ್ರ ವಿಶ್ವವಿಜೇತ ಎಂಬ ಪ್ರತಿಭಾವಂತ ಯುವಕ ಬದುಕಿಬಾಳಬೇಕಾದ ಸಮಯದಲ್ಲೇ, ಕೈತುಂಬ ಅವಕಾಶಗಳಿದ್ದ ದಿನಗಳಲ್ಲೇ ಕುಡಿತಕ್ಕೆ ದಾಸನಾಗಿ ಜೀವಬಿಟ್ಟ ಎಂಬ ವಿಚಾರವನ್ನು ಪ್ರಜ್ವಲ್‌ನಂಥ ಸಣ್ಣ ವಯಸ್ಸಿನ ಹುಡುಗರು ಅರಿತರೆ ಚೆಂದ.

ಲವ್ ಟ್ರೈನಿಂಗ್ ಕ್ಲಾಸ್

ಚಿತ್ರೀಕರಣದ ಸಂದರ್ಭದಲ್ಲಿ ತನ್ನ ಪಾಲಿನ ಶಾಟ್ ಮುಗಿಯುತ್ತಿದ್ದಂತೇ ರೆಸ್ಟ್‌ರೂಮಿಗೆ ಹೋಗಿ ಕದವಿಕ್ಕಿಕೊಳ್ಳುವ ಚಾಳಿ ಪ್ರಜ್ವಲ್‌ನದ್ದು. ಹಾಗೆ ಗಂಟೆಗೊಮ್ಮೆ ಘಳಿಗೆಗೊಮ್ಮೆ ಹೋಗಿ ಬಾಗಿಲು ಮುಚ್ಚಿಕೊಳ್ಳುವ ಈತ ಒಳಗೆ ಒಬ್ಬನೇ ಇದ್ದಿದ್ದರೆ ಪರವಾಗಿಲ್ಲ, ಪ್ರತಿದಿನ ಈತನಿರುವ ಶೂಟಿಂಗ್ ಸ್ಥಳಕ್ಕೆ ಇಬ್ಬರು ಹುಡುಗರು ಮೂರು ಜನ ಹುಡುಗಿಯರು ವಿಸಿಟ್ ನೀಡುತ್ತಿರುತ್ತಾರೆ. ಅದರಲ್ಲೂ ರಾಗಿಣಿ ಎಂಬ ಹುಡುಗಿ ಮತ್ತು ರಂಜಿತ್ ಎಂಬ ಹುಡುಗರಿಬ್ಬರಿಗೂ ಪ್ರಜ್ವಲ್‌ನ ಹಿಂದೆ ತಿರುಗುವುದೇ ಫುಲ್ ಟೈಂ ಕೆಲಸ. ಇವರನ್ನು ನೇರವಾಗಿ ಕರೆದೊಯ್ದು ರೂಮಿನೊಳಗೆ ಕೂರಿಸಿಕೊಳ್ಳುವ ಪ್ರಜ್ವಲ್ ಒಳಗೆ ಏನು ಮಾಡುತ್ತಾನೆ ಎಂಬುದೇ ಯೂನಿಟ್‌ನವರಿಗೆಲ್ಲಾ ಪ್ರಶ್ನೆಯಾಗಿ ಉಳಿದುಬಿಟ್ಟಿದೆ! ಹಾಗೊಮ್ಮೆ ಯಾರಾದರೂ ಯಾರಪ್ಪಾ ಅದು, ಇಲ್ಲಾಕೆ ಬರ್ತಾರೆ ಅಂತ ಕೇಳಿದರೆ "ಅವರು ನನ್ನ ಫ್ರೆಂಡ್ಸು, ಒಬ್ಬರನ್ನೊಬ್ಬರು ಲವ್ ಮಾಡ್ತಿದಾರೆ" ಎನ್ನುತ್ತಾನೆ!

ಇತ್ತೀಚೆಗೆ ನಡೆದ ಅಮೃತಮಹೋತ್ಸವದ ತಾಲೀಮು ಸ್ಥಳಕ್ಕೂ ಲಗ್ಗೆಯಿಡುತ್ತಿದ್ದ ಈತನ ಗರ್ಲ್ ಫ್ರೆಂಡುಗಳ ಕಾಟದಿಂದ ಕೋಪಗೊಂಡ ಕ್ಯಾಪ್ಟನ್ ರವಿಚಂದ್ರನ್ "ಒಂದೆರಡು ದಿನಗಳಾದರೂ ನಿನ್ನ ಗರ್ಲ್‌ಫ್ರೆಂಡುಗಳನ್ನು ಇಲ್ಲಿ ಸೇರಿಸಬೇಡ" ಎಂದು ಕಿವಿ ಹಿಂಡಿ ಬುದ್ಧಿ ಹೇಳಿದ್ದರು. ಇದೇ ಸಮಯಧಲ್ಲಿ ಹಿರಿಯರ ಮುಂದೆಯೇ ಸಿಗರೇಟ್ ಹಚ್ಚಿ ಹೊಗೆ ಬಿಡುತ್ತಿದ್ದ ಈತನ ವರ್ತನೆ ಅನೇಕರ ಸಿಟ್ಟಿಗೆ ಕಾರಣವಾಗಿತ್ತು.



ಪತ್ರಕರ್ತರೊಂದಿಗೂ ರಗಳೆ!

ದೇವರಾಜ್ ಚಿತ್ರರಂಗಕ್ಕೆ ಕಾಲಿಟ್ಟು ಎರಡೂವರೆ ದಶಕಗಳೇ ಕಳೆದರೂ ಈವರೆಗೂ ಅವರು ಯಾವ ಪತ್ರಕರ್ತರೊಂದಿಗೂ ರಗಳೆ ಮಾಡಿಕೊಂಡ ಉದಾಹರಣೆಗಳಿಲ್ಲ. ಆದರೆ ಪ್ರಜ್ವಲ್ ಮಾತ್ರ ತಾನು ನಟಿಸಿದ 'ಗುಲಾಮ' ಚಿತ್ರದ ಬಗ್ಗೆ ಪತ್ರಿಕೆಗಳು ಬರೆದ ವಿಮರ್ಶೆಗಳನ್ನೇ ಟೀಕಿಸಿದ. "ಪತ್ರಕರ್ತರು ಬಾಯಿಗೆಬಂದಂತೆ ವಿಮರ್ಶೆ ಬರೆದು ನನ್ನ ಭವಿಷ್ಯಾನ ಹಾಳು ಮಾಡ್ತಿದಾರೆ" ಎಂದು ಟಿವಿ ಛಾನೆಲ್ಲುಗಳ ಮುಂದೆ ಹೇಳಿಕೆ ನೀಡಿದ್ದ. ಚಿತ್ರರಂಗದಲ್ಲಿ ಈಗಷ್ಟೇ ಪಿಳಿಪಿಳಿ ಅಂತಾ ಕಣ್ಣುಬಿಡುತ್ತಿರುವ ಈ ಹುಡುಗ ಹೀಗೆ ನಾಲಿಗೆ ಉದ್ದಮಾಡಿದರೆ ಪತ್ರಕರ್ತರಾದರೂ ಸುಮ್ಮನೇ ಬಿಡುತ್ತಾರಾ? ಸಮಯಕ್ಕಾಗಿ ಕಾದುಕುಳಿತಿದ್ದ ಪತ್ರಕರ್ತರು 'ಕೆಂಚ' ಚಿತ್ರದ ಪತ್ರಿಕಾಗೋಷ್ಠಿಯ ಸಮಯದಲ್ಲಿ ಇನ್ನೇನು ಪ್ರಜ್ವಲ್ ಮಾತು ಪ್ರಾರಂಭಿಸಬೇಕು. ಆಗ ಎಲ್ಲ ಪತ್ರಕರ್ತರೂ ಎದ್ದುನಿಂತು ಸಾಮೂಹಿಕವಾಗಿ ಆತನಿಗೆ "ಧಿಕ್ಕಾರ" ಹೇಳಿಬಿಟ್ಟರು. ಆಗಲೂ ಒಂದು ಸಣ್ಣ ಕ್ಷಮೆಯನ್ನೂ ಕೋರದ ಪ್ರಜ್ವಲ್ ತನ್ನ ಧಿಮಾಕು ಪ್ರದರ್ಶಿಸಿದ್ದ.

ಮಗನ ಹುಂಬತನ ಮತ್ತು ಮಾಧ್ಯಮದವರ ಪ್ರತಿರೋಧವನ್ನು ಅರಿತ ಆತನ ತಂದೆ ದೇವರಾಜ್ "ಹೀಗೇ ಬಿಟ್ಟರೆ ವಿವಾದ ಬೆಳೆದು ನಿಂತು, ಮಗನ ಭವಿಷ್ಯ ಅವನಿಂದಲೇ ಎಕ್ಕುಟ್ಟಿಹೋಗುತ್ತದೆ" ಎಂಬ ಸತ್ಯವನ್ನು ಅರಿತು ಮಗನ ಮೊಬೈಲಿನಿಂದಲೇ "ನನ್ನ ಎಲ್ಲ ಹಿತೈಷಿಗಳಿಗೆ ವಂದನೆಗಳು, ನನ್ನ ಸಿನಿಮಾ ಕುರಿತು ನೀವೆಲ್ಲ ತುಂಬಾ ಚೆನ್ನಾಗಿ ಬರೆದು ಪ್ರೋತ್ಸಾಹಿಸಿದ್ದೀರ, ಇನ್ನು ಮುಂದೆಯೂ ನಿಮ್ಮ ಆಶೀರ್ವಾದ ಮುಂದುವರೆಯಲಿ" ಎಂಬ ಎಸ್ಸೆಮೆಸ್ ಅನ್ನು ಎಲ್ಲ ಪತ್ರಕರ್ತರಿಗೂ ಸಾರಾಸಗಟಾಗಿ ಕಳಿಸಿ ನಿಟ್ಟುಸಿರು ಬಿಟ್ಟಿದ್ದರು.

ಕಾಯೋ ತಂದೆಯೇ... 'ದೇವಾ' ಕರುಣಿಸು!

ಹಿರಿಯ ನಿರ್ದೇಶಕರೊಬ್ಬರು "ಒಳ್ಳೆ ಸಿನಿಮಾಗಳನ್ನು ಒಪ್ಪಿಕೊ. ಸಿಕ್ಕಸಿಕ್ಕ ಸಿನಿಮಾಗಳಲ್ಲೆಲ್ಲಾ ನಟಿಸಬೇಡ" ಎಂದು ಬುದ್ಧಿವಾದ ಹೇಳಿದರೆ "ಅಯ್ಯೋ ಹೋಗಿ ಸಾರ್, ನಾನೇನು ಸಿನಿಮಾದಲ್ಲಿ ನಟಿಸಿ ದುಡ್ಡು ಮಾಡಬೇಕಾ? ನಮ್ಮಪ್ಪ ಮಾಡಿಟ್ಟಿರೋದೇ ಬೇಕಾದಷ್ಟಿದೆ" ಎಂಬ ದುರಹಂಕಾರದ ಮಾತನ್ನಾಡಿದ್ದಾನೆ. ಈತ 'ಸೂಪರ್ ಮ್ಯಾನ್' ಚಿತ್ರದಲ್ಲಿ ನಟಿಸುತ್ತಿರುವುದರಿಂದ ತಾನೇ 'ಸೂಪರ್ ಮ್ಯಾನ್' ಎಂಬ ಭ್ರಮೆಗೆ ಬದ್ದಿರುವಂತಿದೆ. ಪ್ರಜ್ವಲ್‌ನನ್ನು ಹತ್ತಿರದಿಂದ ಬಲ್ಲವರ ಪ್ರಕಾರ ಈತನಿಗೆ ಮನೆಯಲ್ಲಿ ತಂದೆ ತಾಯಿ ಬುದ್ಧಿವಾದ ಹೇಳಲುಹೋದರೆ ದೇವರಾಜ್ ಮತ್ತು ಚಿತ್ರಲೇಖಾರ ಮೇಲೇ ರೇಗಿಬೀಳುತ್ತಾನಂತೆ.

ಒಟ್ಟಾರೆಯಾಗಿ, ಪ್ರಜ್ವಲ್‌ನ ಉಜ್ವಲ ಭವಿಷ್ಯದ ದೃಷ್ಟಿಯಿಂದ ಚಿತ್ರರಂಗದಲ್ಲಿ ಸಚ್ಚಾರಿತ್ರ್ಯಕ್ಕೇ ಹೆಸರಾದ ದೇವರಾಜ್ ತಮ್ಮ ಮಗನ ಚೇಷ್ಟೆಗಳಿಗೆ ಕಡಿವಾಣ ಹಾಕಿ, ಆತ ಹದ್ದುಮೀರಿ ಹೋಗದಂತೆ ಕಾಯುವ ಅನಿವಾರ್ಯತೆಯಿದೆ. ತನ್ನ ತಂದೆ ದೇವರಾಜ್ ಅವರ ಹೆಸರಿಗೆ ಮಸಿ ಬಳಿಯದಂತೆ ಪ್ರಜ್ವಲ್‌ಗೆ ಆದಷ್ಟು ಬೇಗ ಬುದ್ಧಿ ಬರುವಂತಾಗಲಿ,

ರಸಿಕ 'ಮುಂಡ'ನ ವಿಟ ಚೇಷ್ಟೆ


ಮೊದಲಿನಿಂದಲೂ ತನ್ನ ಮಾವ ವಿಜಿಗೆ ಪೈಪೋಟಿ ಮಾಡಿಕೊಂಡೇ ಬೆಳೆದ ಹುಡುಗ ಲೂಸ್ ಮಾದ ಅಲಿಯಾಸ್ ಯೋಗೇಶ್. 'ದುನಿಯಾ' ಚಿತ್ರದ ನಿರ್ಮಾಪಕ ಸ್ವತಃ ಯೋಗೇಶನ ಅಪ್ಪ ಸಿದ್ದರಾಜುವೇ ಆಗಿದ್ದರಿಂದ ಮತ್ತು ಹುಡುಗ ಲೂಸ್ ಮಾದನ ಕ್ಯಾರೆಕ್ಟರಿಗೆ ಹೇಳಿ ಮಾಡಿಸಿದ್ದರಿಂದ ಸೂರಿ ಈತನ ಕೈಲಿ ಪಾರ್ಟು ಮಾಡಿಸಿದರು. ನರಪೇತಲನಂತಿರುವ ಯೋಗಿಯ ವಿಲಕ್ಷಣ ಚೇಷ್ಟೆಗಳನ್ನು ಹಾಗೇ ಬಳಸಿಕೊಂಡಿದ್ದರಿಂದಲೋ ಏನೋ 'ದುನಿಯಾ'ದ 'ಲೂಸ್ ಮಾದ'ನ ಹಣೆಬರಹವೂ ಬದಲಾಗಿಹೋಯ್ತು. ಅಚಾನಕ್ಆಗಿ ಈತ ಹೀರೋ ಕೂಡಾ ಆಗಿಬಿಟ್ಟ; ಮೊದಲೆರಡು ಚಿತ್ರಗಳೂ ಹಿಟ್ ಆಗಿಬಿಟ್ಟವು. ಇನ್ನು ಮೊದಲೇ ಪೆಡಸು ಪೆಡಸಾಗಿ ಆಡುವ ಲೂಸನ ತಲೆ ನಿಲ್ಲದಂತಾಯಿತು.

ಇನ್ನೂ ಮೊದಲ ಚಿತ್ರ ಬಿಡುಗಡೆಯಾಗಿ ಅದು ಹಿಟ್ಟಾಗುವ ಹೊತ್ತಿಗಾಗಲೇ ಲೂಸು ತನ್ನ ವಿಟ ಚೇಷ್ಟೆಯನ್ನು ಆರಂಭಿಸಿಬಿಟ್ಟಿದ್ದ. ಕಳೆದ ವರ್ಷ ಈತ ಮನೆಯಲ್ಲೇ ಅದ್ದೂರಿಯಾಗಿ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದ. ಅಂದು ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷಳಾದ ಹುಡುಗಿಯೊಬ್ಬಳು ಯೋಗಿಯ ಅಪ್ಪ-ಅಮ್ಮಂದಿರ ಮುಂದೆಯೇ ಬಂದು ಆತನಿಗೆ ಕೇಕು ತಿನ್ನಿಸಿ ಕೆನ್ನೆ ತುಂಬಾ ಮುತ್ತಿಟ್ಟು ಹೋಗಿದ್ದಳು. ಆದರೆ ಆಕೆ ಈತನ ಪ್ರೇಯಸಿ ಎಂಬ ವಿಚಾರ ಎಲ್ಲರಿಗೂ ಗೊತ್ತಾಗುವಷ್ಟರಲ್ಲಿ ಲೂಸು ಕೋಳಿಯೊಂದಿಗೆ ಕಳ್ಳಾಟ ಆರಂಭಿಸಿದ್ದ.

'ಚಿಕನ್' ಗುನ್ಯಾ ಅಂಟಿದ್ದು!

ಅಂದಗಾಲತ್ತಿಲ್ ಕ್ಯಾಬರೆ ಡ್ಯಾನ್ಸರ್ ಅನೂರಾಧಾ ಮತ್ತು ಹಳೇ ಡ್ಯಾನ್ಸ್ ಮಾಸ್ಟರ್ ಸತೀಶ್‌ಕುಮಾರ್ ಜೋಡಿಯ ಒಬ್ಬಳೇ ಮಗಳು ಈ ಅಭಿನಯಶ್ರೀ. ಅಭಿನಯಶ್ರೀಯ ತಂದೆ ಸತೀಶ್ ಮಹಾನ್ ಶಿಸ್ತಿನ ಮನುಷ್ಯ. 1987ರಲ್ಲಿ ಅನುರಾಧಾಳನ್ನು ಪ್ರೀತಿಸಿ ಮದುವೆಯಾದ ಈತ ಆನಂತರ ಅನುರಾಧಾಳಿಗೆ "ನೀನು ಕುಣಿದಿದ್ದು ಸಾಕು ಮಕ್ಕಳನ್ನು ನೋಡಿಕೊಂಡು ಮನೆಯಲ್ಲಿರು" ಎಂದು ಹೇಳಿ ಆಕೆಯ ಡ್ಯಾನ್ಸ್‌ಗೆ ಫುಲ್‌ಸ್ಟಾಪ್ ಹಾಕಿದ. ಮಡದಿ ಮಕ್ಕಳನ್ನು ಹದ್ದುಬಸ್ತಿನಲ್ಲೇ

ಪ್ರಜ್ಞಾ ಪೀಡಕರು



ನಿನ್ನೆಮೊನ್ನೆಯ ತನಕ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಪ್ರಜ್ಞಾ ಎಂಬ ಪೋರಿ ಮೈಸೂರಿನಿಂದ ಬಂದು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡುತ್ತಿದ್ದಂತೆ ಆಕೆಯ ಹಿಂದೆ ಲೂಸ್ ಮಾದ, ಪ್ರಜ್ವಲ್ ಇಬ್ಬರೂ ಜೊಲ್ಲು ಸುರಿಸುತ್ತಾ ತಿರುಗುತ್ತಿದ್ದಾರಂತೆ. ಪ್ರಜ್ವಲ್ ಮತ್ತು ಲೂಸ್‌ಮಾದ ಇಬ್ಬರೊಂದಿಗೆ ತಲಾ ಒಂದು ಚಿತ್ರದಲ್ಲಿ ನಾಯಕಿಯಾಗಿರುವ ಪ್ರಜ್ಞಾಳ ಸುತ್ತಲೂ ಹಲವಾರು ಗಾಸಿಪ್‌ಗಳು ಅಂಟಿಕೊಂಡಿವೆ. "ಏನಮ್ಮಾ ಪ್ರಜ್ವಲ್ ಮತ್ತು ಲೂಸ್ ಮಾದ ಇಬ್ಬರೂ ನಿನ್ನ ಮದ್ವೆಯಾಗ್ತೀನಿ ಅಂತ ಹಿಂದೆ ಬಿದ್ದಿದ್ದಾರಂತೆ" ಎಂದು ಕೇಳಿದರೆ, ಥೇಟು ಶುಭಾ ಪೂಂಜಾಳಂತೆ "ಪ್ರಜ್ವಲ್ ಮತ್ತು ಯೋಗೇಶ್ ನನಗೆ ಕ್ಲೋಸ್ ಫ್ರೆಂಡ್ಸ್ ಅಷ್ಟೆ. ಆದರೆ ಮದ್ವೆ ಗಿದ್ವೆ ಎಲ್ಲಾ ಇಲ್ಲ, ಇಂಥ ಗಾಸಿಪ್‌ಗೆಲ್ಲಾ ನಾನು ತಲೆ ಕೆಡಿಸಿಕೊಳ್ಳಲ್ಲ" ಎಂದು ಹೇಳುತ್ತಾಳೆ.

ಒಟ್ಟಾರೆಯಾಗಿ ಹದಿನಾರರ ಹುಡುಗಿ, ಇಪ್ಪತ್ತರ ಹುಡುಗರ ವಿಷಯ ಇಂದು ಇಡೀ ಚಿತ್ರರಂಗದಲ್ಲಿ ಹುಸಿಬಿಸಿ ಚರ್ಚೆಗೆ ಕಾರಣವಾಗಿದೆ.

ಈಗಷ್ಟೇ ಒಂದಷ್ಟು ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಪ್ರಜ್ಞಾ ಸೆಕ್ಸ್ ಬಾಂಬ್ ನಮಿತಾ ಲೆವೆಲ್ಲಿಗೆ ಎಕ್ಸ್‌ಪೋಸ್ ಮಾಡುತ್ತಿದ್ದಾಳೆ. ದಾಮಿನಿ, ರಾಧಿಕಾ ಮತ್ತು ಹರಿಪ್ರಿಯಾ ತಮ್ಮ ವೃತ್ತಿಬದುಕನ್ನು ನಾಶಮಾಡಿಕೊಂಡಂತೆ ಪ್ರಜ್ಞಾ ಕೂಡ ಮಾಡಿಕೊಳ್ಳದಿರಲಿ. ಇಲ್ಲವೆಂದರೆ ಕೆಲ ಸಿನಿಮಾ ಮಂದಿ ಮತ್ತು ರಾಜಕಾರಣಿಗಳು ಜಂಟಿ ಕಾರ್ಯಾಚರಣೆ ನಡೆಸಿ ಪ್ರಜ್ಞಾಳನ್ನು ದಾರಿ ತಪ್ಪಿಸುವ ಅಪಾಯವಿದೆ. ■



ಟ್ಟಿದ್ದ. ಈಗ್ಗೆ 13 ವರ್ಷಗಳ ಹಿಂದೆ ರಸ್ತೆ ಅಪಘಾತ
ದಾದ ಸತೀಶ್ ಹಾಸಿಗೆ ಹಿಡಿದು ಪೂರ್ಣಶೂನ್ಯನಾಗಿಬಿಟ್ಟ.
ಆತನ ಆಸ್ಪತ್ರೆ, ಔಷಧಗಳ ಖರ್ಚಿಗೂ ದಿಕ್ಕು ಕಾಣದಾದಾಗ
ಗಿನ್ನೂ ಹೈಸ್ಕೂಲು ಓದುತ್ತಿದ್ದ ಮಗಳು ಅಭಿನಯಶ್ರೀ
ಟನಾ ವೃತ್ತಿಗೆ ಇಳಿದಳು.

ಈಕೆಗೆ ಹೇಳಿಕೊಳ್ಳುವಂತಹ ಸೌಂದರ್ಯವಿಲ್ಲದಿದ್ದರೂ
ನುರಾಧಾಳ ಮಗಳು ಎಂಬ ಕಾರಣಕ್ಕೇ ತಮಿಳಿನಲ್ಲಿ
ಜಯ್ ನಟಿಸಿದ್ದ 'ಫ್ರೆಂಡ್ಸ್' ಚಿತ್ರದಲ್ಲಿ ಹಾಗೂ ತೆಲುಗಿನ
ಪಿಷಂ' ಚಿತ್ರಗಳಲ್ಲಿ ಅವಕಾಶಗಳು ಸಿಕ್ಕಿದ್ದವು.

ಹೀಗಿದ್ದವಳನ್ನು ಕರೆತಂದು ಕನ್ನಡದಲ್ಲೂ ಹೀರೋಯಿನ್
ಾಡಿದ್ದು ನಮ್ಮ ಹಳ್ಳೀ ಹೈದ ಪ್ರೇಮ್. ಆಗಿನ್ನೂ
ುಟುಪೀಟಾಗಿದ್ದ ಅಭಿನಯಳನ್ನು ಕರೆತಂದು ಲಾಂಗ್
ೀರೋ ದರ್ಶನ್‌ಗೆ ನಾಯಕಿಯನ್ನಾಗಿಸಿದ. ಆದರೆ 'ಕರಿಯ'
ತ್ರದ ನಂತರ ಈಕೆಗೆ ದೊರಕಿದ್ದು ಎನ್.ಎಸ್. ಶಂಕರ್
ವರ ನಿರ್ದೇಶನದ 'ಜೂಟಾಟ' ಚಿತ್ರದಲ್ಲಿ ಒಂದು
ಪಾತ್ರ ಮಾತ್ರ. ಅತ್ತ ತಮಿಳು ಮತ್ತು ತೆಲುಗು
ತ್ರಗಳಲ್ಲೂ ಈಕೆಗೆ ಮತ್ತೆ ನಾಯಕಿಯಾಗಿ ನಟಿಸುವ
ದೃಷ್ಟ ದೊರೆಯಲಿಲ್ಲ. ಅದೇ ಹೊತ್ತಿಗೆ ತಮಿಳು,
ುಗುಗಳಲ್ಲಿ ಐಟಂ ನಟಿಯರ ಕೊರತೆ ಇತ್ತಾದ್ದರಿಂದ
ಭಿನಯಶ್ರೀ ತನ್ನ ಅಮ್ಮನಂತೆಯೇ ದಕ್ಷಿಣ ಭಾರತದ
ತ್ರಗಳಲ್ಲಿ ಪರ್ಮನೆಂಟಾಗಿ ಐಟಂ ನಟಿಯಾದಳು. ಈ
ಧ್ಯೆ ಆಕೆ ಬಗ್ಗೆ ಹಲವಾರು ರಸಿಕತೆಗಳೂ ಕೇಳಿಬಂದವು.

ಹೀಗಿರುವಾಗ 'ನಂದ ನಂದಿತ' ಚಿತ್ರದ 'ಕೊಕ್ಕೊಕ್ಕೊಕ್ಕೊ
ೋಳೀ...' ಎಂಬ ಐಟಂ ಸಾಂಗ್‌ಗೆ ಕುಣಿಯಲು ಬಂದಿದ್ದ
ಭಿನಯಶ್ರೀಯೊಂದಿಗೆ ಅವಲಕ್ಕಿ ಪವಲಕ್ಕಿ ಆಟ
ರುವಿಟ್ಟುಕೊಂಡ ಲೂಸು ಮಾದ. ಕೋಳಿ ಸಾಂಗು
ುಗಿದರೂ ಈತ 'ಲೆಗ್ ಪೀಸ್' ಮೇಲಿನ ಆಸೆಯನ್ನಂತೂ
ತಲೇ ಇಲ್ಲ. ಆನಂತರ ನಡೆದ ಯೋಗೇಶ ಮತ್ತು
ಭಿನಯಶ್ರೀಯ ಆಟಾಟೋಪಗಳ ಸುದ್ದಿ ಕರ್ನಾಟಕದ
ದಾಟಿ ತಮಿಳುನಾಡಿನವರೆಗೂ ವ್ಯಾಪಿಸಿತ್ತು.

ಈ ಲೂಸು ಯೋಗಿ ಪದೇಪದೇ ತನ್ನ ಬೆನ್ನುಹತ್ತಿ
ಬಂದ "ಕೈಗೆ ಸಿಕ್ಕಿರುವ ಬಕರಾನನ್ನು ಬಿಡುವುದಾದರೂ
ಯಾಕೆ'' ಅನ್ನೋ ಕಾರಣಕ್ಕೆ "ನನ್ನನ್ನು ಮದುವೆಯಾಗು''
ಎಂದು ಈಗ ಗಂಟುಬಿದ್ದಿದ್ದಾಳಂತೆ. ಯೋಗಿಗಿಂತ ಕನಿಷ್ಠ
ಐದಿನೈದು ವರ್ಷ ಹಿರಿಯಳು ಮತ್ತು ಕನಿಷ್ಠ ಇಪ್ಪತ್ತು
ಕೆಜಿ ಹೆಚ್ಚು ತೂಕ ಹೊಂದಿದ್ದ ಅಭಿನಯಶ್ರೀ ಆತನಿಗೆ
ಹೋಲಿಸಿದರೆ ತಾನು ಕೊಬ್ಬಿದ ಮುದಿ ಕೋಳಿ ಎಂತಿದ್ದೇನೆ
ಎಂದು ಆರೇ ತಿಂಗಳಲ್ಲಿ ಹತ್ತಿಪ್ಪತ್ತು ಕೇಜಿ ತೂಕವನ್ನು
ಇಳಿಸಿಕೊಂಡು ಈಗ ಯೋಗಿಗೆ ಹೊಂದುವಂತೆ ಸೊಣಕಲ
ಕಡ್ಡಿಯಾಗಿಬಿಟ್ಟಿದ್ದಾಳೆ.

ಲೂಸ್ ಮಾದನ ತಾಯಿ ಕೂಡ ಹೆತ್ತ ಮಗನನ್ನೇ
ಅಭಿಮಾನದಿಂದ ಲೂಸ್ ಮಾದ ಎಂದು ಕರೆದುಕೊಳ್ಳುವ
ಗಟ್ಟಿಗ್ಗೆ. ಇನ್ನು ಮಗನ ಸಿನಿಮಾಗಳಿಗೆ ಆರ್ಥಿಕ ಸಂಕಷ್ಟ
ಬಂದರೆ, ಎಲ್ಲೂ ಸಿನಿಮಾಗೆ ಪೆಟ್ಟು ಬೀಳದಂತೆ ಹಣ
ಸುರಿದು ಸಿನಿಮಾ ಮುಗಿಸುವ ಪುತ್ರಪ್ರೇಮಿ ತಂದೆ.

ಲೂಸ್ ಮಾದ ಎಂತಹ ಹುಂಬ ಎಂದರೆ, ಕೆಲವೇ
ತಿಂಗಳುಗಳ ಹಿಂದೆ ಆತನ ತಂದೆ ತಾಯಿ ಧರ್ಮಸ್ಥಳಕ್ಕೆ
ಹೋಗಿ ಬರುವಷ್ಟರಲ್ಲಿ ಸೋದರ ಮಾವ ವಿಜಯ್
? ಕಾಲು ಕೆರೆದುಕೊಂಡು ಜಗಳಕ್ಕೋಗಿ ಕೆನ್ನೆ ಛಿದ್ರ
ವಾಗುವಂತೆ ಏಟುತಿಂದಿದ್ದ.

ಸದಾ ತನ್ನ ಕಾರಿನಲ್ಲಿ ಹಂದಿಗಳಂತೆ ಇರುವ ಹತ್ತಾರು
ಹುಡುಗರನ್ನು ತುಂಬಿಕೊಂಡು ಥೇಟು ರೋಡ್
ರೋಮಿಯೋನಂತೆ ಅಲೆಯುವ ಚಟ ಲೂಸ್ ಮಾದನಿಗೆ.
ಪೋಕರಿ ಸ್ನೇಹಿತರನ್ನು ಶೂಟಿಂಗ್ ಸ್ಥಳಕ್ಕೂ ಕರೆದು
ಕೊಂಡು ಬಂದು ಅವರಿಗೆಲ್ಲ ನಿರ್ಮಾಪಕನಿಂದಲೇ ಊಟ,
ತಿಂಡಿ, ತೀರ್ಥಗಳ ಸೇವೆ ಒದಗುವಂತೆ ನೋಡಿಕೊಳ್ಳುತ್ತಾನೆ.

ಹಾಗೆ ನೋಡಿದರೆ, ಲೂಸ್ ಮಾದ ಅತೀ ಕಿರಿಯ
ವಯಸ್ಸಿಗೇ ಅತಿ ಹೆಚ್ಚು ಬೇಡಿಕೆಯಲ್ಲಿರುವ ನಾಯಕನಟ.
ಇಷ್ಟು ಚಿಕ್ಕವಯಸ್ಸಿಗೇ ಇಷ್ಟೊಂದು ಅವಕಾಶವನ್ನು ಪಡೆದ
ಯಾವುದೇ ನಟ ಕನ್ನಡದಲ್ಲಿ ಈವರೆಗೆ ಹುಟ್ಟಿಕೊಂಡಿಲ್ಲ.
ಒಂದೆ ಶಿವರಾಜ್‌ಕುಮಾರ್ ಡಿಗ್ರಿ ಮುಗಿಸಿ, ಆಕ್ಟಿಂಗ್
ಕೋರ್ಸ್ ಎಲ್ಲಾ ಮುಗಿಸಿದ ನಂತರವಷ್ಟೇ ಚಿತ್ರರಂಗದಲ್ಲಿ
ಅವಕಾಶ ಪಡೆದು ಒಂದೊಂದೇ ಹಂತ ಮೇಲೇರಿದ್ದರು.
ಆದರೆ ಲೂಸ್ ಮಾದನ 'ನಂದ ನಂದಿತ' ಹಿಟ್ ಆಗುವ
ವೇಳೆಗಾಗಲೇ ಆತ ಸುಮಾರು ಎಂಟು ಸಿನಿಮಾಗಳಿಗೆ
ಸೈನ್ ಮಾಡಿದ್ದ. ಇನ್ನು 'ಅಂಬಾರಿ' ಹಂಡ್ರೆಡ್ ಡೇಸ್
ಆಟ್ಟೋ ಹೊತ್ತಿಗೆ ಲೂಸ್ ಮಾದ ಸಹಿ ಮಾಡಿದ
ಚಿತ್ರಗಳ ಸಂಖ್ಯೆ ಬರೋಬ್ಬರಿ 12 ಮುಟ್ಟಿದೆ.

ಒಮ್ಮೆ ಬೇಲಿ ಹಾರಿ ರುಚಿ ಕಂಡವನಿಗೆ ಮತ್ತದೇ
[illegible] ಚಟುವಟಿಕೆಗಳು ಶುರುವಾಗುವುದು ಸಹಜ.
[illegible] ಪ್ರಿನ್ಸಿಪಲ್ ಮತ್ತು ಲೂಸ್ ಮಾದರ ಚಾರಿತ್ರ್ಯವೂ
[illegible] ಸಿನಿಮಾಕ್ಕೆ ಬದಲಾಗುತ್ತಾ ಹೋಗುತ್ತಿದೆ.
ಇಷ್ಟು ಬೇಗ ಅವರ ಪೋಷಕರು ತಮ್ಮ ಮಕ್ಕಳನ್ನು
[illegible] ಕೊಂಡೊಯ್ಯುವಲ್ಲಿ ಪ್ರಾಮಾಣಿಕ ಪ್ರಯತ್ನ
[illegible] ತಂದಷ್ಟು ಮಕ್ಕಳಿಗೆ ಒಳ್ಳೆಯದು. ●

ಹಳೇ ದಿಗಂತಕ್ಕೆ ಮರುಜೀವ: ಯಾರ ದುಡ್ಡಲ್ಲಿ?

ನಂ.1 ಚೆಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'ದ ಹಾವಳಿಯಿಂದಾಗಿ ಮೂಲೆಗುಂಪಾಗಿದ್ದ ಆರ್‌ಎಸ್‌ಎಸ್‌ನ ಮುಖವಾಣಿ 'ಹೊಸದಿಗಂತ'ಕ್ಕೆ ಮರು ಜೀವ ನೀಡಲು ಸಂಘಪರಿವಾರ ನಿರ್ಧರಿಸಿದೆ. ಮಂಗಳೂರು-ಬೆಂಗಳೂರಿನಲ್ಲಿ ನೆಪಮಾತ್ರಕ್ಕೆ ಪ್ರಿಂಟ್ ಆಗುತ್ತಿದ್ದ ಈ ಪತ್ರಿಕೆಯನ್ನು ಮುಖ್ಯವಾಹಿನಿಗೆ ತಂದು, ರಾಜ್ಯದಾದ್ಯಂತ ದೊರೆಯುವಂತೆ ಮಾಡಿ ತನ್ನ ಸಿದ್ಧಾಂತವನ್ನು ಪ್ರಚಾರ ಮಾಡುವುದು ಸಂಘಪರಿವಾರದ ಉದ್ದೇಶವಾಗಿದೆ.

ಟೈಮ್ಸ್ ಮಾರ್ವಾಡಿಗಳು ಪ್ರಕಟಿಸುತ್ತಿರುವ 'ವಿಜಯ ಕರ್ನಾಟಕ' ಈಗಾಗಲೇ ಈ ಕೆಲಸ ಮಾಡುತ್ತಿರುವಾಗ ಮತ್ತೊಂದು ಪತ್ರಿಕೆ ಏಕೆ ಎಂದು ಸಂಘಪರಿವಾರದ ಮಂದಿಯೇ ಮೊದಲಿಗೆ ಪ್ರಶ್ನಿಸುತ್ತಿದ್ದರಂತೆ. ಯಾವಾಗಲೂ ದುಡ್ಡಿನ ಹಿಂದೆ ಬೀಳುವುದನ್ನೇ ಪತ್ರಿಕೋದ್ಯಮವಾಗಿ ಮಾಡಿಕೊಂಡಿರುವ ಮಾರ್ವಾಡಿಗಳು, ಮುಂದೆ ತಮ್ಮ ಕೈ ಬಿಡಬಹುದು. ಆದ್ದರಿಂದ ಈಗಿನಿಂದಲೇ ತಮ್ಮದೇ ಆದ ಒಂದು ಪತ್ರಿಕೆಯನ್ನು ಕಟ್ಟಿ ಬೆಳೆಸುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬಂದು, ಹೊಸ ದಿಗಂತಕ್ಕೆ ಮರುಜೀವ ನೀಡಲು ನಿರ್ಧರಿಸಿದ್ದಾರಂತೆ.



ಹೊಸದಿಗಂತದ ವೆಬ್‌ಸೈಟ್‌ನಲ್ಲಿ 'ವಿಜಯಕರ್ನಾಟಕ' ಪತ್ರಿಕೆ

ಈಗಾಗಲೇ ಈ ಸಂಬಂಧ ನಾಲ್ಕೈದು ಬೈಟಕ್ ಮುಗಿಸಿರುವ ಸಂಘಪರಿವಾರದ ನಾಯಕರು, ಪತ್ರಿಕೆ ಹೇಗಿರಬೇಕು, ಹೇಗೆ ಕೇಸರಿ ಅಜೆಂಡಾವನ್ನು ಪ್ರಚಾರ ಮಾಡಬೇಕು ಎಂಬೆಲ್ಲ ತೀರ್ಮಾನಕ್ಕೆ ಬಂದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಈ ಕೆಲಸವನ್ನು ಸುಲಭವಾಗಿ ಮಾಡುವ ಉತ್ಸಾಹದಲ್ಲಿ ಈ ಚೆಡ್ಡಿ ಸಮೂಹವಿದೆ.

ಬರಲ್ಲಾ ಎಂದ ಸಿಂಹ

ಹೊಸದಿಗಂತವನ್ನು ಮುಖ್ಯವಾಹಿನಿಗೆ ತರಬೇಕೆಂದರೆ ಮೇಲ್ನೋಟಕ್ಕೆ ಇದೊಂದು ಸಾಮಾನ್ಯ ಪತ್ರಿಕೆ ಎಂಬಂತೆ ಮಾಡಬೇಕು. ಓದುಗರನ್ನು ಆಕರ್ಷಿಸಲು ಬೇರೆಲ್ಲಾ ಪತ್ರಿಕೆಗಳಂತೆ ಸುದ್ದಿ ನೀಡಬೇಕು ಎಂದು ತೀರ್ಮಾನಿಸಿರುವ ಚೆಡ್ಡಿ ಬುದ್ಧಿಜೀವಿಗಳು, ಇದಕ್ಕಾಗಿ ಕೆಲ ಹೆಸರಾಂತ ಪತ್ರಕರ್ತರನ್ನು ಸೇರಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ.


ಪ್ರತಾಪಸಿಂಹ

ಆಗ ಹೊಸದಿಗಂತವನ್ನು ನೋಡಿಕೊಳ್ಳುವ ಸಂಘಪರಿವಾರದ ಮಂದಿಗೆ ತಕ್ಷಣ ನೆನಪಾಗಿದ್ದು ವಿಕದಲ್ಲಿ ಚೆಡ್ಡಿ ಅಜೆಂಡಾವನ್ನು ಕಾರಿಕೊಳ್ಳುವ ಪ್ರತಾಪಸಿಂಹ ಎಂಬ ಪುಡುಗೋಸಿ ಪತ್ರಕರ್ತ. ಆತನೊಂದಿಗೆ ಆರ್‌ಎಸ್‌ಎಸ್ ನಾಯಕರು ಎರಡು ರೌಂಡ್ ಮಾತುಕತೆ ನಡೆಸಿದ ನಂತರ ಪ್ರತಾಪ ಸಿಂಹ "ನಾನು ಬರೋಲ್ಲ'' ಎಂದನಂತೆ. ಆರ್‌ಎಸ್‌ಎಸ್ ಜೊತೆಗೆ ಹೀಗೆ ಬಹಿರಂಗವಾಗಿ ಗುರುತಿಸಿಕೊಂಡರೆ ತನ್ನ ನಿಜ ಬಣ್ಣ ಬಯಲಾಗುತ್ತದೆ ಎಂಬ ಅಂಜಿಕೆ ಆತನಿಗೆ. "ವಿ.ಕ.ದಲ್ಲಿ ಕೊಡುವಷ್ಟು ಕಾಸು ಕೊಡ್ತಿವಿ, ಬಾರೋ ಎಂದರೂ ಈತ ಬರಲ್ಲ ಅಂದನಲ್ಲ'' ಎಂದು ಮಾತುಕತೆಗೆ ಹೋಗಿದ್ದ ಚೆಡ್ಡಿ ನಾಯಕರು ಕೇಶವ ಕೃಪದಲ್ಲಿ ಬೇಜಾರು ಮಾಡಿಕೊಂಡು ಕುಳಿತಿದ್ದಾರಂತೆ.

ಆನಂತರ ಆರ್‌ಎಸ್‌ಎಸ್ ನಾಯಕರ ಕಣ್ಣಿಗೆ ಬಿದ್ದವನೆಂದರೆ ರವಿಪ್ರಕಾಶ್ ಎಂಬ ಮತ್ತೋರ್ವ ಪುಡುಗೋಸಿ ಪತ್ರಕರ್ತ. ಕನ್ನಡ ಪ್ರಭದಲ್ಲಿದ್ದಾಗ ಎಡ ಪಂಥೀಯರ ವಿರುದ್ಧ ಬಾಯಿಗೆ ಬಂದಹಾಗೆ ಬರೆಯುವುದನ್ನೇ ಪತ್ರಿಕೋದ್ಯಮ ಎಂದುಕೊಂಡಿದ್ದ ಈತನನ್ನು ಸಂಪಾದಕ ರಂಗನಾಥ್ ಓಡಿಸಿದ್ದರು. ಕೊನೆಗೆ 'ಟೈಮ್ಸ್ ಆಫ್ ಇಂಡಿಯಾ' (ಕನ್ನಡ) ಆಶ್ರಯ ನೀಡಿತ್ತು. ಈ ಪತ್ರಿಕೆಯ ರೆಸ್ಪಾನ್ಸ್ ವಿಭಾಗದಲ್ಲಿ ಪ್ರಾತ ಸಾಹಿತಿ, ಪತ್ರಕರ್ತ ದಿವಾಕರ್ ಜೊತೆ ಜಾಹೀರಾತು ತರುವ ಮಂದಿ ಹೇಳಿದ್ದನ್ನೆಲ್ಲಾ ಬರೆದುಕೊಡುವ ಕೆಲಸ ಮಾಡುತ್ತಿದ್ದ ರವಿಪ್ರಕಾಶ್‌ಗೆ ಮುಖ್ಯವಾಹಿನಿಗೆ ಬರಲು ವೇದಿಕೆಯೊಂದು ಬೇಕಾಗಿತ್ತು. ಮೊದಲೇ ಆರ್‌ಎಸ್‌ಎಸ್‌ನೊಂದಿಗೆ ಒಳ್ಳೆಯ ಸಂಪರ್ಕ ಹೊಂದಿದ್ದ ಈತ ಬಂದ ಅವಕಾಶವನ್ನು ಬಿಟ್ಟುಕೊಟ್ಟಿಲ್ಲ. ಈಗ ಹೊಸ ಅವತಾರದ ಹೊಸ ದಿಗಂತದ ಕಾರ್ಯನಿರ್ವಾಹಕ ಸಂಪಾದಕನಾಗಿ ಈತ ನೇಮಕಗೊಂಡಿದ್ದಾನಂತೆ. ಈತನಿಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಕೊಡುತ್ತಿದ್ದಷ್ಟು ಸಂಬಳ ಕೊಡುವುದಾಗಿ ಚೆಡ್ಡಿಗಳು ಭರವಸೆ ನೀಡಿದ್ದಾರೆಂಬ ಸುದ್ದಿ ಪ್ರೆಸ್‌ಫೀಲ್ಡ್‌ನಲ್ಲಿ ಹರಡಿದೆ. ಇದೆಷ್ಟು ಸತ್ಯವೋ ಆ ರಾಮನೇ ಬಲ್ಲ.

ಇನ್ನು 'ಈ ಸಂಜೆ'ಯಲ್ಲಿ ಎತ್ತುವಳಿಯನ್ನೇ ಮುಖ್ಯ ಉದ್ಯೋಗವಾಗಿಸಿಕೊಂಡಿದ್ದ ಚೆನ್ನಕೃಷ್ಣ ಎಂಬ ಅವಕಾಶವಾದಿ ಪತ್ರಕರ್ತನಿಗೆ ಸುದ್ದಿ ಸಂಪಾದಕನ ಹುದ್ದೆ ನೀಡಲಾಗಿದೆಯಂತೆ. ಪಾಪ ಇಷ್ಟೊಂದು ದಿನ ಹೊಸ ದಿಗಂತದಲ್ಲಿ ತೆಪ್ಪಗೆ ಕೆಲಸ ಮಾಡುತ್ತಿದ್ದ ದು.ಗು. ಲಕ್ಷ್ಮಣ್‌ರನ್ನು ಸಂಪಾದಕರಾಗಿಯೇ ಉಳಿಸಿಕೊಳ್ಳಲಾಗುತ್ತಿದೆಯಾದರೂ, ಅವರ ಕೈ ಕಟ್ಟುವ ಕೆಲಸವನ್ನು ಅವರು ನಂಬಿದ ಮಂದಿಯೇ ಮಾಡುತ್ತಿದ್ದಾರೆ.

ಇನ್ನೊಂದಿಷ್ಟು ಪತ್ರಕರ್ತರು ಬೇಕೆಂದು ಸಂಘಪರಿವಾರದ ಮಂದಿ ಹುಡುಕಾಡುತ್ತಿದ್ದಾರೆ. ಇದು ಗೊತ್ತಾಗಿದ್ದೇ ತಡ "ನಮ್ಮಲ್ಲೂ ಕೆಲವರಿದ್ದಾರೆ. ಬೇಕಾದರೆ ಕರೆದುಕೊಂಡು ಹೋಗಿ'' ಎಂದು ಪ್ರಜಾವಾಣಿಯ ಮಂದಿ ಬೇಡಿಕೊಳ್ಳಲಾರಂಭಿಸಿದ್ದಾರಂತೆ.

ಅದಿರಲಿ, ಎಲ್ಲರಿಗೂ ಒಳ್ಳೆಯ ಸಂಬಳ ನೀಡುವುದಾಗಿ ಹೊಸದಿಗಂತದ ಮಂದಿ ಹೇಳುತ್ತಿದ್ದಾರೆ. ಬಿಜೆಪಿ ಸರ್ಕಾರದ ಬೆಂಬಲ ಇರುವುದರಿಂದ ಈ ಮಾತುಗಳನ್ನಾಡಲಾಗುತ್ತಿದೆ ಎಂಬ ಮಾತು ಪ್ರೆಸ್‌ಕ್ಲಬ್‌ನಲ್ಲಿ ಕೇಳಿಬರುತ್ತಿದೆ. ಸರ್ಕಾರದ ಹಣ, ಆರ್‌ಎಸ್‌ಎಸ್ ಸಿದ್ಧಾಂತದ ಪ್ರಚಾರಕ್ಕೆ ಹರಿಸಿಕೊಳ್ಳಲು ಚೆಡ್ಡಿಗಳಿಗೆ ಮತ್ತೊಂದು ದಾರಿ ಸಿದ್ಧವಾಗುತ್ತಿರುವುದಂತೂ ನಿಜ.

ಶಿವಮೊಗ್ಗದಲ್ಲಿ ಬಿಜೆಪಿ ಮುಖವಾಣಿಯಾಗಿರುವ 'ನಾವಿಕ' ಎಂಬ ಸಂಜೆ ಪತ್ರಿಕೆ ಪಾಲುದಾರರ ನಡುವಿನ ಭಿನ್ನಾಭಿಪ್ರಾಯದಿಂದ ಕುಸಿದುಬೀಳುವ ಹಂತ ತಲುಪಿದಾಗ ಇದೇ ಸಂಘಪರಿವಾರದ ಮಂದಿ ಆಡಳಿತಾಧಿಕಾರಿಯನ್ನು ನೇಮಿಸಿ, ಪತ್ರಿಕೆ ನಡೆಯುವಂತೆ ಮಾಡಿದ್ದರು. ಇದೀಗ ರಾಜ್ಯಮಟ್ಟದಲ್ಲಿ ತಮ್ಮ ಮುಖವಾಣಿಯಾದ ಹೊಸದಿಗಂತವನ್ನು ಉದ್ಧಾರಮಾಡಲು ಹೊರಟಿದ್ದಾರೆ.


ಇದರಿಂದ ರಾಜ್ಯವಂತೂ ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ.

● ವರದಿಗಾರ

ಕರೆಂಟು ಕಳ್ಳ ನಿರಾಣಿ ಈಗ ಕಿಕ್‌ಬ್ಯಾಕ್ ದೊರೆ

'ಕರೆಂಟ್ ಕಳ್ಳ' ಎಂದೇ ಕುಖ್ಯಾತಿ ಗಳಿಸಿರುವ ಭಾರಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಕಳೆದ ತಿಂಗಳು ಸದ್ದಿಲ್ಲದೆ ಭರ್ಜರಿ ಊಟ ಮುಗಿಸಿದ್ದಾರೆ.

ತಮ್ಮ ನೇತೃತ್ವದ ಏಕಗವಾಕ್ಷ ಸಮಿತಿ ಮೂಲಕ ಒಟ್ಟು 12 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆಯ ಸುಮಾರು 30ಕ್ಕೂ ಹೆಚ್ಚು ಯೋಜನೆಗಳಿಗೆ ಭೂಮಿ ನೀಡಲು ಒಪ್ಪಿಗೆ ನೀಡಿದ್ದಾರೆ. ಇದಕ್ಕಾಗಿ ಅವರು ತಲಾ ಒಂದು ಪ್ರಾಜೆಕ್ಟ್‌ಗೆ ಕನಿಷ್ಠ 20 ಲಕ್ಷ ರೂ. ಕಿಕ್‌ಬ್ಯಾಕ್ ಪಡೆದಿದ್ದಾರಂತೆ. ಈ ವಿಷಯವನ್ನು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗಿರುವ ಉದ್ಯಮಿಗಳೇ [illegible]. ದುಡ್ಡಿಗಾಗಿ ಬೇಡುವ ಈ ರೀತಿಯ ಸಚಿವರಿದ್ದರೆ ರಾಜ್ಯದ ಕೈಗಾರಿಕಾ ಕ್ಷೇತ್ರ ಉದ್ಧಾರವಾದಂತೆ ಎಂದು ಅವರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.


ನಿರಾಣಿ

ಎಷ್ಟು ಎಕರೆ ಜಾಗ ಮಂಜೂರು ಮಾಡಲಾಗಿದೆ ಎಂಬುದರ ಮೇಲೆ ಈ ಕಿಕ್‌ಬ್ಯಾಕ್ ಮೊತ್ತ ಎಷ್ಟೆಂಬುದು ಫಿಕ್ಸ್ ಆಗಿತ್ತಂತೆ. ದೊಡ್ಡ ಉದ್ಯಮಿಗಳು ಬೆಲೆಬಾಳುವ ಪ್ರದೇಶದಲ್ಲಿ ಕೈಗಾರಿಕೆ ಆರಂಭಿಸಲು ಕೋಟಿ ಲೆಕ್ಕದಲ್ಲಿ ಹಣ ನೀಡಿದ್ದಾರೆ. ಹೀಗಾಗಿ ಸಾರ್ವಜನಿಕರ ಬಳಕೆಗಾಗಿ ತೆಗೆದಿರಿಸಿದ್ದ ಜಾಗವನ್ನೂ ಈ ಉದ್ಯಮಿಗಳ ಕೈಗೆ ಒಪ್ಪಿಸಲಾಗಿದೆ ಎಂದು ಕೈಗಾರಿಕಾ ಇಲಾಖೆಯ ಅಧಿಕಾರಿಗಳೇ ಮಾತನಾಡಿಕೊಳ್ಳುತ್ತಿದ್ದಾರೆ.

ಉದಾಹರಣೆಗೆ ಕೆಂಗೇರಿಯಲ್ಲಿ ಬೆಂಗಳೂರು ಜಲಮಂಡಳಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಈ ಹಿಂದೆಯೇ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿತ್ತು. ಬೆಂಗಳೂರಿಗೆ ಹತ್ತಿರದಲ್ಲಿರುವ ಈ ಜಾಗಕ್ಕೆ ಭಾರೀ ಬೆಲೆ ಇದೆ. ಈ ಜಾಗವನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಜಲಮಂಡಳಿ ಹತ್ತಾರು ಬಾರಿ ಪತ್ರ ಬರೆದಿದೆ. ಅಧಿಕಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರದ ಗಮನವನ್ನೂ ಸೆಳೆದಿದ್ದರು.

ಈ ಜಾಗದಲ್ಲಿ ಬೆಂಗಳೂರು ನೀರು ಸರಬರಾಜಿಗೆ ಮೂಲ ಸೌಕರ್ಯವನ್ನು ಒದಗಿಸಲು ಮಂಡಳಿ ನಿರ್ಧರಿಸಿತ್ತು. ಆದರೆ ಕೈಗಾರಿಕಾ ಮಂಡಳಿ ಜಲಮಂಡಳಿಯ ಮನವಿಗೆ ಬೆಲೆ ನೀಡಿರಲಿಲ್ಲ. ಏಕೆಂಬುದು ಈಗ ಬಹಿರಂಗಗೊಂಡಿದೆ.

ಬೆಂಗಳೂರಿನ ಜನತೆಗೆ ನೀರುಣಿಸಲು ಬೇಕಾಗಿದ್ದ ಈ ಅಮೂಲ್ಯ ಜಾಗವನ್ನು ಸಚಿವ ಮುರುಗೇಶ್ ನಿರಾಣಿ ಉದ್ಯಮವೊಂದಕ್ಕೆ ಒಪ್ಪಿಸಿದ್ದಾರೆ. ಎಷ್ಟು ಕೋಟಿ ಪಡೆದಿದ್ದಾರೋ ನಿರಾಣಿಯೇ ಲೆಕ್ಕ ಕೊಡಬೇಕು.

ಸರ್ಕಾರದ ಕೆಲಸಕ್ಕೆಂದು ಸ್ವಾಧೀನಪಡಿಸಿಕೊಂಡಿದ್ದ ಜಾಗವನ್ನು ನಿರಾಣಿ ನೇತೃತ್ವದ ಸಮಿತಿ ಬೇರೆಯವರಿಗೆ ನೀಡಿದ್ದನ್ನು ನೋಡಿಕೊಂಡು ಸುಮ್ಮನಿರುವ ಮುಖ್ಯಮಂತ್ರಿ ಯಡ್ಡಿಗೆ ಕೊಟ್ಟ [illegible]ದಲ್ಲಿ ಎಷ್ಟು ಸಂದಿದೆಯೋ ಮುರುಗೇಶನೇ ಬಲ್ಲ.


ಇಷ್ಟೇ ಅಲ್ಲ, ಕೈಗಾರಿಕಾ ಪ್ರದೇಶದಲ್ಲಿ ಉದ್ಯಾನಕ್ಕೆಂದು ಈ ಹಿಂದೆ ಮೀಸಲಿಟ್ಟ ಜಾಗವನ್ನೂ ಈ ನಿರಾಣಿ ಮಹಾಶಯ ಖಾಸಗಿ ಉದ್ಯಮಿಗಳಿಗೆ ಮಾರಿಕೊಂಡಿದ್ದಾರೆ. ಪೀಣ್ಯದಲ್ಲಿ ಕೈಗಾರಿಕೆಗೆಂದು ಮೀಸಲಾಗಿರುವ ಜಾಗವನ್ನು ತಮ್ಮ ಪಕ್ಷ ಬೆಂಬಲಿಸುವ ಖಾಸಗಿ ಶಿಕ್ಷಣ ಸಂಸ್ಥೆಯೊಂದಕ್ಕೆ ಮಂಜೂರು ಮಾಡಿದ್ದಾರೆ. ಕಾನೂನು ಬಾಹಿರವಾಗಿ ಈ ವ್ಯವಹಾರ ನಡೆಯುತ್ತಿದ್ದರೂ [illegible] ಇಲ್ಲವಾಗಿದ್ದಾರೆ.

ಕರೆಂಟನ್ನೇ ಕದ್ದು ಉದ್ಯಮ ನಡೆಸಿದವನ ಜೇಬಿಗೆ ಭಾರಿ ಕೈಗಾರಿಕಾ ಖಾತೆ ಒಪ್ಪಿಸಿದ ಯಡ್ಡಿ ಕೂಡ ಈ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರಂತೆ. ಇನ್ನು ಕರ್ನಾಟಕದ ಕೈಗಾರಿಕಾ ಕ್ಷೇತ್ರ ಉದ್ಧಾರವಾದಂತೆ ಬಿಡಿ!

● ವರದಿಗಾರ







ಬಲ್ಲೆಯಾ UB ಸಿಟಿಯಾ

ದುಡ್ಡೇ ಭಾಷೆ ದುಡ್ಡೇ ಧರ್ಮ ದುಡ್ಡೇ ಜಾತಿ ದುಡ್ಡೇ ದೇವರು!

■ ರಾ. ಸೋಮನಾಥ್

ಒಂದು ಕಪ್ ಕಾಫಿಯ ಬೇಲೆ ಎಷ್ಟಿರಬಹುದು?

ಬೇಡ-ಯಕಶ್ಚಿತ್ ಪಿಜ್ಜಾ ಒಂದರ ಬೆಲೆ?

ಕಪ್ ಕಾಫಿ ಒಂದಕ್ಕೆ ಇಪ್ಪತ್ತಾ? ಮೂವತ್ತಾ? ಐವತ್ತಾ? ಅಮ್ಮಮ್ಮಾ ಎಂದರೂ ಪಿಜ್ಜಾ ಒಂದಕ್ಕೆ ನೂರೈವತ್ತು ಅಥವಾ ಇನ್ನೂರು ರೂಪಾಯಿಯಿದ್ದರೆ ಅದೇ ಭಯಂಕರ ತಾನೆ?

ಆದರೆ ವಿಜಯ್ ಮಲ್ಯನ ಯುಬಿ ಸಿಟಿ ಹಾಗಲ್ಲ, ನೂರಾ ಇಪ್ಪತ್ತು ರೂಪಾಯಿಗೂ ಕಮ್ಮಿ ರೇಟಿನ ಯಾವ ಕಾಫಿಯೂ ನಿಮಗಿಲ್ಲಿ ಸಿಗುವುದಿಲ್ಲ!

ಅದನ್ನು ಕುಬೇರರ ಅಡ್ಡೆಯೆನ್ನಿ, ದೇಶದ ದಾರಿದ್ರ್ಯದ ಅಣಕವೆನ್ನಿ ಅಥವಾ ಐಷಾರಾಮದ ಪರಮಾವಧಿಯೆನ್ನಿ. ಬೆಂಗಳೂರಿನ ವಿಠ್ಠಲ್ ಮಲ್ಯ ರಸ್ತೆಯ ಯುಬಿ ಸಿಟಿ ಈ ಎಲ್ಲಾ ಉಪಮೆಗಳನ್ನೂ ಮೀರಿಸುತ್ತದೆ. ಒಂದು ಪಿಜ್ಜಾದ ಬೆಲೆಯಿಲ್ಲಿ ನಾನೂರ ಎಂಬತ್ತು ರೂಪಾಯಿ. ಗ್ಲಾಸ್ ವೈನ್ ಕುಡಿಯಬೇಕೆಂದರೆ ನಿಮ್ಮ ಜೇಬಿನಲ್ಲಿ ಕನಿಷ್ಠ ಐನೂರು ರೂಪಾಯಿ ಇರಲೇಬೇಕು. ಹಾಗೇ ಒಂದು ಬಾಟಲಿ ವೈನ್‌ನ ಬೆಲೆಯೆಷ್ಟು ಗೊತ್ತೆ?

ಎರಡು ಸಾವಿರದ ನಾನೂರ ಐವತ್ತು ರೂಪಾಯಿ!

ಒಂದು ಲೋಟ ಕಿತ್ತಳೆ ಹಣ್ಣಿನ ಜ್ಯೂಸಿನ ಬೆಲೆ ಕನಿಷ್ಠ ಮುನ್ನೂರೈವತ್ತು ರೂಪಾಯಿ. ಎರಡು ತುಂಡು ಬ್ರೆಡ್ಡಿಗೆ ನೂರು ರೂಪಾಯಿ. ಒಂದು ರೊಟ್ಟಿಗೆ ತೊಂಭತ್ತು ರೂಪಾಯಿ. ಕಪ್ ಐಸ್‌ಕ್ರೀಮ್‌ಗೆ ಆರು ನೂರು ರೂಪಾಯಿ. ಬಹುಶಃ ಬಿಯರ್ ಆದರೂ ಕಮ್ಮಿ ರೇಟಿಗೆ ಸಿಗಬಹುದೇನೋ. ಆದರೆ ಲೀಟರ್ ಮಿನರಲ್ ವಾಟರ್‌ನ ಬಾಟಲೊಂದಕ್ಕೆ ನೀವು ಇನ್ನೂರಾ ಮೂವತ್ತು ರೂಪಾಯಿ ಬಿಚ್ಚಲೇಬೇಕು!

ಪೌಂಡ್ ಬ್ರೆಡ್ ಒಂದಕ್ಕೇ ಹದಿನೈದು ರೂಪಾಯಿಯಿರುವಾಗ, ತೊಂಭತ್ತು ರೂಪಾಯಿ ತೆತ್ತರೆ ಅಂಥ ಆರು ಪೌಂಡ್ ಬ್ರೆಡ್ ಸಿಗುವಾಗ ಯಾರಾದರೂ ಎರಡು ತುಂಡು ಬ್ರೆಡ್ಡಿಗೆ ನೂರು ರೂಪಾಯಿ ಕೊಡುವುದುಂಟಾ? ಐದೋ ಹತ್ತೋ ರೂಪಾಯಿಗೆ ಸಿಗುವ ರೊಟ್ಟಿಗೆ ಯಾರಾದರೂ ತೊಂಭತ್ತು ರೂಪಾಯಿ ಕೊಡುತ್ತಾರಾ? ಹುಚ್ಚು ಹಿಡಿದವರಷ್ಟೇ ಈ ಪಾಟ ರೇಟು ಕೊಟ್ಟು ರೊಟ್ಟಿ ತಿಂದು ನೀರು ಕುಡಿಯಬೇಕಷ್ಟೇ ಎಂಬುದು ನಿಮ್ಮ ಲೆಕ್ಕಾಚಾರವಾದರೆ ಅದು ಮೂರ್ಖತನವಾಗುತ್ತದೆ.

ವಿಜಯ್ ಮಲ್ಯನ ಯುಬಿ ಸಿಟಿಯಲ್ಲಿ ದುಡ್ಡೇ ದೊಡ್ಡಪ್ಪ. ನೂರಿಪ್ಪತ್ತು ರೂಪಾಯಿಗಿಲ್ಲಿ ಕಪ್ ಕಾಫಿ ಸಿಗುತ್ತದೆ ನಿಜ. ಇಂಥ ಕನಿಷ್ಠದ ಕಾಫಿ ಕುಡಿಯುವುದೇ ಇಲ್ಲಿ ಅವಮಾನಕರ. ಬ್ರೆಡ್ಡು ರೊಟ್ಟಿ ತಿನ್ನುವುದು ಕೂಡ ಇಲ್ಲಿ ಹೀನಾಯಕರ. ಇದು ವಿಶ್ವದ ಶ್ರೇಷ್ಠ



ಮಟ್ಟದ ಐಷಾರಾಮಿ ರೇಟೋ ಅಥವಾ ಅಮೆರಿಕ, ಪ್ಯಾರಿಸ್, ಲಂಡನ್‌ನಂಥ ವೈಭವೋಪೇತ ನಗರಗಳ ಧನಿಕರ ದೌಲತ್ತಿಗೆಂದಲೇ ಹುಟ್ಟಿಕೊಂಡಿದೆಯೋ ಗೊತ್ತಿಲ್ಲ. ವಿಕಟವೆಂದರೆ ಇಲ್ಲಿಗೂ ಜನ ಬರುತ್ತಾರೆ. ಬೆಂಗಳೂರಿನ ಮಹಾ ಧನಿಕರ ಮಕ್ಕಳು, ಶೋಕಿಲಾಲರು, ಒಂದಷ್ಟು ಪುಢಾರಿಗಳು, ಡೀಲರುಗಳು, ದೊಡ್ಡಮಟ್ಟದ ಬ್ರೋಕರುಗಳು, ಕಂಪನಿ ಎಕ್ಸಿಕ್ಯೂಟಿವ್‌ಗಳು ಹೀಗೆ ಯಾರಿಗೆಲ್ಲ ರೊಕ್ಕದ ಬೆಲೆ ಗೊತ್ತಿಲ್ಲವೋ ಅಂಥ ಕೆಲವರು ತಮ್ಮದೇ ಆದ ಕಾರಣಗಳಿಗಾಗಿ ಮಲ್ಯನ ಯುಬಿ ಸಿಟಿಗೆ ಬರುತ್ತಾರೆ.

ಆದರೆ ಯುಬಿ ಸಿಟಿಯೆಂದರೆ ಇದೊಂದೇ ಅಲ್ಲ, ವಿಠ್ಠಲಮಲ್ಯ ರಸ್ತೆಯಲ್ಲಿ ಹದಿಮೂರು ಎಕರೆಗಳಷ್ಟು ವಿಶಾಲ ಏರಿಯಾದಲ್ಲಿ ತಲೆ ಎತ್ತಿದ ಯುಬಿ ಸಿಟಿ ಬೆಂಗಳೂರಿನ ಪರಮ ದುಬಾರಿ ಅಪಾರ್ಟ್‌ಮೆಂಟ್ ಕಂ ಟೌನ್ ಶಿಪ್ ಕಂ ಶಾಪಿಂಗ್ ಮಾಲ್ ಕಂ ಕಾಂಪ್ಲೆಕ್ಸ್ ಎಲ್ಲವೂ ಹೌದು. ಹತ್ತೊಂಭತ್ತು ಮಹಡಿಗಳ ಮುಖ್ಯ ಕಾಂಪ್ಲೆಕ್ಸ್‌ನ ಹೆಸರು ದಿ ಕಲೆಕ್ಷನ್. ಅದರ ಪಕ್ಕದಲ್ಲಿ ಹದಿನೇಳು ಮಹಡಿಗಳ ಯುಬಿ ಟವರ್ ಇದೆ. ಹದಿನಾರು ಅಂತಸ್ತುಗಳ ಮತ್ತೊಂದು ಅಪಾರ್ಟ್‌ಮೆಂಟ್ ಇನ್ನೂ ನಿರ್ಮಾಣ ಹಂತದಲ್ಲಿದೆ.

ಹಿಂದೆ ಯುನೈಟೆಡ್ ಬ್ರೇವರಿಸ್ ಎಂಬ ಡಿಸ್ಟಿಲ್ಲರಿಯಿದ್ದದ್ದು ಕ್ರಮೇಣ ಯುಬಿ ಗುಂಪಿನ ಕಾರ್ಪೊರೇಟ್ ಆಫೀಸಾಗಿ ಈಗದು ಯುಬಿಸಿಟಿಯಾಗಿದೆ. ಇಷ್ಟೊಂದು ಅಂತಸ್ತುಗಳ ಭಾರೀ ಟೌನ್‌ಶಿಪ್‌ಗೆ ಪಾಲಿಕೆ ಮತ್ತು ನಗರಾಭಿವೃದ್ಧಿ ಇಲಾಖೆಯ 'ದೊರೆ'ಗಳು ಏಕೆ? ಹೇಗೆ? ಯಾವತ್ತು ಅನುಮತಿ ಕೊಟ್ಟರು? ಕೊಟ್ಟವರ್ಯಾರು? ಯಾವ ಮಟ್ಟದ ಭ್ರಷ್ಟಾಚಾರ ನಡೆದಿರಬಹುದು? ಇತ್ಯಾದಿ ಪ್ರಶ್ನೆಗಳನ್ನೆಲ್ಲ ಬದಿಗಿಟ್ಟು ಲೆಕ್ಕ ಹಾಕಿದರೂ ಈ ಯುಬಿ ಸಿಟಿಯೆಂಬುದು ಅನೇಕ ನಿಗೂಢಗಳ ಹುತ್ತ. ಸದ್ಯ ಚಾಲ್ತಿಗೆ ಬಂದ ಯುಬಿ ಟವರ್ ಮತ್ತು ದಿ ಕಲೆಕ್ಷನ್ ಎಂಬೆರಡು ಐಷಾರಾಮಿ ಮಾಲುಗಳದ್ದೇ ವಿಚಿತ್ರ ಕತೆ.

ಯುಬಿಸಿಟಿಯ ಅತೀ ಮುಖ್ಯ ಮಾಲ್‌ನ ಎಲಿವೇಟರುಗಳು, ಪ್ರವೇಶಿಸುವ ಪ್ರತಿಯೊಬ್ಬರನ್ನೂ ಹೆಜ್ಜೆಹೆಜ್ಜೆಗೂ ತಪಾಸಣೆ ನಡೆಸುವ ಸೆಕ್ಯೂರಿಟಿ ಗಾರ್ಡ್‌ಗಳು, ಎಲ್ಲೆಂದರಲ್ಲಿ ನಾಯಿಯನ್ನು ಹಿಡಕೊಂಡು ಬಾಂಬ್ ಪತ್ತೆಗಾಗಿ ಹೆಣಗಾಡುವ ಡಿಟೆಕ್ಟೀವ್ಸ್, ಯಾವುದೋ ದೇಶದ ಮಾಡೆಲ್‌ಗಳಂತೆ ಕಾಣುವ ರಿಸೆಪ್ಷನಿಸ್ಟ್, ಜೊತೆಗೆ ಲೇಡಿ ಕಮಾಂಡೋಗಳಂತೆ ಕಂಗೊಳಿಸುವ ಸೆಕ್ಯೂರಿಟಿ ಹುಡುಗಿಯರು ಇಡೀ ವಾತಾವರಣವನ್ನು ಕಾರ್ಪೊರೇಟ್ ಮಯಗೊಳಿಸುತ್ತಾರೆ. ಬಂದವರು ಬೆಂಗಳೂರಿನವರಾಗಿದ್ದಾರೆ ಐಷಾರಾಮಿ ಯುರೋಪಿಯನ್ ದೇಶವೊಂದಕ್ಕೆ ಬಂದಂತಾಗುತ್ತದೆ.

ಏಕೆಂದರೆ ಇಲ್ಲಿ ಪ್ರತಿಯೊಂದಕ್ಕೂ ಡಾಲರ್ ಲೆಕ್ಕದ ಬೆಲೆ. ಕಿಮಾಯ ಎಂಬುದು ಯುಬಿಸಿಟಿಯ ಎರಡನೇ ಅಂತಸ್ತಿನ ಆಭರಣ ಮಳಿಗೆ. ಇದರೊಳಕ್ಕೆ ಕಾಲಿಡುವ ಯಾರೇ ಕನಿಷ್ಠ ಮೂರು ಲಕ್ಷ ರೂಪಾಯಿ ಇಟ್ಟುಕೊಂಡೇ ಬರಬೇಕು. ವಿಚಿತ್ರ ಹೆಸರಿನ ಎರಡು ಫ್ಯಾಷನ್ ಮಳಿಗೆಗಳಿವೆ. ಇಲ್ಲಿ ಭಾರತದ ಯಾವುದೇ ಬ್ರ್ಯಾಂಡ್‌ನ ಡ್ರೆಸ್‌ಗಳಿಲ್ಲ. ಎಲ್ಲವೂ ವಿದೇಶಿ ಕಂಪೆನಿಗಳ ದುಬಾರಿಯ ಬಟ್ಟೆಗಳಂತೆ. ಬಹುಶಃ ಭಾರತದ ಬಟ್ಟೆ ಮಾರುವುದೇ ಅವಮಾನವೆಂದು ಭಾವಿಸಿರಬೇಕು!

▶▶▶ 12







ಇಂಜಿನಿಯರ್ ಸೋಮರಾಜ್ ಯಾರು?

ಗಿಮಿಕ್ ಸೋಮಣ್ಣನ ಕಪಾಳಮೋಕ್ಷ



ಸೋಮರಾಜ್

…ಬ್ಬ ಕಡು ಭ್ರಷ್ಟ ಇಂಜಿನಿಯರ್. ಮತ್ತೊಬ್ಬ ಸೋಗುಬಡುಕ ಪುಢಾರಿ. …ತಟ್ಟೆಯೊಳಗೆ ಇಬ್ಬರೂ ಊಟಕ್ಕೆ ಕುಂತರೆ ಏನಾಗುತ್ತದೆ?

…ಪಾಲಿಕೆಯ ಅಸಿಸ್ಟೆಂಟ್ ಇಂಜಿನಿಯರ್ ಎ.ಎಸ್. ಸೋಮರಾಜ್‌ಗೆ …ರಾಯಿ ಮಂತ್ರಿ ಸೋಮಣ್ಣ ಮಾಡಿದ ಕಪಾಳಮೋಕ್ಷ ಮತ್ತು ಈ ಬಗ್ಗೆ …ಲ್ ಕಾಂಗ್ರೆಸ್ ಕಾರ್ಯಕರ್ತರು ಹೊಡೆದ ಬೊಬ್ಬೆಗೆ …ತ ಬೇರೆ ಕಾರಣಗಳಿಲ್ಲ. ಜುಲೈ ನಾಲ್ಕರ ಬೆಳಿಗ್ಗೆ …ಕಾ ನಗರದ ವಾರ್ಡ್ ಸಮೀಕ್ಷೆಗೆಂದು ಬಂದ ಮಂತ್ರಿ …ಮಣ್ಣ ಅದೇ ವಾರ್ಡಿನ ಅಸಿಸ್ಟೆಂಟ್ ಇಂಜಿನಿಯರ್ …ಸ್. ಸೋಮರಾಜ್ ಕಪಾಳಕ್ಕೆ ಬಾರಿಸಿದರೆಂದೂ ಆಘಾತ …ಕೇ ಎದೆಹಿಡಿದು ಬಿದ್ದ ಸೋಮರಾಜ್‌ನನ್ನು ಆತನ …ಬಂಧಿಗಳು ಮಣಿಪಾಲದ ಆಸ್ಪತ್ರೆಗೆ ಸೇರಿಸಿದರೆಂದೂ … ಸರ್ಕಾರಿ ನೌಕರನ ಮೇಲೆ ಹಲ್ಲೆ ನಡೆಸಿದ ತಪ್ಪಿಗೆ …ಮಣ್ಣ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದೂ …ಪಿಸಿ ಲೇಔಟಿನ ಮಾಜಿ ಕೌನ್ಸಿಲರ್ ಮೋಟುಬೆಳ್ಳು …ರಾಮನ ಗ್ಯಾಂಗ್ ಬೊಬ್ಬಿಡುತ್ತಿದೆ.

…ನಾನು ಬೈದದ್ದು ನಿಜ ಆದರೆ ಕಪಾಳಕ್ಕೆ ಹೊಡೆದೇ …ಎಂದು ಸೋಮಣ್ಣ ಆಣೆ ಪ್ರಮಾಣ ಮಾಡುತ್ತಿದ್ದಾನೆ. …ಬಿಟ್ಟು ಈ ಪ್ರಕರಣವನ್ನು ಬೆಳೆಸಬೇಡಿ ಎಂದು …ಮುಖ್ಯಮಂತ್ರಿ ಯಡ್ಡಿ ಪತ್ರಿಕೆಗಳಿಗೆ ಅಂಗಲಾಚುತ್ತಿದ್ದಾರೆ. …ಮಣ್ಣ ಬೈದದ್ದು ನಿಜವೇ ಹೊರತು ಕೆನ್ನೆಗೆ ಬಾರಿಸಿದ್ದು … ಎಂದು ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದ ಪಾಲಿಕೆಯ …ಮು ಇಂಜಿನಿಯರ್‌ಗಳು ಪ್ರತ್ಯೇಕ ಹೇಳಿಕೆ ಕೊಡುತ್ತಾರೆ. ಇದೆಲ್ಲ ಸೋಮಣ್ಣನ …ಸಿ ನಡೆಸಿದ ಬೋಗಸ್ ಬಿಲ್ ದಂಧೆಯ ಫಲಶೃತಿಯಾಗಿದ್ದರಿಂದ …ವಿಂದರಾಜನಗರದ ಅಷ್ಟೂ ಕಾಮಗಾರಿಗಳ ಕುರಿತಂತೆ ತನಿಖೆಯಾಗಬೇಕೆಂದು …ಡ್ಕರ್ ಯುವ ಸೇನೆಯ ಕೋದಂಡರಾಮ್ ಮುಂದಾಳತ್ವದಲ್ಲಿ ಕಾಂಗ್ರೆಸ್ …ಪ ಬೀದಿಗಿಳಿದಿದೆ.

…ಂದೇ ಮಾತಲ್ಲಿ ಹೇಳಬೇಕೆಂದರೆ ಇದೆಲ್ಲವೂ ಸೋಮಣ್ಣನ …ಸ್ವಕೃತಾಪರಾಧವಲ್ಲದೇ ಮತ್ತೇನಲ್ಲ. ಆತನದು ಒಡುಕುಬಾಯಿ. ಸುತ್ತಮುತ್ತ …ಸೇರಿಬಿಟ್ಟರೆ ಬುದ್ಧಿಯ ಸ್ಥಿಮಿತವನ್ನೇ ಕಳೆದುಕೊಳ್ಳುತ್ತಾನೆ. ಮೊನ್ನೆ ನಡೆದದ್ದೂ …. ಜುಲೈ ನಾಲ್ಕರ ಬೆಳ್ಳಂಬೆಳಿಗ್ಗೆ ಸೋಮಣ್ಣ ಕೈಗಾರಿಕಾನಗರ ವಾರ್ಡಿಗೆಂದು …ಪೆಕ್ಷನ್ ಇಟ್ಟುಕೊಂಡ. ಅದಕ್ಕೆಂದು ಪಾಲಿಕೆಯ ಅಡಿಷನಲ್ ಕಮೀಷನರ್ …ರಿ, ಚೀಫ್ ಇಂಜಿನಿಯರ್ ಬಿ.ಟಿ. ರಮೇಶ್, ಎಕ್ಸಿಕ್ಯೂಟಿವ್ …ನಿಯರ್‌ಗಳಾದ ಗುರುದತ್ ಮತ್ತು ಗುರು ಮಲ್ಲೇಶ್, ಎಇಇಗಳಾದ …ಕೇವಪ್ಪ ಮತ್ತು ನರಸಣ್ಣ, ಪೊಲೀಸ್ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ- …ಕೇಬಿ, ಜಲಮಂಡಳಿ, ಬಿಡಿಎ, ಪೊಲೀಸ್ ಇತ್ಯಾದಿ ಇಲಾಖೆಗಳ …ರು ಡಜನ್ ಅಧಿಕಾರಿಗಳಲ್ಲದೆ ಅವರ ಕಾರುಗಳು, ಡ್ರೈವರ್‌ಗಳು, …ಮಣ್ಣನ ಬೆಂಬಲಿಗರ ಗ್ಯಾಂಗ್ ಎಲ್ಲ ಸೇರಿ ಮದುವೆಯೊಂದರ ದಿಬ್ಬಣವನ್ನೇ …ಸುವಷ್ಟಾಗಿದೆ. ಈ ಪೈಕಿ ಸೋಮಣ್ಣನ ಪರಮನಿಷ್ಠ ಇಂಜಿನಿಯರ್ …ಮರಾಜ್ ಕೂಡ ಇದ್ದ. ಹೊರಡುವ ಮುನ್ನ 'ಏನಯ್ಯಾ ಅಗ್ರಹಾರ …ಸರಹಳ್ಳಿಯ ಹದಿಮೂರನೇ ಕ್ರಾಸಿನ ರಸ್ತೆ ರಿಪೇರಿಗೆ ಎಸ್ಟಿಮೇಟ್ …ದ್ದೀಯಾ?' ಎಂದು ಸೋಮಣ್ಣ ಕೇಳಿದ. 'ಹೌದು ಸಾರ್ ಎಲ್ಲಾ …ಸಿದ್ದೀನಿ' ಎಂದಿದ್ದಾನೆ ಸೋಮರಾಜ್.


…ಲ್ಲಿಂದ ಕೈಗಾರಿಕಾನಗರದ ಪ್ರದಕ್ಷಿಣೆ ಮಾಡುತ್ತಾ ದಾಸರಹಳ್ಳಿಗೆ ಬಂದ …ಮಣ್ಣನ ದಿಬ್ಬಣ ಹದಗೆಟ್ಟ ಹದಿಮೂರನೇ ಕ್ರಾಸಿಗೆ ಬಂದಿದೆ. ಅದೂ … ನೋಡುತ್ತಾ 'ನೋಡಯ್ಯಾ ಒಂದು ವಾರದ ಒಳಗೆ ಈ ರಸ್ತೆ …ಯಾಗಬೇಕು ಗೊತ್ತಾಯ್ತಾ?' ಎಂದು ಸೋಮಣ್ಣ ಕೇಳಿದ್ದಕ್ಕೆ ಸೋಮರಾಜ್ … 'ಇನ್ನೂ ಎಸ್ಟಿಮೇಟೇ ಮಾಡಿಲ್ಲಾ ಸಾರ್...' ಎಂದು ತಡಬಡಾಯಿಸಿಬಿಟ್ಟ. …ಷ್ಟೇ, ಪಿತ್ಥ ನೆತ್ತಿಗೇರಿದಂತೆ ರೋಷಾವೇಶಭರಿತನಾದ ಸೋಮಣ್ಣ 'ಏನಯ್ಯಾ … ಮನೇಲಿ ಹೇಳಿದ್ದು? ಅಲ್ಲಿ ಎಸ್ಟಿಮೇಟ್ ಮಾಡಿದ್ದೀನಿ ಎಂದವನು …ನೋಡಿದ್ರೆ ಆಗಿಲ್ಲಾ ಅಂತಿದ್ದೀಯ? ಕಳ್ಳಾ ತಾನೇ ನೀನು? ಏನೋ …ಅದೊಂದು ನಿಷ್ಟ ಇಲ್ಲಿಗೆ ಹಾಕಿಸಿಕೊಂಡ್ರೆ ಕಂತ್ರಿಬುದ್ಧಿ ತೋರಿಸ್ತೀಯಾ?' … ರೇಗಿಬಿಟ್ಟ.

…ಸೋಮಣ್ಣನನ್ನು ಬಲ್ಲ ಯಾರಿಗಾದರೂ ಆತನ ಇಂಥ ಡಂಗುಗಳ …ನ ಮರ್ಮ ಅರ್ಥವಾಗಿಬಿಡುತ್ತದೆ. ಸೋಮಣ್ಣನ ಹೊಗಳಿಕೆ ಮತ್ತು …ಗಳೆರಡೂ ಡಾಬಾಳ್ ಚಳವಳಿಯಷ್ಟೇ ಹಾಸ್ಯಾಸ್ಪದ. ಆದರೆ ಸೋಮರಾಜ್ … ಸೀರಿಯಸ್ಸಾಗಿ ತೆಗೆದುಕೊಂಡ. ಸೋಮಣ್ಣನ ಕಂಗಣ್ಣಿನಿಂದ ಹೇಗಾದರೂ …ನಾಗಲು ಎದೆ ಒಡೆದು ಕೂತವನು ಸೀದಾ ಮಣಿಪಾಲ್ ಆಸ್ಪತ್ರೆಗೆ …ಬಾದ. ಹಾಗೇ ತಲೆಸುತ್ತಿ ಬಂದು ಬಿದ್ದವನಂತೆ ನಾಟಕ ಮಾಡುತ್ತಲೇ … ಟಿ.ವಿ. ವರದಿಗಾರರೊಬ್ಬರಿಗೆ ಫೋನ್ ಮಾಡಿ ಹೇಳಿದ. [illegible]






ವಿಶ್ವ



ರಮೇಶ್



ಕಿಟ್ಟಿ



ಆನಂದ್

ಮಸಾಲೆ ಸೇರಿಸಿದ್ದೇ 'ಸೋಮಣ್ಣ ಪಾಲಿಕೆ ಇಂಜಿನಿಯರ್ ಮೇಲೆ ಹಲ್ಲೆ ನಡೆಸಿದರೆಂದು ಸುದ್ದಿ ಮಾಡಿಬಿಟ್ಟ. ಇದನ್ನೇ ಕಾಯುತ್ತಿದ್ದ ವಿಜಯನಗರದ ಲೋಕಲ್ ಕಾಂಗ್ರೆಸ್ ನಾಯಕರಿಗೆ ಸೋಮಣ್ಣನ ವಿರುದ್ಧ 'ಅಸ್ತ್ರ' ಸಿಕ್ಕಂತಾಯ್ತು. ಬೈದದ್ದಕ್ಕೂ ಹಲ್ಲೆಗೂ ಇದ್ದ ವ್ಯತ್ಯಾಸವೇ ಮರೆಯಾಗಿ ಇಡೀ ಪ್ರಕರಣ ಸೋಮಣ್ಣನ ಕೊರಳಿಗೇ ಉರುಳಾಗಿತ್ತು!

ಹಕೀಕತ್ತೇನು ಗೊತ್ತೆ? ಸೋಮರಾಜ್ ಎಂಬ ಮಹಾನ್ ತಿಂಡಿಪೋತ ಇಂಜಿನಿಯರ್‌ನನ್ನು ಪಕ್ಕದ ಆರ್‌ಪಿಸಿ ಲೇಔಟ್ ವಾರ್ಡಿನಿಂದ ಕೈಗಾರಿಕಾ ನಗರಕ್ಕೆ ಹಾಕಿಸಿಕೊಂಡಿದ್ದೇ ಸೋಮಣ್ಣ. ರಾಮನಗರದ ಮಾಜಿ ಶಾಸಕ ಬೋರಯ್ಯನ ಅಳಿಯನಾದ ಸೋಮರಾಜ್ ಈ ಹಿಂದೆ ಆರ್‌ಪಿಸಿ ಲೇಔಟಿನಲ್ಲಿದ್ದು ನಡೆಸಿದ ಅಕ್ರಮಗಳ ಬಗ್ಗೆ ಈಗಾಗಲೇ ಲೋಕಾಯುಕ್ತ ತನಿಖೆ ಕೈಗೆತ್ತಿಕೊಂಡಿದೆ. ವಿಜಯನಗರದ ಶಾಸಕ ಲೇಔಟ್ ಕೃಷ್ಣಪ್ಪ ಈತನ ದೋಖಾಬುದ್ಧಿಗೆ ರೋಸತ್ತು ಇನ್ನೇನು ಒದ್ದೋಡಿಸಬೇಕೆನ್ನುವಷ್ಟರಲ್ಲಿ ಸೋಮರಾಜ್ ಸೋಮಣ್ಣನ ಕಾಲಿಗೆ ಬಿದ್ದ.

ಹೇಗೂ ಸೋಮಣ್ಣನಿಗೆ ಇಂಥ ಕಳ್ಳ ಇಂಜಿನಿಯರ್‌ಗಳೆಂದರೆ ಬಲುಪ್ರೀತಿ. ಏಕೆಂದರೆ ಸೋಮಣ್ಣ ಮತ್ತು ಆತನ ಚೇಲಾಗಳಿಗೆಲ್ಲ ಬೋಗಸ್ ಬಿಲ್ ದಂಧೆಯೇ ಅತೀ ಮುಖ್ಯ ಆದಾಯ ಮೂಲ. ದಾಸರಹಳ್ಳಿಯ ರಾಗಿ ಮಿಷನ್ ಕಿಟ್ಟಿ, ಆರ್‌ಪಿಸಿ ಲೇಔಟಿನ ಟ್ರಾವೆಲ್ಸ್ ಆನಂದ, ಭಟ್ಟಂಗಿ ವಿಶ್ವನಾಥ ಗೌಡ, ಗಿಲಿಗಿಲಿ ವೆಂಕಟೇಶ, ಬಸವೇಶ್ವರ ನಗರದ ಕೌನ್ಸಿಲರ್ ಪದ್ಮರಾಜ್ ತಮ್ಮ ಪುರುಷೋತ್ತಮ, ಹೀಗೆ ಬಿಜೆಪಿ ಮತ್ತು ಸೋಮಣ್ಣನ ಪರಮನಿಷ್ಠ ಬೋಗಸ್ ಬಿಲ್ ವೀರರ ಹಿಂಡೇ ಸೋಮಣ್ಣನ ಸುತ್ತ ಸಂತೆ ಸೇರಿದೆ.

ಇಂಥ ಚೇಲಾ ಕಂಟ್ರಾಕ್ಟರ್‌ಗಳಿಗೆ ಕೋಟಿಗಟ್ಟಲೇ ಬೆಲೆಬಾಳುವ ಕಳ್ಳ ಕಾಮಗಾರಿಗಳನ್ನು ಮಂಜೂರು ಮಾಡಿಸಿ ಉಪಕರಿಸುವುದು ಸೋಮಣ್ಣನ ಜಾಯಮಾನ. ಹಾಗಂತ ಸೋಮಣ್ಣ ಚೇಲಾಗಳಿಂದ ನೇರವಾಗಿ ಕಮೀಷನ್ ಕೇಳಲಾರ. ಇಲ್ಲೂ ದಿಗ್ನಿಟಿ ಮೇಂಟೇನ್ ಮಾಡುತ್ತಾನೆ. ಕಳ್ಳ ಬಿಲ್ ಬರೆಯುವ ಇಂಜಿನಿಯರ್‌ಗಳು ಮೊದಲೇ ಸೋಮಣ್ಣನ ಪಾಲನ್ನು ಮುರಿದುಕೊಂಡು ಬಿಲ್ ಹಣ ಮಂಜೂರು ಮಾಡುತ್ತಾರೆ. ಇದರಿಂದ ದುಡ್ಡೂ ಬಂತು ಮರ್ಯಾದೆಯೂ ಉಳಿಯಿತು. ಇಂಥ ಟೆಕ್ನಿಕ್ಕಿಗೆ ತಕ್ಕಂತೆ ಕಳ್ಳ ಇಂಜಿನಿಯರ್‌ಗಳಿದ್ದರೇನೇ ಸೋಮಣ್ಣನಿಗೆ ಅನುಕೂಲ. ಅದಕ್ಕೆಂದು ಕರೆಸಿಕೊಂಡ ಖಾಖಂಡಿ ಇಂಜಿನಿಯರ್‌ಗಳ ಪೈಕಿ ಈ ಸೋಮರಾಜ್ ಕೂಡ ಒಬ್ಬ.

ಈತನನ್ನು ಮುಂದಿಟ್ಟುಕೊಂಡೇ ಸೋಮಣ್ಣ ಕಪಟ ಎಸ್ಟಿಮೇಟ್‌ಗಳನ್ನು ಮಾಡಿಸಿದ. ತನ್ನ ಭಟ್ಟಂಗಿ ವಿಶ್ವನಾಥ ಗೌಡನಿಗೆ ಕೈಗಾರಿಕಾನಗರ ವಾರ್ಡಿನಲ್ಲಿ ತಲಾ ಐವತ್ತು ಲಕ್ಷದಂತೆ ಒಂದೂವರೆ ಕೋಟಿಯ ಕಾಂಟ್ರಾಕ್ಟ್ ಕೊಟ್ಟ. ರಾಗಿಮಿಷನ್ ಕಿಟ್ಟಿ ನಿಜಗುಣ ಲ್ಯಾಂಡ್ ಡೆವಲಪರ್ಸ್ ಮಾಲೀಕ ಜವರಾಯಿಗೌಡರ ಹೆಸರಲ್ಲಿ ತಲಾ ಐವತ್ತು ಲಕ್ಷದಂತೆ ಮತ್ತೆ ಒಂದೂವರೆ ಕೋಟಿಯ ಟೆಂಡರ್ ಹಿಡಿದ. ಕೌನ್ಸಿಲರ್ ಪದ್ಮರಾಜ್ ತಮ್ಮನಿಗೆ 25 ಲಕ್ಷದ ಮೋರಿ ಹೂಳೆತ್ತುವ ಕಾಂಟ್ರಾಕ್ಟ್, ಗಿಲಿಗಿಲಿ ವೆಂಕಟೇಶನಿಗೆ ದಾಸರಹಳ್ಳಿಯಲ್ಲಿ ಮೋರಿ ಹೂಳೆತ್ತುವ ಐವತ್ತು ಲಕ್ಷದ ಟೆಂಡರ್, ಟ್ರಾವೆಲ್ಸ್ ಆನಂದ, ಚಿನಕ ಎಂಟರ್‌ಪ್ರೈಸಸ್ ನಾಗರಾಜ, ಲಕ್ಷ್ಮೀ ನಾರಾಯಣ; ಹೀಗೆ ಮೋರಿಯ ಹೂಳು ತೆಗೆಯುವ ನೆಪದಲ್ಲಿ ಸೋಮಣ್ಣನ ಚೇಲಾಗಳೆಲ್ಲ ಕೋಟಿ ಲೆಕ್ಕದ ಕಾಮಗಾರಿಗಳನ್ನು ಗಿಟ್ಟಿಸಿಬಿಟ್ಟರು.

ಇಲ್ಲಿ ಮೋರಿಯ ಹೂಳು ಮತ್ತು ಎತ್ತಿದ ಪ್ರಮಾಣ ಯಾವುದಕ್ಕೂ ಲೆಕ್ಕ ಇರುವುದಿಲ್ಲ. ಹೂಳೇ ಇರದಿದ್ದರೂ ಇದ್ದ ಹೂಳನ್ನು ಎತ್ತದೇ ಹೋದರೂ ಕಾಮಗಾರಿ ನಡೆಯಿತೆಂದು ಬೋಗಸ್ ಬಿಲ್ ಜಡಿದು ದುಡ್ಡು ನುಂಗುವುದು ಸುಲಭ. ಸಿಗಬೇಕಾದ ಕಮಿಷನ್ ಇಂಜನಿಯರ್‌ಗಳಿಗೂ ಎಮ್ಮೆಲ್ಲೆಗಳಿಗೂ ಸಿಕ್ಕೇ ಸಿಗುತ್ತದೆ. ಹಾಗಿದ್ದೂ ಸೋಮರಾಜ್ ಹೆಚ್ಚುವರಿ ಲಂಚಕ್ಕಾಗಿ ಸೋಮಣ್ಣನ ಚೇಲಾಗಳನ್ನು ಪೀಡಿಸುತ್ತಿದ್ದ. ಇದೇ ಹೊತ್ತಿಗೆ ಸೋಮರಾಜ್ ಮತ್ತೊಂದು ಅನಾಹುತಕ್ಕೆ ಕೈಯಿಟ್ಟ. ಅದು ಮಾಗಡಿ ರಸ್ತೆಯ ರಹೇಜಾ ಅಪಾರ್ಟ್‌ಮೆಂಟ್ ಪಕ್ಕದ 24 ಸಾವಿರ ಅಡಿಗಳ ಪಾಲಿಕೆ ಜಮೀನು. ಅಲ್ಲಿದ್ದ ರಾಜಾ ಕಾಲುವೆಯನ್ನು ಕಬಳಿಸಿ ಅಲ್ಲೊಂದು ಇಸ್ಪೀಟ್ ಕ್ಲಬ್ ಎಬ್ಬಿಸಿದವನು ರಿಜಾಯ್ಸ್ ಕ್ಲಬ್‌ನ ಖದೀಮ ಗಿರಿಗೌಡ.

ಹಿಂದೆ ಕಾಂಗ್ರೆಸ್ಸಿನಲ್ಲಿದ್ದಾಗ ರಾಜಾ ಕಾಲುವೆ ಉಳಿಸಲು ಹೆಣಗಾಡಿದ ಸೋಮಣ್ಣನೇ ದಂಗಾಗುವಂತೆ ಗಿರಿಗೌಡನ ಪಾಲಿಕೆ ಆಸ್ತಿ ವಂಚನೆಗೆ ಸೋಮರಾಜ್ ಕೈಜೋಡಿಸಿಬಿಟ್ಟ. ಈ ಬಗ್ಗೆಯೂ ಸೋಮಣ್ಣನಿಗೆ ಸಿಟ್ಟಿತ್ತು. ಮತ್ತೊಂದೆಡೆ ಎಲ್ಲೆಲ್ಲಿ ಬೋಗಸ್ ಕಾಮಗಾರಿಗಳಾದವೋ ಅದನ್ನೆಲ್ಲ ಪತ್ತೆಹಚ್ಚಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಲೋಕಾಯುಕ್ತಕ್ಕೆ ದೂರುಕೊಟ್ಟ. ಒಂದೆಡೆ ಸೋಮಣ್ಣನ ಒತ್ತಡ ಮತ್ತೊಂದೆಡೆ ಕಾಂಗ್ರೆಸ್ ಕಾರ್ಯಕರ್ತರ ಕಾಟ; ಎಲ್ಲಿ ತನ್ನ ಕೆಲಸ ಹೋಗುತ್ತೋ ಎಂದು ಹೆದರಿದ ಸೋಮರಾಜ್ ಕಳ್ಳ ಎಸ್ಟಿಮೇಟ್ ಮಾಡುವುದಕ್ಕೇ ಹಿಂದೇಟು ಹಾಕಲಾರಂಭಿಸಿದ. ಜೊತೆಗೆ ಲೋಕಾಯುಕ್ತ ತನಿಖೆ ಬೇರೆ ಸೋಮರಾಜ್‌ನನ್ನು ಕಂಗೆಡಿಸಿದೆ.

ಮೊದಲು ಎಸ್ಟಿಮೇಟ್ ಮಾಡಿದ್ದೇನೆಂದು ಸುಳ್ಳು ಹೇಳಿದ ಸೋಮರಾಜ್ ಅನಂತರ ಮಾಡಿಲ್ಲ ಎಂದದ್ದು ಇದೇ ಕಾರಣಕ್ಕೆ. ನೆರೆದ ಜನರ ಮುಂದೆ ಪೋಜು ಕೊಡಲು ಸೋಮಣ್ಣ ತಾಳಿದ ಅವತಾರ ಆತನಿಗೇ ತಿರುಗುಬಾಣವಾಗಿದೆ. ಹಾಗಂತ ಸೋಮರಾಜ್ ಈತನಕ ಸೋಮಣ್ಣನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿಲ್ಲ. ತನ್ನ ಗಂಡನ ಮೇಲೆ ಮಂತ್ರಿ ಸೋಮಣ್ಣ ಹಲ್ಲೆ ನಡೆಸಿದ್ದಾರೆಂದು ದೂರು ಕೊಟ್ಟವಳು ಸೋಮರಾಜ್ ಪತ್ನಿ ತ್ರಿವೇಣಿ. ವಿಚಿತ್ರವೆಂದರೆ ಆಕೆ ಸೋಮರಾಜ್‌ನ ಅಧಿಕೃತ ಪತ್ನಿಯಲ್ಲ. ಮೊದಲ ಪತ್ನಿಯನ್ನು ಸೋಮರಾಜ್ ಸಂಬಂಧಿಗಳ್ಯಾರೂ ಆಸ್ಪತ್ರೆಗೇ ಸೇರಿಸಿಲ್ಲ. ವಿಶ್ವನಾಥಗೌಡನಂಥ ಘಟಿಂಗ್ ಚೇಲಾಗಳು ರಾಗಿಮಿಷನ್ ಕಿಟ್ಟಿ ಟ್ರಾವೆಲ್ಸ್ ಆನಂದನಂಥ ಪುಡಿ ರೌಡಿಗಳು, ರವೀಂದ್ರ, ಶಾಂತಕುಮಾರಿ, ಕುಪ್ಪಂ ಗಣೇಶನಂಥ ಹುಟ್ಟಾ ಸಮಾಜ ಕಂಟಕರನ್ನು ಜೊತೆಗಿಟ್ಟುಕೊಂಡರೆ ಏನಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ.

ಸೋಮಣ್ಣನಿಗಿದು ಪಾಠವಾಗಬೇಕು.

●ರಾ. ಸೋಮನಾಥ್

ಮೋಟುಬೆಳ್ಳು ಜಯರಾಮನ ಮಂಗಾಟ

ಆರ್‌ಪಿಸಿ ಲೇಔಟಿಗೆ ಹಿಂದೆ ಕೌನ್ಸಿಲರಾಗಿದ್ದ ಮೋಟುಬೆಳ್ಳು ಜಯರಾಮ ಹೇಳಿಕೇಳಿ ಹಳೇ ರೌಡಿ. ಕೊತ್ವಾಲ್ ರಾಮಚಂದ್ರನ ಗ್ಯಾಂಗಿನಲ್ಲಿದ್ದು ಹೊಡೆದಾಟದಲ್ಲಿ ತನ್ನ ಕೈ ಬೆರಳನ್ನೇ ಕಳಕೊಂಡಿದ್ದರಿಂದ ಏಕಲವ್ಯ ಜಯರಾಮ ಎಂಬ ಬಿರುದೂ ಈತನಿಗಿದೆ. ಸೋಮಣ್ಣನ ಕೃಪೆಯಿಂದಲೇ ಕಳೆದ ಬಾರಿ ಗೆದ್ದು ಆರ್‌ಪಿಸಿ ಲೇಔಟಿಗೆ ಕೌನ್ಸಿಲರಾದ. ಕೌನ್ಸಿಲರ್‌ಗಿರಿಯಿದ್ದಷ್ಟೂ ದಿನ ಯಾರ್‍ಯಾರು ಮನೆ ಕಟ್ಟಿಸುತ್ತಾರೋ ಅಂಥವರಿಗೆ ಕಾಟ ಕೊಟ್ಟು ರೋಲ್‌ಕಾಲ್ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದ. ರಸ್ತೆಯ ಟಾರು, ಮೋರಿ ಸಿಲ್ಟು ಯಾವುದನ್ನೂ ಬಿಡದೇ ನುಂಗುತ್ತಿದ್ದ. ಕೊನೆಕೊನೆಗೆ ಕ್ಷೌರದ ಅಂಗಡಿಗಳನ್ನೂ ಬಿಡದೇ ದೋಚಿದ ಜಯರಾಮನನ್ನು ಕಂಡಿದ್ದೇ ಹಂಪಿನಗರದ ಜನ ಕ್ಯಾಕರಿಸಿ ಉಗಿಯುತ್ತಿದ್ದರು.

ಪಾಲಿಕೆಯ ಮಟ್ಟಿಗೆ ಕಾಂಗ್ರೆಸ್ ಆಳ್ವಿಕೆ ಕೊನೆಗೊಳ್ಳುತ್ತಿದ್ದಂತೆ ಓಟು ಕೊಟ್ಟವರಿಗೆ ಮುಖ ತೋರಿಸಲಾಗದೇ ತಲೆಮರೆಸಿಕೊಂಡಿದ್ದ ಜಯರಾಮ್ ಈಗ ಹೊಸ ಗರತಿಯಂತೆ ಮತ್ತೆ ಪ್ರತ್ಯಕ್ಷನಾಗಿದ್ದಾನೆ. ತಾನೇ ವಿಜಯನಗರದ ಕಾಂಗ್ರೆಸ್ಸಿಗೆ ವಾರಸುದಾರನೆಂಬಂತೆ ಸೋಮಣ್ಣನ ವಿರುದ್ಧ ಪತ್ರಿಕಾಗೋಷ್ಠಿ ಮಾಡಿದ್ದಾನೆ. ಬಹುಶಃ ವಿಜಯನಗರದ ಕಾಂಗ್ರೆಸ್ಸಿನ ಬೇರೆ ಯಾರೇ ಪತ್ರಿಕಾಗೋಷ್ಠಿ ನಡೆಸಿದ್ದರೂ ಅದಕ್ಕೊಂದು ಬೆಲೆಯಿರುತ್ತಿತ್ತು. ಸುದ್ದಿಯೂ ಆಗುತ್ತಿತ್ತು.

ಹೊಸಹಳ್ಳಿಯ ಜನಪ್ರಿಯ ನಾಯಕ ಸಿಸಿಬಿ ನಟರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಮಚಂದ್ರ, ಮಾರೇನಹಳ್ಳಿಯ ಸಿದ್ಧಾರ್ಥ, ದಾಸರಹಳ್ಳಿಯ ರಮೇಶ, ಅಂಬೇಡ್ಕರ್ ಯುವ ಸೇನೆಯ ಕೋದಂಡರಾಮ್, ದೊಡ್ಡಣ್ಣ ಇತ್ಯಾದಿ ಜನಾನುರಾಗಿ ಕಾಂಗ್ರೆಸ್ ನಾಯಕರನ್ನೆಲ್ಲ ಬದಿಗೊತ್ತಿ ದೊಡ್ಡ ನಾಯಕನಂತೆ ತಾನೇ ಪ್ರೆಸ್ … ಕಿತ್ತುಕೊಂಡು ಸೋಮಣ್ಣನ ವಿರುದ್ಧ ರೌಡಿ ಭಾಷೆ ಬಳಸಿದ ಜಯರಾಮ್ ವಿರುದ್ಧ ಪತ್ರಿಕಾಗೋಷ್ಠಿಗೆ ಬಂದಿದ್ದ ಪತ್ರಕರ್ತರೇ ತಿರುಗಿಬಿದ್ದರು. ಸೋಮಣ್ಣನ ಕಪಾಳ ಮೋಕ್ಷದ ವಿರುದ್ಧ ಸೋಮಣ್ಣನಿಗೆ ಪಾಠವಾಗಬೇಕಿದ್ದ ಕಾಂಗ್ರೆಸ್ ಪ್ರತಿಭಟನೆ ಜಯರಾಮನಂಥ ರೌಡಿ ಪುಢಾರಿಯಿಂದಾಗಿ ಎಕ್ಕುಟ್ಟಿ ಹೋಯಿತು. [illegible] ಕಾಂಗ್ರೆಸ್ ನಾಯಕರಿಗಾದರೂ ಬುದ್ಧಿ ಬೇಡವೆ? ಯಾರನ್ನು ಕಂಡರೆ ಜನ ಥೂ ಥೂ ಅನ್ನುತ್ತಾರೋ ಅಂಥವನನ್ನು ಮುಂದಿಟ್ಟುಕೊಂಡು ಸೋಮಣ್ಣನ ವಿರುದ್ಧ [illegible]

ಜಯರಾಮನಂಥ ರೌಡಿ ಎಲುಬಿಲ್ಲದ ಎಲಿಮುಂಟುಗಳನ್ನು ಹೊರಗಿಟ್ಟಾಗಲೇ ತಾನೇ ಜನ ಕಾಂಗ್ರೆಸ್ಸಿಗೆ ಓಟು ಕೊಡುವುದು?



▶▶▶ 7

ಅದು ಅವರ ಸಂಘಟನೆಯ ಅಜೆಂಡಾ. ಆದರೆ ಮೈಸೂರಿನ ಮುಸ್ಲಿಂ ವಿರೋಧಿ ಗಲಭೆ. ಹತ್ಯಾಕಾಂಡದಲ್ಲಿ ಗಿರಿಧರನ ಪಾತ್ರ ಇತ್ತಾ ಎಂಬುದು ಖಚಿತವಾಗಿಲ್ಲವಾದರೂ ಆವನು ಇರಿತಕ್ಕೆ ಈಡಾಗಿ ಆಸ್ಪತ್ರೆ ಸೇರಿಕೊಂಡ. ಆದರೆ ಇದನ್ನೇ ನೆಪ ಮಾಡಿಕೊಂಡ ಹಿಂದೂ ಫ್ಯಾಸಿಸ್ಟರು ಶನಿವಾರ ಮೈಸೂರು ಬಂದ್‌ಗೆ ಕರೆಕೊಟ್ಟರು. ಅದನ್ನು ಚಾಚೂತಪ್ಪದೆ ಯಶಸ್ವಿಗೊಳಿಸಿದ್ದು ಇದೇ ಪೊಲೀಸರು. ಬಂದ್ ಕರೆಗೆ ಓಗೊಡದ ಅಂಗಡಿಗಳವರು, ವಾಹನ ಸವಾರರು, ಆಟೋಗಳನ್ನು ತಡೆದು ಬೆದರಿಸಿ ಮನೆಗೆ ಕಳಿಸುತ್ತಿದ್ದ ಪೊಲೀಸರನ್ನು ಮೈಸೂರಿನ ಜನ ನೋಡಿದ್ದಾರೆ.

ಬಂದ್ ಕರೆ ನೀಡುವುದು ಕಾನೂನುಬಾಹಿರವೆಂಬ ಕೋರ್ಟ್ ಆದೇಶವಿರುವುದು ಭಜರಂಗಿ ಪೊಲೀಸರಿಗೆ ಆ ದಿನ ಮರೆತೇಹೋಗಿತ್ತು.

ಜಿಲ್ಲಾಧಿಕಾರಿ ಮಣಿವಣ್ಣನ್ ಈ ಸಂದರ್ಭದಲ್ಲಿ ನಿಷ್ಪಕ್ಷಪಾತವಾಗಿ ದಿಟ್ಟತನ ವರ್ತನೆ ತೋರಿದರಾದರೂ ಮುನ್ನೆಚ್ಚರಿಕೆ ಕ್ರಮವಾಗಿ ಬಂದ್ ಕರೆ ನೀಡಿದವರನ್ನು ಅರೆಸ್ಟ್ ಮಾಡಿಸದೆ ತಪ್ಪು ಮಾಡಿದರು.

ನೊಂದವರಿಗೇ ಪೊಲೀಸ್ ಕಿರುಕುಳ

ಈ ಗಲಭೆಯಲ್ಲಿ ಕೆಲ ಮುಸ್ಲಿಂ ಯುವಕರೂ ದೊಂಬಿ ನಡೆಸಿದ್ದು ನಿಜ. ಮೂರು ಸಾವು, ಪೊಲೀಸರ ನಿಷ್ಕ್ರಿಯತೆಯಿಂದ ರೊಚ್ಚಿಗೆದ್ದವರು ಸಾಮಾನ್ಯ ಹಿಂದೂ ಅಥವಾ ಕೋಮುವಾದಿ ಹಿಂದೂ ಎಂಬ ಭೇದ ತೋರದೆ ಕೈಗೆ ಸಿಕ್ಕವರಿಗೆ ಹಿಡಿದು ಬಾರಿಸಿದ್ದಾರೆ. ಮನೆಗಳಿಗೆ ಕಲ್ಲು ಹೊಡೆದು, ಬೆಂಕಿ ಹಚ್ಚಿದ್ದಾರೆ.

ಈ ಬೆಳವಣಿಗೆ ರೋಗಿ ಬಯಸಿದ್ದೂ, ವೈದ್ಯ ಹೇಳಿದ್ದೂ ಒಂದೇ ಎನ್ನುವಂತೆ ಆಯಿತು. ಪೊಲೀಸರು ಗುರಿ ಇಟ್ಟವರಂತೆ ಹೊರಟು ಪಾಪುಲರ್ ಫ್ರಂಟ್ ಆಫ್ ಇಂಡಿಯಾದ ಲೀಡರ್‌ಗಳನ್ನು ಅರೆಸ್ಟ್ ಮಾಡುತ್ತಾ ಹೊರಟರು. ಈ ಸಂಘಟನೆಯ ಲೀಡರ್ ಕಲೀಮುಲ್ಲಾ ಹಾಗೂ ಜನರಲ್ ಸೆಕ್ರೆಟರಿ ಫಾರೂಕ್, ಅಬ್ದುಲ್ ಅಜೀಜ್ ಹಾಗೂ ಇನ್ನಿತರ ಹದಿನಾರು ಜನರನ್ನು ಮೊದಲ ಬ್ಯಾಚ್‌ನಲ್ಲಿ ಪೊಲೀಸರು ಕಸ್ಟಡಿಗೆ ತೆಗೆದುಕೊಂಡರು. ವಾಸ್ತವವಾಗಿ ಕೆಎಫ್‌ಡಿ ಸಂಘಟನೆಯ ಕಲೀಮುಲ್ಲಾ, ಜಿಲ್ಲಾಧಿಕಾರಿ ಮಣಿವಣ್ಣನ್ ಜೊತೆಗೂಡಿ ಉದಯಗಿರಿ ಸುತ್ತಾಮುತ್ತ ಶಾಂತಿ ನೆಲೆಸುವಂತೆ ಶ್ರಮಿಸಿದ್ದಾತ. ಆದರೆ ಸಂಘ ಪರಿವಾರಕ್ಕೆ ಈ ಗುಂಪನ್ನು ಬಲಿ ಹಾಕಬೇಕೆಂಬ ದುರುದ್ದೇಶವಿತ್ತು. ಅವರು ಗೃಹ ಸಚಿವ ಆಚಾರ್ಯ ಮೂಲಕ ಪೊಲೀಸರ ಮೇಲೆ ಒತ್ತಡ ಹಾಕಿಸಿ ಕಲೀಮುಲ್ಲಾಗೆ ಜೈಲು ಕಾಣಿಸಿದ್ದಾರೆ.

ಈ ನಾಯಕರೂ ಸೇರಿದಂತೆ ಪೊಲೀಸರು ಸುಮಾರು ಇನ್ನೂರಾ ಮೂವತ್ತು ಮುಸ್ಲಿಮರನ್ನು ಬಂಧಿಸಿ ಕೇಸು ಹಾಕಿದ್ದಾರೆ. ನೆಪ ಮಾತ್ರಕ್ಕೆಂದು ಹಿಂದೂ ಸಂಘಟನೆಗಳ ಮೂವತ್ತು ಮಂದಿಯನ್ನು ಹಿಡಿದಿದ್ದಾರೆ. ಮಸೀದಿಯೊಳಗೆ ಹಂದಿ ತಲೆ ತಂದಿರಿಸಿದ ಪೇಪರ್ ಕುಮಾರ ಹಾಗೂ ದೊಂಬಿಗೆ ಪ್ರಚೋದನೆ ಕೊಟ್ಟ ಮಾಜಿ ಉಪಮೇಯರ್ ಕಮಲಾಕ್ಷಿ ಗಂಡ ವೆಂಕಟೇಶನನ್ನು ಬಂಧಿಸಿದ್ದಾರೆ. ಉಳಿದವರು ಕ್ಯಾತಮಾರನಹಳ್ಳಿಯ ನಾಯಕ ಜನಾಂಗದ ಅವಿವೇಕಿ ಯುವಕರು.

ಆದರೆ ಈ ದೊಂಬಿಗೆ ಪ್ರಚೋದನೆ ಕೊಟ್ಟವನು ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್.

ಪೊಲೀಸರು ಇವನನ್ನೇಕೆ ಇನ್ನೂ ಅರೆಸ್ಟ್ ಮಾಡಿಲ್ಲ? ■

▶▶▶ 10 ಬಲ್ಲೆಯಾ UB ಸಿಟಿಯಾ

ಪುಟ್ಟ ಮಗುವಿನ ಸಣ್ಣದೊಂದು ಫ್ರಾಕ್‌ನ ಬೆಲೆ ಒಂದೂಕಾಲು ಲಕ್ಷ! ಒಂದು ಜೀನ್ಸ್‌ಗೆ ಹದಿನೈದು ಸಾವಿರ. ಬ್ಲೇಸರ್ ಎಂದರೆ ಫ್ಯಾಷನ್ನಿಗೆ ಧರಿಸುವ ಕೋಟ್ ಒಂದಕ್ಕೆ ನಾಲ್ಕೂವರೆ ಲಕ್ಷ. ಬಹುಶಃ ಮುಖ್ಯಮಂತ್ರಿ ಯಡಿಯೂರಪ್ಪನವರ ಮಕ್ಕಳು ಕೂಡ ಇಷ್ಟೆಲ್ಲಾ ಬೆಲೆ ತೆತ್ತು ಬಟ್ಟೆ ಖರೀದಿಸಲಿಕ್ಕಿಲ್ಲ!

ದುಡ್ಡು ಮಲ್ಯನ ಐಷಾರಾಮಿ ಕಟ್ಟಡಕ್ಕಾ? ಅಥವಾ ಅದರ ಇಂಟೀರಿಯರ್‌ಗಾ? ಇದೊಂಥರದ ಮಾಯಾ ಲೋಕವಾ ಗೊತ್ತಾಗುವುದಿಲ್ಲ. ಎಲ್ಲವೂ ಇಲ್ಲಿ ಅಯೋಮಯ. ಇಲ್ಲಿ ರೆಸ್ಟೋರೆಂಟುಗಳಿರುವುದೇ ನಾಲ್ಕನೇ ಮಹಡಿಯಲ್ಲಿ. ಅಲ್ಲೊಂದು ಹೆಲಿಪ್ಯಾಡ್ ಇದೆ. ಯುಬಿ ಟವರ್ ಮತ್ತು ಓಕ್‌ವುಡ್ಸ್ ಎಂಬ ಸರ್ವೀಸ್ ಅಪಾರ್ಟ್‌ಮೆಂಟಿನ ನಡುವಿನ ವಿಶಾಲ ಮೇಲ್ಛಾವಣಿಯಲ್ಲಿರುವ ಈ ಹೆಲಿಪ್ಯಾಡ್‌ನಲ್ಲೇ ವಿವಿಧ ಕೆಫೆ, ಐಸ್‌ಕ್ರೀಮ್ ಪಾರ್ಲರುಗಳಿವೆ.

ಈ ಪೈಕಿ **Joscana** ಎಂಬುದು ವೈನ್ ಬಾರೂ ಹೌದು ರೆಸ್ಟೋರೆಂಟ್ ಕೂಡ. ಇದನ್ನು **Pizzeria** ಎಂತಲೂ ಕರೆಯುತ್ತಾರೆ. **Salmone** ಎಂಬ ಒಂದು ಪಿಜ್ಜಾದ ಬೆಲೆಯಿಲ್ಲಿ ನಾನೂರೆಂಬತ್ತು ರೂಪಾಯಿ!

ಪಕ್ಕದಲ್ಲೇ ವೈನುಗಳು ಮತ್ತು ಅದರ ರೇಟನ್ನು ಬರೆದಿದ್ದಾರೆ. ಈ ಪೈಕಿ ಗಾಸಿಪ್ಸ್ ಎಂಬ ಆಸ್ಟ್ರೇಲಿಯನ್ ವೈನ್‌ನ ಒಂದು ಗ್ಲಾಸಿಗೆ ನಾನೂರ ತೊಂಭತ್ತೈದು ರೂಪಾಯಿ ಬೆಲೆ. ಇದೇ ವೈನ್‌ನ ಒಂದು ಬಾಟಲಿಗಾದರೆ ಎರಡು ಸಾವಿರದ ನಾನೂರೈವತ್ತು ರೂಪಾಯಿ. ಪಿಂಕ್ ಎಲಿಫೆಂಟ್, ಅರ್ಜೆಂಟೀನಾ ರೆಡ್, ಟೆರಾರುಖಾಸ್ ಇತ್ಯಾದಿ ಹೆಸರಿನ ವೈನುಗಳದ್ದೂ ಇದೇ ರೇಟು. ಬಹುಶಃ ಭಾರತದ ಯಾವ ಬ್ರಾಂಡ್ ವೈನೂ ಇಲ್ಲಿ ಅಸ್ಪೃಶ್ಯವೇನೊ. ಇನ್ನು ಇಡ್ಲಿ, ದೋಸೆ, ಸಾಂಬಾರ್, ವಡೆ ಇತ್ಯಾದಿ ಹೆಸರುಗಳೆಲ್ಲ ಇಲ್ಲಿ ಅಪರಿಚಿತ!

ಹೀಗೆ ನಾಲ್ಕನೇ ಅಂತಸ್ತಿನ ಬೋಳು ಹೆಲಿಪ್ಯಾಡ್‌ನ ಆಜೂಬಾಜು ಹಾಕಿದ ಟೇಬಲ್ಲು ಕುರ್ಚಿಗಳಲ್ಲಿ ಐಸ್‌ಕ್ರೀಮ್ ತಿನ್ನುತ್ತಲೋ ಸಿಗರೇಟು ಸೇದುತ್ತಲೋ ಕೂತು ಹರಟೆ ಹೊಡೆಯುವ ಬೆಡಗಿಯರ್‍ಯಾರೂ ವಿದೇಶಿಯರಂತೆ ಕಾಣುವುದಿಲ್ಲ ನಿಜ. ಹಾಗಂತ ಭಾರತದವರಂತೆಯೂ ಕಾಣುವುದಿಲ್ಲ. ಅದು ಕಾರ್ಪೊರೇಟ್ ಸಂಸ್ಕೃತಿಯ ಐಷರಾಮ.

ಹೆಲಿಪ್ಯಾಡ್‌ಗೆ ಹೊಂದಿಕೊಂಡಂತೆ ಇರುವ ಪ್ರಾಂಗಣವೊಂದನ್ನು ದಾಟಿದರೆ ಹತ್ತೊಂಭತ್ತು ಮಹಡಿಗಳ ಓಕ್-ವುಡ್-ಪ್ರೀಮಿಯರ್ ಪ್ರೆಸ್ಟೀಜ್ ಎಂಬ ಸರ್ವೀಸ್ ಅಪಾರ್ಟ್‌ಮೆಂಟಿದೆ. ಈ ಓಕ್‌ವುಡ್ ಎಂಬುದು ಬ್ರಿಟಿಷ್ ಕಂಪೆನಿ. ಇಲ್ಲಿನ ಒಂದೊಂದು ಫ್ಲಾಟಿನ ಬೆಲೆ ಕೇಳಿಬಿಟ್ಟರೆ ಎಂಥವರಿಗೂ ತಲೆ ಗಿರ್ರೆನ್ನಲೇಬೇಕು. ಮೂರು ಬೆಡ್‌ರೂಮುಗಳ ಒಂದು ಫ್ಲಾಟ್‌ನ ದಿನವೊಂದರ ಬಾಡಿಗೆ ಇಪ್ಪತ್ತೊಂಭತ್ತು ಸಾವಿರದ ಇನ್ನೂರ ಎಂಭತ್ತು ರೂಪಾಯಿ!

ಮಾಮೂಲಿ ಸಿಂಗಲ್ ರೂಮೊಂದರ ದಿನದ ಬಾಡಿಗೆಯೇ ಎಂಟು ಸಾವಿರದ ಐನೂರ ಇಪ್ಪತ್ತು ರೂಪಾಯಿ. ಎರಡು ಬೆಡ್ ರೂಮುಗಳಿರುವ ಇಂಥ ವಿವಿಧ ಫ್ಲಾಟುಗಳ ದಿನವೊಂದರ ಬಾಡಿಗೆಗೆ ಹತ್ತೊಂಭತ್ತು ಸಾವಿರದ ತನಕ ಬೆಲೆಯಿದೆ. ಬೆಂಗಳೂರಿನ ಯಾವುದೇ ಐಷಾರಾಮಿ ಹೋಟೆಲಾದರೂ ದಿನವೊಂದಕ್ಕೆ ಮೂರೂವರೆ ಸಾವಿರಕ್ಕಿಂತ ಹೆಚ್ಚಿನ ಬೆಲೆಯಿಲ್ಲ. ಇಂಥಲ್ಲಿ ದಿನಕ್ಕೆ ಹತ್ತರಿಂದ ಇಪ್ಪತ್ತೊಂಭತ್ತು ಸಾವಿರ ರೂಪಾಯಿಗಳ ತನಕ ರೇಟಿದ್ದು ಇದಕ್ಕೆಂದೇ ಹತ್ತೊಂಭತ್ತು ಮಹಡಿಗಳ ಗಗನಚುಂಬಿ ಕಟ್ಟಡ ಎಬ್ಬಿಸುತ್ತಾರೆಂದರೆ ಏನರ್ಥ? ಎಲ್ಲೇ ಮಲಗಿದರೂ ಬರುವುದು ಅದೇ ನಿದ್ದೆ. ಎಷ್ಟೇ ಶೃಂಗಾರವಾದರೂ ಜೋಡಿಗಳಿಗೆ ಅದೇ ಪ್ರಣಯ. ಏನೇ ತಿಂದರೂ ಅದೇ ಹೊಟ್ಟೆ.



ಅಷ್ಟಕ್ಕೆ ಇಷ್ಟೆಲ್ಲಾ ದುಡ್ಡು ಕೊಟ್ಟು ತಂಗುವವರು, ಇದಕ್ಕೆಂದೇ ನೂರಾರು ಕೋಟಿ ಸುರಿದು ಸರ್ವೀಸ್ ಅಪಾರ್ಟ್ ಕಟ್ಟಿಸುವವರೂ ಇದ್ದಾರಲ್ಲ.

ಇದು ಯುಬಿ ಸಿಟಿಯ ಕುರುಡು ಕಾಂಚಾಣ ನೃತ್ಯವಾದರೆ ಇಲ್ಲಿ ಇನ್ನೂ ಒಂದು ವಿಚಿತ್ರವಿದೆ. ಅದು ಪಾರ್ಕಿಂಗ್. ಒಂದೂವರೆ ಎಕರೆಯಷ್ಟು ವಿಶಾಲ ಕಾಂಪ್ಲೆಕ್ಸ್‌ನ ಮೂರು ಮಹಡಿಗಳು ಪೂರ್ತಿ ಪಾರ್ಕಿಂಗಿಗೇ ಮೀಸಲಿವೆ. ಲೆವೆಲ್ ಒನ್ ಎಂದರೆ ಒಂದನೇ ಮಹಡಿಯ ಪಾರ್ಕಿಂಗ್. ಲೆವೆಲ್ ಟು ಎಂದರೆ ಎರಡನೇ ಮಹಡಿಯ ಪಾರ್ಕಿಂಗ್. ಪ್ರತಿಯೊಂದು ಕಾರನ್ನೂ ಮೆಟಲ್ ಡಿಟೆಕ್ಟರ್‌ನಿಂದ ತಪಾಸಿಸಿ ಎಲ್ಲೋ ಹೊಕ್ಕಿ ಎಲ್ಲೋ ಬಂದು ಅಸಂಖ್ಯಾತ ಸೆಕ್ಯೂರಿಟಿ ಸಿಬ್ಬಂದಿಯನ್ನು ದಾಟಿ ಮೂರನೇ ಮಹಡಿ ಹೊಕ್ಕುವ ಹೊತ್ತಿಗೆ ಕಾರಿಟ್ಟವನ ತಲೆಗೇ ಚಕ್ಕರ್ ಬಂದಿರುತ್ತದೆ. ಹಾಗೇ ಅರ್ಧಗಂಟೆಯ ಮಟ್ಟಿಗೆ ಕಾರು ಪಾರ್ಕ್ ಮಾಡಿ ಸುಮ್ಮನೇ ಸುತ್ತಾಡಿ ವಾಪಸ್ಸು ಕಾರೆತ್ತಿಕೊಂಡು ಬರಬೇಕೆಂದರೆ ಮಹಡಿ ಇಳಿಯುವ ಮೊದಲೇ ಸೆಕ್ಯೂರಿಟಿ ಗಾರ್ಡ್ ಮೂವತ್ತು ರೂಪಾಯಿ ಕೊಡಿ ಎನ್ನುತ್ತಾನೆ.

ಅರ್ಧ ಗಂಟೆಗೆ ಮೂವತ್ತು ರೂಪಾಯಿ. ಅಂದರೆ ಗಂಟೆಯೊಂದಕ್ಕೆ ಅರವತ್ತು ರೂಪಾಯಿ!

ಯುಬಿಸಿಟಿಯ ರೊಕ್ಕಾವತಾರದ ಬಗ್ಗೆ ಇದಕ್ಕಿಂತ ವಿವರಣೆ ಬೇಕೆ? ಹೆಚ್ಚೆ ಹೆಚ್ಚುಗೂ ಕಂಗೊಳಿಸುವ ಸೆಕ್ಯೂರಿಟಿಗಾ? ಬಂದವರ ಪ್ರಾ... ಆ ಮಟ್ಟದ ಸುರಕ್ಷತೆಯಿಂದಾ? ಬೆಂಗಳೂರಿನ ಹೃದಯ ಭಾಗದಲ್ಲಿದೆಯೆಂದಾ? ಇಷ್ಟೆಲ್ಲಾ ದುಡ್ಡು ಸುರಿದು ಕಟ್ಟಿಸಿದ್ದಕ್ಕಾ? ಅಥವಾ ಜನಸಾಮಾನ್ಯರ್‍ಯಾರೂ ಬರಲೇ ಕೂಡದೆಂದಾ? ಯಾವ ಕಾರಣಕ್ಕೆ ಇಷ್ಟೆಲ್ಲಾ ರೇಟು? ಅಥವಾ ಇ... ಮಲ್ಯನ ಸ್ಟೈಲಾ?

ಯಾರಿಗೂ ಎಟುಕದ ಕಲ್ಪನೆಗೂ ನಿಲುಕದ ರೇಟು ಇಟ್ಟುಬಿಟ್ಟರೆ ಅದಕ್ಕೆಂದೇ ಬರುವ ಜನರು ಇದ್ದಾರಾ? ಅಥವಾ ಇದೂ ಒಂದು ಶೋಕಿಯಾ?

ಸದ್ಯ ಐದಾರು ವಿದೇಶಿ ಕಂಪೆನಿಗಳ ಕಾರ್ಪೊರೇಟ್ ಕಚೇರಿಗಳಿರುವ ಯುಬಿಸಿಟಿಯ ಮೂರನೇ ಕಟ್ಟಡ ಪೂರ್ತಿಗೊಳ್ಳುವ ಹೊತ್ತಿಗೆ ಇಡೀ ಯುಬಿಸಿಟಿಯ ಚಿತ್ರಣವೇ ಬದಲಾಗಿರುತ್ತದೆ. ಹದಿನೆಂಟು ಅಂತಸ್ತುಗಳ ಆ ವಿಶಾಲ ಅಪಾರ್ಟ್‌ಮೆಂಟೊಂದರಲ್ಲೇ ಮುನ್ನೂರಕ್ಕೂ ಹೆಚ್ಚು ಫ್ಲಾಟುಗಳಿರುತ್ತವೆ. ಒಂದೊಂದು ಫ್ಲಾಟಿನ ಬೆಲೆಯೇ ಐದು ಕೋಟಿಯಂತೆ. ಇಷ್ಟು ದುಬಾರಿ ಬೆಲೆ ತೆತ್ತು ಮಲ್ಯನ ಅಪಾರ್ಟ್‌ಮೆಂಟಿಗೆ ಬರುವವರಾದರೂ ಎಂಥವರು? ಇಲ್ಲಿಗೆ ದಿನಕ್ಕೆ ಎಷ್ಟು ನೀರು ಬೇಕು? ಇಂಥ ಟೌನ್‌ಶಿಪ್‌ನಿಂದ ಹೊರಬಿದ್ದ ಮೋರಿ ನೀರಿ... ಜಲಮಂಡಳಿಯ ಪೈಪುಗಳೇ ಸಾಕಾ ಅಥವಾ ಹೊಸದೊಂದು ಮೋರಿಯನ್ನೇ ಸೃಷ್ಟಿಸಿಬೇಕಾ? ಇಲ್ಲಿನ ಫ್ಲಾಟುಗಳ ಮಾಲೀಕರ ಅಷ್ಟೂ ಕಾರುಗಳೆಲ್ಲ ಒಮ್ಮೆಗೆ ಹೊರಬಿತ್ತೆಂದರೆ ಪಕ್ಕದ ಎಂ.ಜಿ. ರಸ್ತೆ ಕಸ್ತೂರ್ ಬಾ ರಸ್ತೆ ಸೆಂಟ್ ಮಾರ್ಕ್ಸ್ ರಸ್ತೆ ರೆಸಿಡೆನ್ಸಿ ರಸ್ತೆಯ ನಿತ್ಯ ಪ್ರಯಾಣಿಕರ ವಾಹನಗಳೆಲ್ಲ ಎಲ್ಲಿಗೆ ಹೋಗಬೇಕು? ಬೇರೆ ಯಾವ ರಸ್ತೆಯಿದೆ?

ನಮ್ಮದೇ ನೆಲದಲ್ಲಿ ನಮ್ಮನ್ನೇ ಅಪರಿಚಿತರನ್ನಾಗಿಸುವ ಮಲ್ಯನ ಸಿಟಿ ಬೆಂಗಳೂರಿಗ ಬೇಕಿತ್ತಾ?

ವ್ಯಂಗ್ಯ ಹೇಗಿದೆಯೆಂದರೆ ಮಲ್ಯನ ಯುಭಿಸಿಟಿಯಿಂದ ಹೊರಬಿದ್ದು ಪಕ್ಕದ ಕಬ್ಬನ್ ಪಾರ್ಕ್‌ನತ್ತ ಬಂದರೆ ಸರ್ಕಲ್ಲಿನಲ್ಲಿ ರಕ್ಷಣಾ ವೇದಿಕೆಯ ಬೋರ್ಡೊಂದು ಕಾಣಿಸುತ್ತದೆ. ಅಧ್ಯಕ್ಷ ನಾರಾಯಣಗೌಡ ಮುಖ ಹೊತ್ತ ಆ ಬೋರ್ಡಿನಲ್ಲಿ 'ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ' ಎಂಬ ವಾಕ್ಯವಿದೆ.


ಅದನ್ನು ಕೆಣಕಲೆಂದೇ ಯುಬಿಸಿಟಿ ತಲೆ ಎತ್ತಿದೆಯಾ? ಇಡೀ ಯುಬಿ ಸಿಟಿ ಸುತ್ತಿ ಬಂದರೂ ಒಂದೇ ಒಂದು ಕನ್ನಡದ ಶಬ್ದವಿರಲಿ, ಕರ್ನಾಟಕದ ಕುರುಹು ಕೂಡ ಸಿಕ್ಕದು. ಬಹುಶಃ ಇಂಗ್ಲಿಷ್ ಬರದೇ ಯುಬಿ ಸಿಟಿಯಲ್ಲಿ ಕಸಗುಡಿಸುವ ಕೆಲಸವೂ ದಕ್ಕದು. ರಕ್ಷಣಾ ವೇದಿಕೆ ನೆಟ್ಟ ಬೋರ್ಡ್ ಒಂದನ್ನು ಹೊರತುಪಡಿಸಿದರೆ ಇಡೀ ಯುಬಿಸಿಟಿ ಮತ್ತದರ ಆಸುಪಾಸಿನ ತುಂಬ ಕುರುಡು ಕಾಂಚಾಣದ್ದೇ ಸಾರ್ವಭೌಮತ್ವ!

ಮಲ್ಯನ ರೊಕ್ಕಾವತಾರಕ್ಕೆ ಬೆಂಗಳೂರೊಂದು ಲೆಕ್ಕವಾ? ಕರ್ನಾಟಕವೊಂದು ಮಿತಿಯಾ? ■



ಗದಗ: ಗುಡ್ಡ ಅಗೆದ ಗಣಿಕಳ್ಳ

...ಸ್ಟಂಟ್ ಮಾಸ್ಟರ್‌ನ ನಿಜಬಣ್ಣ ನಿಧಾನಕ್ಕಾದರೂ ಗದಗ ಜಿಲ್ಲೆಯ ... ಗೊತ್ತಾಗುತ್ತಿದೆ. ಕಪ್ಪತಗುಡ್ಡದ ಅದಿರು ಲೂಟಿಗೆ ಹೊಂಚು ಹಾಕಿಯೇ ...ಡ್ಡಿಗಳು ಮೂರು ವರ್ಷಗಳಿಂದ ಶ್ರೀರಾಮುಲುಗೆ ಗದಗಿನ ಉಸ್ತುವಾರಿ ...ದ್ದಾರೆ. ಜೆಡಿಎಸ್-ಬಿಜೆಪಿ ಸರ್ಕಾರವಿದ್ದಾಗ ಗದಗ ನಗರಕ್ಕೆ ಆಗಾಗ ... ದುಡ್ಡು ಚೆಲ್ಲಿ, ಊರತುಂಬಾ ಪ್ರತಿಮೆ ಸ್ಥಾಪಿಸಿ, ಲೋಕಲ್ ಪುಢಾರಿಗಳಿಗೆ ... ತಿನ್ನಿಸಿ 'ಮಿಂಚು' ಮೂಡಿಸಿದ್ದ ಷೋ ಮಾಸ್ಟರ್ ಶ್ರೀರಾಮುಲು ... ಗದಗಿನತ್ತ ಸುಳಿಯುತ್ತಲೇ ಇಲ್ಲ. ಹೇಗೂ ...ದಂತೆ ಕಪ್ಪತಗುಡ್ಡದ ಲೂಟಿ ನಿರಾತಂಕವಾಗಿ ನಡೆದಿದೆ ... ಇನ್ನಾಕೆ ಗದಗಿನಲ್ಲಿ ಷೋ ಮಾಡಬೇಕು ... ಬಳ್ಳಾರಿಯಲ್ಲಿ ಗಣಿ ದಂಧೆಯಲ್ಲಿ ಮುಳುಗಿ ...ದ್ದಾನೆ ಶ್ರೀರಾಮುಲು. ಜೊತೆಗೆ ಅಲ್ಲಿ ವಿರೋಧಿ ... 'ಪಾಠ ಕಲಿಸುವ' ಜವಾಬ್ದಾರಿಯೂ ಈತನದ್ದೇ.



ಶ್ರೀರಾಮುಲು

...ಹಾತೆತ್ತಿದರೆ ಅಭಿವೃದ್ಧಿ ಅಂತಾನಲ್ಲ ಶ್ರೀರಾಮುಲು, ... ಅಭಿವೃದ್ಧಿ ಎಂಥ ಮಾದರಿಯದು ಅಂತಾ ...ಹೋಕೆ ಗದಗಿಗೊಮ್ಮೆ ಬನ್ನಿ. ಗುಂಡಿಬಿದ್ದ ರಸ್ತೆಗಳು, ...ಲ್ಲೆಯಾಗಿ ಹರಡಿರುವ ಕಸದರಾಶಿ ನಿಮ್ಮನ್ನು ...ಮುತ್ತವೆ. ಈ ಗಣಿಕಳ್ಳರ ಪಾಲಿಗೆ ಅಭಿವೃದ್ಧಿ ಎಂದರೆ ... ಸ್ಥಾಪಿಸುವುದು, ಒಂದ್ನಾಲ್ಕು ಜನರಿಗೆ ಆಪ ...ಗೆ ದುಡ್ಡು ಕೊಡುವುದು, ಮಠಗಳಿಗೆ ದೇಣಿಗೆ ...ವುದು.... ಇಂತಹ ಸ್ಟಂಟ್‌ಗಳನ್ನೇ ಮಾಡಿ ಒಂದಿಷ್ಟು ಹವಾ ಎಬ್ಬಿಸಿ, ...ಚಣೆ ವೇಳೆ ಹಣ, ಹೆಂಡ ಹಂಚಿ ಗದಗ ಜಿಲ್ಲೆಯನ್ನು ಬಿಜೆಪಿ ಕೊರಳಿಗೆ ... ಶ್ರೀರಾಮುಲು ಈಗ ನಾಪತ್ತೆ. ಮೂರೋ ನಾಲ್ಕು ತಿಂಗಳಿಗೆ ಒಮ್ಮೆ ... ಯಾವುದೋ ಜಿಲ್ಲಾ ಪಂಚಾಯತ್ ಯೋಜನೆಯ ಉದ್ಘಾಟನೆ ... ಹೆಲಿಕಾಪ್ಟರಿನಲ್ಲಿ ಹಾರಿಹೋಗುತ್ತಿದ್ದಾನೆ. ಇದನ್ನು ನೋಡಿ ಗದಗಿನ ...ಮೋಸ ಹೋದೆವು' ಎನ್ನುತ್ತಿದ್ದಾರೆ.

ಪ್ರತಿಮೆ ಪಾಲಿಟಿಕ್ಸ್



ಶ್ರೀರಾಮುಲು ಮೊದಲ ಬಾರಿಗೆ ಗದಗಿಗೆ ಕಾಲಿಟ್ಟ ತಕ್ಷಣ ಶುರು ಮಾಡಿದ್ದೇ ಪ್ರತಿಮೆ ಪಾಲಿಟಿಕ್ಸ್. ಪ್ರತಿಮೆಗಳು ಜನರನ್ನು ಅಂಧಶ್ರದ್ಧೆಗೆ ದೂಡುತ್ತವೆ ಎಂಬ ಪ್ರಬುದ್ಧ ಚಿಂತನೆಯ ಹಿನ್ನೆಲೆಯಲ್ಲಿ ಎಚ್.ಕೆ. ಪಾಟೀಲರು ಗದಗಿನಲ್ಲೆಲ್ಲೂ ಪ್ರತಿಮೆಗಳನ್ನು ನಿಲ್ಲಿಸಿರಲಿಲ್ಲ. ಅವರದೇ ಪಾರ್ಟಿಯ ಕಾರ್ಯಕರ್ತರ ಒತ್ತಡವಿದ್ದರೂ, ಅವರ ತಂದೆ ಕೆ.ಎಚ್. ಪಾಟೀಲರ ಪ್ರತಿಮೆಯನ್ನೂ ಸ್ಥಾಪಿಸಿರಲಿಲ್ಲ. ಮುಂದೆ ಜನರ ಎದುರು ಪೋಸು ನೀಡಲೆಂದೇ ಶ್ರೀರಾಮುಲು ಕೆ.ಎಚ್. ಪಾಟೀಲರ ... ನಿಲ್ಲಿಸಿ ಜನರ ಅಂಧಶ್ರದ್ಧೆಯ ಲಾಭ ಪಡೆದ. ಗದಗಿನಲ್ಲೊಂದು ... ಸರ್ಕಲ್ ಇದೆ. ಅಲ್ಲಿ ಗಾಂಧಿ ಪ್ರತಿಮೆ ನಿಲ್ಲಿಸಿದ. ಹಾಗೆಯೇ ಇಲ್ಲಿ ...ಖ್ಯಾತರಾಗಿರುವ ಪಂಚಮಸಾಲಿ ಲಿಂಗಾಯತರನ್ನು ಒಲಿಸಿಕೊಳ್ಳುವ ...ಹೂಡಿ, ಮುಳಗುಂದ ನಾಕಾದ ಹತ್ತಿರ ಕಿತ್ತೂರು ಚೆನ್ನಮ್ಮ ಪ್ರತಿಮೆ ... ಹೀಗೆ ಇಂತಹ ಸೋಗು ರಾಜಕಾರಣದಿಂದಲೇ ಜನರಿಗೆ ಮೋಡಿ ... ರಾಜ್ಯದ ಅದಿರು ಕೊಳ್ಳೆ ಹೊಡೆದ ಹಡಬೆ ದುಡ್ಡಲ್ಲಿ ಸಾವಿರ ...ಜೋಡಿಯ ಸಾಮೂಹಿಕ ವಿವಾಹ ನಡೆಸಿ, ಮಠಾಧೀಶರನ್ನು ಸನ್ಮಾನಿಸಿ ... ಇದೇ 'ಅಭಿವೃದ್ಧಿ' ಎಂಬಂತೆ ಬಿಂಬಿಸಿದ.

ಪ್ರವಾಹ ಪೀಡಿತರನ್ನು ಮರೆತ


...ದಲ ಬಾರಿಗೆ ಶ್ರೀರಾಮುಲು ಗದಗ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ...ನಗಳಲ್ಲಿ ಹದಿನೈದು ದಿನಗಳ ಕಾಲ ಸುರಿದ 'ಉತ್ತರಿ' ಮಳೆಯಿಂದಾಗಿ ... ಶುಂಬ ನರಗುಂದ ರೋಣ ತಾಲ್ಲೂಕುಗಳ ಹತ್ತಾರು ಹಳ್ಳಿಗಳನ್ನು ... ಸಾವಿರಾರು ಕುಟುಂಬಗಳು ಬೀದಿಗೆ ಬಿದ್ದವು. ಆಗ ಶ್ರೀರಾಮುಲು ...ತ್ಸವದಲ್ಲಿ ಜಿಲ್ಲಾಡಳಿತ ಸಂಹಾರ ಶಿಬಿರಗಳ ಹೆಸರಲ್ಲಿ ದನದ ಕೊಟ್ಟಿಗೆಗಳಂತಹ ತಗಡಿನ ಗೂಡುಗಳನ್ನು ಮಾಡಿದರು. ಆ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದ ಈ ಗಣಿಕಳ್ಳ ನಿರಾಶ್ರಿತರಿಗೆ ತನ್ನ ಸ್ವಂತ (ಇವನು ಹತ್ತಿರ ಸ್ವಂತದ್ದೇನಿದೆ?) ಹಣದಲ್ಲಿ ಮನೆ ಕಟ್ಟಿಸುವುದಾಗಿ, ಹಾನಿಯಾದ ಬೆಳೆಗೆ ಪರಿಹಾರ ನೀಡುವುದಾಗಿ ರೀಲುಬಿಟ್ಟು ಪ್ರಚಾರ ಪಡೆದ. ಆದರೆ ಈಗ ಮೂರು ವರ್ಷಗಳು ಕಳೆದಿವೆ. ಜನ ಇನ್ನೂ ನಿರಾಶ್ರಿತರ ಶಿಬಿರಗಳಲ್ಲಿ ದನಗಳಂತೆ ಬದುಕುತ್ತಿದ್ದಾರೆ, ಅಲ್ಲಲ್ಲ ಸಾಯುತ್ತಿದ್ದಾರೆ.

ಹೇಗಿದೆ ಶ್ರೀರಾಮುಲುವಿನ ಅಭಿವೃದ್ಧಿ? ಇತ್ತ ಸರ್ಕಾರದ ಮನೆಗಳೂ ಬರಲಿಲ್ಲ, ಅತ್ತ ಕಳ್ಳ ರಾಮುಲುವಿನ ಪೊಳ್ಳು ಆಶ್ವಾಸನೆಗಳು ಬೆಣ್ಣೆ ಹಳ್ಳದಲ್ಲೇ ಸಮಾಧಿಯಾದವು. ಇವತ್ತು ವಿಧಾನಸೌಧಕ್ಕೂ ಬರದೇ, ಗದಗಿಗೂ ಬರದೇ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಿ ಅಲ್ಲೂ ಜನರನ್ನು ನಿರಾಶ್ರಿತರನ್ನಾಗಿ ಮಾಡುತ್ತಿದ್ದಾನೆ.

ಶ್ರೀರಾಮುಲು ಗದಗನಲ್ಲಿ ತುರ್ತಾಗಿ ಮಾಡಿದ 'ಅಭಿವೃದ್ಧಿ' ಒಂದೇ. ಎಂದೋ ಬರುವ ತನಗಾಗಿ ಭವ್ಯಮನೆಯೊಂದನ್ನು ಕಟ್ಟಿಸಿಕೊಂಡ, ಅದರ ಹಿಂದೆಯೇ ಹೆಲಿಪ್ಯಾಡ್ ನಿರ್ಮಿಸಿಕೊಂಡ!

ಕಪ್ಪತಗುಡ್ಡ ಬೋಳಿಸುತ್ತಿದ್ದಾನೆ

ಬಳ್ಳಾರಿ ರೆಡ್ಡಿಗಳು ಶ್ರೀರಾಮುಲುವನ್ನು ಎರಡೆರಡು ಬಾರಿ ಗದಗ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿರುವುದರ ಹಿಂದೆ ಕಪ್ಪತಗುಡ್ಡ ಲೂಟಿಯ ಹುನ್ನಾರವಿತ್ತು. ಆಯುರ್ವೇದ ಔಷಧಿ ವನಸ್ಪತಿಗಳ ಬೀಡಾಗಿದ್ದ ಕಪ್ಪತಗುಡ್ಡ ಇವತ್ತು ಕರಗಿಹೋಗುತ್ತಿದೆ; ಕಬ್ಬಿಣದ ಅದಿರಿಗಾಗಿ ಗುಡ್ಡವನ್ನು ಬಗೆದು ಬಗೆದು ಅಗೆಯಲಾಗುತ್ತಿದೆ. ಕಪ್ಪತಗುಡ್ಡದ ಕಾರಣದಿಂದಾಗಿ ಈ ಭಾಗದಲ್ಲಿ ಮೋಡಗಳು ಶೇಖರಣೆಗೊಂಡು ಮಳೆ ಸುರಿಸುತ್ತಿದ್ದವು. ಹುಲುಸಾದ ಬೆಟ್ಟದಲ್ಲಿ ದನಕರುಗಳು ಮೇಯುತ್ತಿದ್ದವು. ಈ ಗುಡ್ಡ ಅಂತರ್ಜಲ ಮಟ್ಟವನ್ನು ಕಾಯ್ದುಕೊಂಡು ಬರುತ್ತಿತ್ತು. ಈಗ ಅಲ್ಲಿ ಬರೀ ಕೆಂಧೂಳು, ವಿಂಡ್ ಪವರ್ ಫ್ಯಾನುಗಳೇ ಗೋಚರಿಸುತ್ತವೆ.



ಜನಾರ್ದನ ರೆಡ್ಡಿ

ಜಿಲ್ಲಾಡಳಿತದಿಂದ ಕಪ್ಪತಗುಡ್ಡದಲ್ಲಿ ಮೈನಿಂಗ್‌ಗೆ ಅವಕಾಶ ಇಲ್ಲ, ಆದರೆ ರಾಮುಲು ನೆರಳಲ್ಲಿ ಅವನ ಚೇಲಾಗಳು ಅಕ್ರಮ ಗಣಿಗಾರಿಕೆ ನಡೆಸುತ್ತಲೇ ಇದ್ದಾರೆ. ಇದರ ಲಾಭದ ಲೆಕ್ಕ ಮಾತ್ರ ಓಬಳಾಪುರಂ ಮೈನಿಂಗ್ ಕಂಪನಿಯ ಖಾತೆಗೆ ಜಮಾ ಆಗುತ್ತದೆ. ಇಲ್ಲಿ ಗೆಬರುವ ಉತ್ಕೃಷ್ಟ ಅದಿರನ್ನು ಓಬಳಾಪುರಂನ ಥರ್ಡ್ ಗ್ರೇಡ್ ಅದಿರಿನೊಂದಿಗೆ ಮಿಕ್ಸ್ ಮಾಡಿ ಗ್ರೇಡ್ 1 ಅದಿರು ಎಂದು ಟೋಪಿ ಹಾಕುತ್ತಿದ್ದಾರೆ. ಊರು ಕಾಯುವ ನಾಟಕವಾಡಿ ಬಂದ ರಾಮುಲು ಊರು, ಗುಡ್ಡವನ್ನೇ ದೋಚುವ 'ಅಡವಿ ದೊಂಗುಲು' ಎಂಬುದು ಈಗಲಾದರೂ ಜನರಿಗೆ ಅರ್ಥವಾಗಬೇಕಿದೆ.


ಉಕ್ಕಿನ ಫ್ಯಾಕ್ಟರಿ ದೋಖಾ

ಗದಗ ಜಿಲ್ಲೆಗೆ ವಕ್ಕರಿಸಿದಾಗಿನಿಂದ ಉಕ್ಕಿನ ಫ್ಯಾಕ್ಟರಿಯ ಸ್ಕೆಚ್‌ನಲ್ಲೇ ಕಾಲಹಾಕಿದ್ದಾನೆ ರಾಮುಲು. ಫ್ಯಾಕ್ಟರಿ ನಿರ್ಮಾಣದ ಜಾಗಕ್ಕಾಗಿ ಈಗಾಗಲೇ ಮುಂಬೈ ಮೂಲದ ಮಾರ್ವಾಡಿಗಳೊಂದಿಗೆ ಡೀಲ್ ಕೂಡ ಕುದುರಿದೆ. ಉಕ್ಕಿನ ಫ್ಯಾಕ್ಟರಿ ತೆರೆದರೆ ಎರಡು ಸಾವಿರ ಜನರಿಗೆ ಕೆಲಸ ಸಿಗುತ್ತೆ ಎಂಬುದನ್ನೇ ದೊಡ್ಡದಾಗಿ ಪ್ರಚಾರ ಮಾಡುತ್ತಿರುವ ರಾಮುಲು ಕಪ್ಪತಗುಡ್ಡವನ್ನೇ ಬೋಳಿಸುವ ಸ್ಕೆಚ್ ಹಾಕಿದ್ದಾನೆ. ಕಪ್ಪತಗುಡ್ಡದ ನಾಶವೆಂದರೆ ಅದು ಸುತ್ತಲಿನ ಇಪ್ಪತ್ತು-ಇಪ್ಪತ್ತೈದು ಹಳ್ಳಿಗಳ ಸರ್ವನಾಶವೇ ಆಗಿದೆ. ಜನ ಸಿಡಿದೆದ್ದು ಪ್ರತಿಭಟಿಸಿ ಈ ಬಳ್ಳಾರಿ ದೊಂಗಲುಗಳನ್ನು ಇಲ್ಲಿಂದ ಒದ್ದೋಡಿಸಬೇಕಾಗಿದೆ.

ಯಾವ ಪುರುಷಾರ್ಥಕ್ಕೆಂದು ಗದಗಿಗೆ ಇಂತಹ ಖದೀಮ ರಾಮುಲು ಉಸ್ತುವಾರಿ ಸಚಿವನಾಗಿರಬೇಕು ಎಂಬುದನ್ನು ಪಂಡಿತ ಪುಟ್ಟರಾಜ ಗವಾಯಿಗಳೇ 'ಹೇಳಿಕೆ' ಹೇಳಬೇಕು!

● ಹುರುಳಿಕುಪ್ಪಿ ವಿನಯ್

ರೆಡ್ಡಿಗಳಿಂದ ಮುನ್ಸಿಪಾಲ್ಟಿ ಲೂಟಿ



ಜೋಕ್ಸ್

ನೇತ್ರಾದಾನ-ಶ್ರೇಷ್ಠದಾನ
ರಕ್ತದಾನ-ಮಹಾದಾನ
ಮೂತ್ರದಾನ-ಸಮಾಧಾನ!

* * * * *

ಹುಡುಗಿ: ಸಾಕು ನಿಲ್ಲಿಸು. ರಾತ್ರಿ 12 ಗಂಟೆಯಿಂದ ಮಾಡ್ತಾ ಇದ್ದೀಯ. ಬೆಳಗಾಯ್ತು, ಸುಸ್ತಾಗಿಲ್ವಾ?

ಹುಡುಗ: ಇದೇನು ಮಹಾ. ಇನ್ನು ಮುಂದೆ ಡೆ ಅಂಡ್ ನೈಟ್ ಮಾಡ್ತಿನಿ. ಯಾಕೆಂದರೆ... ಮೆಸೇಜ್ ಫ್ರೀ ಮಾಡಿಸಿದ್ದೀನಿ.....!

* * * * *

ಟೀಚರ್: ಗಾಂಧಿಯ ಮಗನ ಹೆಸರೇನು?
ರಾಮು: ದಿ ನೇಶನ್
ಟೀಚರ್: ಪೆದ್ದು ಹಾಗಂತ ನಿನಗೆ ಹೇಳಿಕೊಟ್ಟವರ್ಯಾರು?
ರಾಮು: ಚಿಕ್ಕವರಾಗಿದ್ದಾಗಿನಿಂದಲೂ 'ಗಾಂಧಿ ಈಸ್ ದ ಫಾದರ್ ಆಫ್ ದಿ ನೇಶನ್' ಅಂತಾನೇ ಹೇಳಿ ಕೊಟ್ಟಿದ್ದಾರೆ ಮಿಸ್!

* * * * *

ಜಾಗತೀಕರಣ ಎಂದರೇನು?

ಅದಕ್ಕೆ ಲೇಡಿ ಡಯಾನಾಳ ಮರಣವನ್ನೇ ಒಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಕಾರಣ: ಆಕೆ ಇಂಗ್ಲೆಂಡಿನ ರಾಜಕುಮಾರಿಯಾಗಿದ್ದವಳು. ಮರಣ ಹೊಂದಿದಾಗ ಈಜಿಪ್ಟ್ ಮೂಲದ ತನ್ನ ಪ್ರಿಯಕರನೊಂದಿಗಿದ್ದಳು. ಆಕೆ ಜರ್ಮನ್ ಕಾರ್‌ನಲ್ಲಿ ಪ್ರಯಾಣಿಸುತ್ತಿದ್ದಾಗ, ಅದನ್ನು ಡಚ್ ಚಾಲಕ ಚಲಾಯಿಸುತ್ತಿದ್ದ. ಆಗ ಜಪಾನಿನಲ್ಲಿ ತಯಾರಿಸಿದ್ದ ಮೋಟರ್ ಬೈಕ್‌ಗಳನ್ನು ಏರಿ ಇಟಲಿಯ ಪತ್ರಕರ್ತರು ಆಕೆಯನ್ನು ಹಿಂಬಾಲಿಸಲಾರಂಭಿಸಿದರು. ಆಗ ಆಕೆ ಇದ್ದ ಕಾರ್ ಫ್ರಾನ್ಸಿನ ಟನಲ್‌ನಲ್ಲಿ ಅಪಘಾತಕ್ಕೀಡಾಗಿ ಪೋರ್ಚುಗೀಸ್ ಮೂಲದ ವೈದ್ಯ ಆಕೆಗೆ ಬ್ರೆಜಿಲ್‌ನಲ್ಲಿ ತಯಾರಿಸಿದ್ದ ಔಷಧಿಗಳನ್ನು ನೀಡಿದ.

ಅಂದಹಾಗೆ ಈ ಜೋಕ್ ಅನ್ನು ಪಾಕಿಸ್ತಾನಿಯೊಬ್ಬ ನೇಪಾಳದ ಮೂಲಕ ಚೈನಾದಿಂದ ಕದ್ದು ಆಮದು ಮಾಡಿದ ಮೊಬೈಲ್‌ನಲ್ಲಿ ಭಾರತೀಯನೊಬ್ಬ ರಚಿಸಿದ್ದಾನೆ!

ಇದನ್ನೇ ಜಾಗತೀಕರಣ ಎನ್ನಬಹುದು!!

* * * * *

ಪ್ರಶ್ನೆ: ಲವ್ ಮ್ಯಾರೇಜಿಗೂ, ಅರೇಂಜ್ಡ್ ಮ್ಯಾರೇಜಿಗೂ ಏನು ಸಂಬಂಧ?

ಉತ್ತರ: ನಾವೇ ಹೋಗಿ ಬಾವಿಗೆ ಬಿದ್ದರೆ ಲವ್ ಮ್ಯಾರೇಜ್. ಹತ್ತು ಜನ ಸೇರಿ ಬಾವಿಗೆ ತಳ್ಳಿದರೆ ಅದು ಅರೇಂಜ್ಡ್ ಮ್ಯಾರೇಜ್!

* * * * *

ಕಾಯಿನ್ ಮೆಷಿನ್ ಮೇಲೆ ಹುಡುಗಿಯೊಬ್ಬಳು ತನ್ನ ತೂಕವನ್ನು ನೋಡಿಕೊಳ್ಳುತ್ತಿದ್ದಳು. ಆಕೆಯ ತೂಕ 58 ಕೆಜಿ ಎಂದು ಮೆಷಿನ್ ತೋರಿಸಿತು.
ಆಕೆ ತನ್ನ ಚಪ್ಪಲಿಗಳನ್ನು ತೊರೆದು ನೋಡಿದಳು-57 ಕೆ.ಜಿ.
ಜಾಕೆಟ್ ತೆಗೆದಳು-56 ಕೆ.ಜಿ.
ದುಪಟ್ಟ ತೆಗೆದಳು-55 ಕೆ.ಜಿ.
ಅಷ್ಟೊತ್ತಿಗೆ ಅವಳ ಬಳಿ ಚಿಲ್ಲರೆ ಉಳಿದಿರಲಿಲ್ಲ.
ಆಗ ಅವಳ ಹಿಂದೆ ಕ್ಯೂನಲ್ಲಿ ನಿಂತಿದ್ದ ಹುಡುಗ "ನೀವು ಯೋಚನೆ ಮಾಡದೆ ಮುಂದುವರೆಯಿರಿ, ಬೇಕಿದ್ದರೆ ನಾನು ನಿಮಗೆ ಚಿಲ್ಲರೆ ಕಾಯಿನ್‌ಗಳನ್ನು ನೀಡುತ್ತೇನೆ" ಎಂದು ಮುಗುಳ್ನಗೆ ಬೀರಿದ.

* * * * *

ನೋಡ್ತಾ ಇದ್ರೆ ಮುಟ್ಟೋಣ ಅನ್ಸುತ್ತೆ.
ಮುಟ್ಟಿದ್ರೆ ಅಮುಕೋಣ ಅನ್ಸುತ್ತೆ.
ಅಮುಕಿದ್ರೆ ಚೀಪೋಣ ಅನ್ಸುತ್ತೆ.
ಯಾಕಂದ್ರೇ....
ಪ್ರತಿ ವರ್ಷ ಮಾವಿನ ಹಣ್ಣು ಸೀಸನ್ ಬರೋದು ಒಂದೇ ಸಾರಿ ಅಲ್ವಾ? ಅದಕ್ಕೆ!

* * * * *

ಪ್ರಶ್ನೆ: ಆಧುನಿಕ ಯುಗದಲ್ಲಿ ತನಗೆ ಕೈಕೊಟ್ಟು ಹೋಗುತ್ತಿರುವ ಯುವತಿಗೆ ಪ್ರಿಯಕರನೊಬ್ಬ ಏನೆಂದು ಹೇಳಬಹುದು?

ಉತ್ತರ: ಹೋಗೋದು ಹೋಗ್ತಾ ಇದ್ದೀಯಾ. ಲಾಸ್ಟ್ ಟೈಮ್ ಮಲಕೊಂಡು ಹೋಗು!

* * * * *

ತಾಲಿಬಾನ್: ನೀನು ಇಸ್ಲಾಂಅನ್ನು ಸ್ವೀಕರಿಸದಿದ್ದರೆ ನಿನ್ನ ಗತ್ತ ಕಟ್ ಆಗುತ್ತೆ.

ಸಿಖ್: ಇದೆಂತಹ ಇಸ್ಲಾಂ ಭಯ್ಯಾ. ಒಪ್ಪಿಕೊಳ್ಳದಿದ್ದರೆ ಗತ್ತ ಕಟ್. ಒಪ್ಪಿಕೊಂಡರೆ ... ಕಟ್!

* * * * *

ಸಿಗರೇಟ್ ಬೂದಿಯ ಪ್ರತಿಕ್ರಿಯೆ:
ಇವತ್ತು ನಾನು ನಿನ್ನಿಂದಾಗಿ!
ನಾಳೆ ನೀನು ನನ್ನಿಂದಾಗಿ!!

* * * * *

ಮೊನ್ನೆಯ ಚುನಾವಣೆಯಲ್ಲಿ ಯುವಕರೇ ಬಹುಸಂಖ್ಯೆಯಲ್ಲಿ ಮತ ಚಲಾಯಿಸಿದರು ಎಂದು ಒಂದು ವರದಿ ಹೇಳುತ್ತದೆ.
ಅದು ನಿಜವಾಗಿದ್ದರೆ ತ್ಯಾ ಗೆದ್ದವರು ... ಅಲ್ವಾ?

* * * * *

... ಮಕ್ಕಳು ಮಾತ್ರ ಯಾಕೆ?
ಉತ್ತರ: ಕಣ್ಣು ಹಾಕುವವರಿಗೆ ಬೇರೆ ಕೆಲಸ ಕೂಡ ಇರುತ್ತೆ!

ಬಾಗಲಕೋಟೆ: ಬಿಜೆಪಿ ಮಂತ್ರಿ, ಶಾಸಕರಿಂದ ದಲಿತರ ಮೇಲೆ ದೌರ್ಜನ್ಯ

2004 ರ ಚುನಾವಣೆಯಿಂದ ಬಸವತತ್ವ ವಿರೋಧಿ ಚೆಡ್ಡಿಗಳನ್ನು ಜಾತಿ, ಉಪಜಾತಿಗಳ ಲೆಕ್ಕಾಚಾರದಲ್ಲಿ ತುಟ್ಟಿಕೊಳ್ಳುತ್ತಾ ಬಂದಿದ್ದಾರೆ ಬಾಗಲಕೋಟೆ ಜಿಲ್ಲೆಯ ಜನ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಏಳಕ್ಕೂ ಕ್ಷೇತ್ರಗಳು ಚೆಡ್ಡಿಗಳ ಜೇಬು ಸೇರಿದವು. ಮೊನ್ನೆಯ ಎಂಪಿ ಎಲೆಕ್ಷನ್ನೂ ಕಮಲಮಯವಾಯ್ತು.

ಆದರೆ ಇಲ್ಲಿವರೆಗೆ ಈ ಚೆಡ್ಡಿ ಶಾಸಕರುಗಳಿಂದ ಜನತೆಗೆ ಉಪಯೋಗವಾದದ್ದು ಸೊನ್ನೆ. ಇನ್ನು ಹೆಚ್ಚುತ್ತಿರುವ ದಲಿತ ದೌರ್ಜನ್ಯಗಳನ್ನು ತಡೆಯುವ ಬದಲು ದೊಡ್ಡ ಜಾತಿಯ ದುಷ್ಟರನ್ನು ರಕ್ಷಿಸುವ ದ್ರೋಹಿ ಕೆಲಸಕ್ಕೆ ನಿಂತಿದ್ದಾರೆ ಈ ದಲಿತ ವಿರೋಧಿ ಶಾಸಕರು.


ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತಿರುವ ಸಚಿವ ಅರವಿಂದ ಲಿಂಬಾವಳಿ, ಮುಧೋಳ ಮೀಸಲಿನಿಂದ ಗೆದ್ದ ಸಚಿವ ಗೋವಿಂದ ಕಾರಜೋಳ ಇಬ್ಬರೂ ದಲಿತರೇ. ಆದರೆ ಅವರ ನಿಷ್ಠೆ ಮಾತ್ರ ದಬ್ಬಾಳಿಕೆ ನಡೆಸುವ ಮೇಲ್ಜಾತಿಗಳಿಗೆ. ಇಂತಹ ಮಂತ್ರಿ, ಶಾಸಕರನ್ನು ಆರಿಸಿದ್ದಕ್ಕೆ ದಲಿತರು ಪಶ್ಚಾತ್ತಾಪ ಪಡುವಂತಾಗಿದೆ. ಆದರೂ ಊರೂರಲ್ಲಿ ದೌರ್ಜನ್ಯಗಳ ವಿರುದ್ಧ ದಲಿತರು ಪ್ರತಿಭಟನೆಗಳನ್ನು ನಡೆಸುವ ಮೂಲಕ ಸರ್ಕಾರವನ್ನು ಎಚ್ಚರಿಸುತ್ತಿದ್ದಾರೆ. ದಪ್ಪ ಚರ್ಮದ ಚೆಡ್ಡಿ ಶಾಸಕರು, ಅವರ ಕಾಲಾಳುಗಳಾಗಿರುವ ಪೊಲೀಸ್ ಅಧಿಕಾರಿಗಳು ಮೂರು ಬಿಟ್ಟವರಂತೆ ವರ್ತಿಸುತ್ತ, ಅನ್ಯಾಯಕ್ಕೊಳಗಾದವರನ್ನೇ ಹಿಂಸಿಸುತ್ತಿದ್ದಾರೆ.


ಜಿಲ್ಲೆ ತುಂಬ ದೌರ್ಜನ್ಯ, ದಮನ

ಕುಗ್ರಾಮ, ಹಳ್ಳಿಗಳಲ್ಲಿ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸುದ್ದಿಗಳು ಆ ಊರುಗಳ ಗಡಿ ದಾಟುವುದೇ ಇಲ್ಲ. ಅವು ಜಮೀನ್ದಾರಿ ಗೌಡರ ಹೊಲದ ಬದುಗಳಲ್ಲಿ ಸತ್ತೇ ಹೋಗುತ್ತವೆ. ಒಂದಿಷ್ಟು ಕಡೆ ಮಾತ್ರ ಸ್ವಾಭಿಮಾನಿ, ವಿದ್ಯಾವಂತ ದಲಿತರು ಧ್ವನಿ ಎತ್ತುತ್ತಿರುವುದರಿಂದ ಕೆಲವೇ ಪ್ರಕರಣಗಳು ಹೊರಜಗತ್ತಿಗೆ ತಿಳಿಯುತ್ತಿವೆ.

ಪ್ರಕರಣ 1: ಮೈಗೂರು ಗ್ರಾಮ, ಜಮಖಂಡಿ ತಾಲ್ಲೂಕು

ಇಲ್ಲಿನ ಚಹಾ ಅಂಗಡಿಯಲ್ಲಿ ದಲಿತರಿಗೆಂದೇ ಪ್ರತ್ಯೇಕ ಟೀಕಪ್ಪುಗಳಿವೆ. ಉತ್ತರ ಕರ್ನಾಟಕದ ಲಿಂಗಾಯತರು, ಕುರುಬರು ಜಾಸ್ತಿಯಿರುವ ಹಳ್ಳಿಗಳಲ್ಲಿ ಈ ಅನಿಷ್ಠ ಪದ್ಧತಿ ಇನ್ನೂ ಜಾರಿಯಲ್ಲಿದೆ. ಕೆಲ ದಲಿತ ಯುವಕರು ಈ ಮೈಗೂರಿನ ಚಹಾ ಅಂಗಡಿಯಲ್ಲಿ ಸವರ್ಣೀಯರಿಗೆ ನೀಡುವ ಕಪ್ಪುಗಳನ್ನೇ ನಮಗೂ ನೀಡಿ ಎಂದು ಕೇಳಿದರು. ಅಷ್ಟೇ ಸಾಕಾಯಿತು ಜಾತಿ ಅಹಂನ ಚೆಡ್ಡಿ ಮನಸ್ಸುಗಳಿಗೆ. ಆ ಯುವಕರನ್ನು ಅವಮಾನಿಸಿದ ಇವರು ಊರಿನ ಇಡೀ ದಲಿತ ಸಮುದಾಯಕ್ಕೆ ಬಹಿಷ್ಕಾರ ಹಾಕಿದರು.










ಇದಕ್ಕೆ ಸೊಪ್ಪು ಹಾಕುವಂತೆ ವರ್ತಿಸಿದ್ದು ಡಿಎಸ್‌ಪಿ ಕ್ಯಾತನ್. ವಿಪರ್ಯಾಸ ವೆಂದರೆ ಈತನೂ ದಲಿ ತನೇ. ಈತನ ಅವಧಿಯಲ್ಲಿ ಒಂದೂ ದಲಿತ ದೌರ್ಜನ್ಯ ಕೇಸ್ ದಾಖಲಾಗಿಲ್ಲ, ದಾಖಲು ಮಾಡಲ್ಲ ಎಂದು ಪಣ ತೊಟ್ಟಿದ್ದಾನಂತೆ ಈ ಭೂಪ. ಇವನಿಗೆ ಭ್ರಷ್ಟಾತಿಭ್ರಷ್ಟ, ದಲಿತ ವಿರೋಧಿ ಚೆಡ್ಡಿ ಶಾಸಕ ಸಿದ್ದು ಸವದಿಯ ಬೆಂಬಲವಿತ್ತು. ಸಿದ್ದು ಸವದಿ ಉಗುಳಿದರೂ ಅದನ್ನು ಪ್ರಸಾದ ಎಂದುಕೊಳ್ಳುವ ಈ ಡಿಎಸ್‌ಪಿ ಕ್ಯಾತನ್ ಆ ಸಲವೂ ಸಿದ್ದುನ ಮಾತಿನಂತೆ ಸವರ್ಣೀಯರ ಪರ ನಿಂತುಬಿಟ್ಟಿದ್ದ. ಆದಕ್ಕೆ ತಕ್ಕಂತೆ ಅಮೇಧ್ಯವನ್ನೂ ತಿಂದು ದಲಿತರದೇ ತಪ್ಪು ಎಂದು ನಿರ್ಧರಿಸಿಬಿಟ್ಟಿದ್ದ.

ಪ್ರಕರಣ 2: ಕನ್ನೊಳ್ಳಿ ಗ್ರಾಮ, ಜಮಖಂಡಿ ತಾಲ್ಲೂಕು

ಡಿಎಸ್‌ಪಿ ಕ್ಯಾತನ್ ನಂತರ ಇಲ್ಲಿಗೆ ವಕ್ಕರಿಸಿದವನು ಆರ್.ಕೆ. ನಾಯಕ್ ಎಂಬ ಶಾಸಕ ಸವದಿಯ ಮತ್ತೊಬ್ಬ ಚೇಲಾ. ಕನ್ನೊಳ್ಳಿಯ ದಲಿತರು ತಮ್ಮ ಪಾಲಿಗೆ ನ್ಯಾಯಸಮ್ಮತವಾಗಿ ಬರಬೇಕಾದ ಭೂಮಿಗಾಗಿ 'ಭೂ ಹಕ್ಕು ಹೋರಾಟ' ನಡೆಸಿದರು. ಲಫಂಗ ಶಾಸಕ ಸವದಿಯ ಆಣತಿಯಂತೆ ಖಾಕಿಗಳು ಭೂಮಿ ಕೇಳಿದ ದಲಿತರ ಮೇಲೆ ರಾಕ್ಷಸೀ ದೌರ್ಜನ್ಯ ನಡೆಸಿದರು. ಆಗಲೂ ಹೋರಾಟ ತಣ್ಣಗಾಗದಿದ್ದಾಗ ಅಷ್ಟಿಷ್ಟು ಭೂಮಿ ನೀಡಿ ತಿಪ್ಪೆ ಸಾರಿಸಲು ನೋಡಿದರು. ದಲಿತರ ಮೇಲೆ ಶಾಸಕನಿಗೆ ಅದೆಷ್ಟು ದ್ವೇಷವಿದೆಯೆಂದರೆ, ಮೂವತ್ತು ದಲಿತ ಹೋರಾಟಗಾರರ ಮೇಲೆ ಮೂರು ಕೇಸು ಜಡಿಯುವಂತೆ ಮಾಡಿದ. ಪ್ರತಿ ಕೇಸಿನಲ್ಲೂ 15 ರಿಂದ 20 ಸೆಕ್ಷನ್ನುಗಳು. ಈ ಖಾಕಿ ಗೂಂಡಾಗಿರಿ ವಿರುದ್ಧ ಎತ್ತಿದ ಧ್ವನಿ ಯಾರಿಗೂ ತಲುಪಲಿಲ್ಲ.



ಶಾಸಕ ಸವದಿ ಎಂಬ ಮೇಲ್ಜಾತಿಯ ಮನೆಹಾಳನನ್ನು ಬಿಡಿ, ಬಾಗಲಕೋಟೆಯವನೇ ಆದ, ದಲಿತರ ಹೆಸರಲ್ಲಿ ಸಚಿವಗಿರಿ ಗಿಟ್ಟಿಸಿದ ಮತ್ತು ಈ ಜಿಲ್ಲೆಯ ಉಸ್ತುವಾರಿ ಹೊತ್ತಿರುವ ಅರವಿಂದ ಲಿಂಬಾವಳಿ, ಇನ್ನೊಬ್ಬ ದಲಿತ ಸಚಿವ ಗೋವಿಂದ ಕಾರಜೋಳ ಈ ಇಬ್ಬರೂ ಇಲ್ಲಿವರೆಗೆ ಈ ಕಡೆ ಮುಖ ಮಾಡಿಲ್ಲ, ದೌರ್ಜನ್ಯ ಖಂಡಿಸಿಲ್ಲ. ಆ ಮೂಲಕ ನಡೆದಿದ್ದೆಲ್ಲ ಕರೆಕ್ಟು ಎಂದು ಅಲಿಖಿತ ತೀರ್ಪು ನೀಡಿದ್ದಾರೆ.

ಪ್ರಕರಣ 3: ಬಾಮುತ್ತಿ ಗ್ರಾಮ, ಬೀಳಗಿ ತಾಲ್ಲೂಕು.



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದಲಿತರು, ಹಿಂದುಳಿದವರನ್ನು ಎಷ್ಟು ನಿಕೃಷ್ಟವಾಗಿ ಕಾಣಲಾಗುತ್ತಿದೆ ಎನ್ನುವುದಕ್ಕೆ ಇದೊಂದು ಸ್ಯಾಂಪಲ್ ಪ್ರಕರಣ. ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಮಾಡಿ ಹೊಟ್ಟೆ ತುಂಬಿಸಿಕೊಳ್ಳಲು ಹೋಗಿದ್ದ ದಲಿತ ಮಹಿಳೆಯರೊಂದಿಗೆ ವರ್ಕ್ ಇನ್ಸ್‌ಪೆಕ್ಟರ್ ಸಾವಳಗಿ ಅನುಚಿತವಾಗಿ ವರ್ತಿಸುತ್ತಿದ್ದ. ನೋಡಿ ನೋಡಿ ಸಾಕಾದ ದಲಿತ ವಿದ್ಯಾರ್ಥಿ ವಿಶ್ವನಾಥ್ ಕುಂದರಗಿ ಸಾವಳಗಿಯ ಹಲ್ಕಾ ಕೆಲಸವನ್ನು ವಿರೋಧಿಸಿದ. ಇದು ಮೇಲ್ಜಾತಿಯ ಕೊಬ್ಬನ್ನು ಕೆರಳಿಸಿತು. ಮಲ್ಲಪ್ಪ ಕನಸಗೇರಿ, ಪಾಂಡು ಎಂಬಿಬ್ಬರು ಪುಂಡರು ವಿಶ್ವನಾಥನನ್ನು ದನಕ್ಕೆ ಬಡಿದಂತೆ ಬಡಿದರು. ಈ ಹುಡುಗ ಪರೀಕ್ಷೆಗೆ ಹೋಗದಂತೆ ತಡೆದರು ಕೂಡ.

ಇದನ್ನು ವಿರೋಧಿಸಿ ಬಾಗಲಕೋಟೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಹಲವಾರು ದಿನಗಳ ಕಾಲ ಧರಣಿ ನಡೆಸಿದರೂ ಬೀಳಗಿಯ ಕಳ್ಳ ಸಚಿವ ಮುರುಗೇಶ್ ನಿರಾಣಿ ಇತ್ತ ನೋಡಲೇ ಇಲ್ಲ, ಯಾಕೆಂದರೆ ಹಲ್ಲೆ ಮಾಡಿ ಯಲ್ಲಪ್ಪ ಪಾಂಡುಗಳು ಗ್ರಾಮ ಪಂಚಾಯತಿಯ ಸದಸ್ಯ ಮತ್ತು ಮುರುಗೇಶ್ ನಿರಾಣಿಯ ಬಾಲಂಗೋಚಿಗ

ಪ್ರಕರಣ 4: ಶಿರಗುಪ್ಪಿ ಗ್ರಾಮ, ಬೀಳಗಿ ತಾಲ್ಲೂ

ಒಬ್ಬ ಎಸ್ಸಿ ಹುಡುಗ, ಒಬ್ಬ ಎಸ್ಟಿ ಹುಡುಗಿ ಪರಸ್ ಪ್ರೀತಿಸುತ್ತಿದ್ದರು. ಇದನ್ನು ಸಹಿಸದ ಗ್ರಾಮಸ್ಥರು ದಲಿತ ಮೇಲೆ ಬಹಿಷ್ಕಾರ ಹಾಕಿದರು. ನಿರಾಣಿ, ಲಿಂಬಾವ ಕಾರಜೋಳರಂತಹ ಸಚಿವರಿರುವಾಗ ಈ ದಲಿತರ ಗೋಳ ಕೇಳುವವರ್‍ಯಾರು? ಈಗಲೂ ಇಲ್ಲಿ ಬಹಿಷ್ಕಾರವಿದೆ, ದಲಿತ ಆತಂಕದಲ್ಲಿ ಬದುಕಬೇಕಾಗಿದೆ.

ಪ್ರಕರಣ 5: ಮಹಾಲಿಂಗಪುರ, ಮುಧೋಳ ಕ್ಷೇ

'ಛಲಗಾರ' ಎಂಬ ಪತ್ರಿಕೆ ನಡೆಸುವ ದಲಿ ಯುವಕ ಪ್ರಭಾಕರ್ ಗಗ್ಗರಿ ಮನೆಗೆ ರಾತ್ರೋರಾ ನುಗ್ಗಿದ ಪಿಎಸ್‌ಐ ಗಡ್ಡೇಕರ್ ಮಾದಕವಸ್ತು ಸಾಗ ಣೆಕೆಯ ನಕಲಿ ಆರೋಪ ಹೊರಿಸಿ, ಸ್ಟೇಷನ್ ಎಳೆತಂದು ರಾತ್ರಿಯಿಡೀ ಚಿತ್ರಹಿಂಸೆ ನೀಡಿದ ಗಗ್ಗರಿ ಮೇಲೆ ಈ ಪಿಎಸ್‌ಐಗೆ ಅದ್ಯಾಕೆ ಸಿಟ್ಟು ಅಂದ್ರೆ, ಗಗ್ಗರಿ ತನ್ನ ಪತ್ರಿಕೆಯಲ್ಲಿ ಗಡ್ಡೇಕರ್‌ನ ಬಾಸ್ ಡಿಎಸ್‌ಪಿ ನಾಯಕ್‌ನ ಲೀಲೆಗಳನ್ನು ಬರೆದಿದ್ದರು. ಅನ್ಯಾಯವಾಗಿ ಹಲ್ಲೆಗೊಳಗಾದ ಪತ್ರಕರ್ತನೆ ಗಗ್ಗರಿ ಈಗಲೂ ನ್ಯಾಯಕ್ಕಾಗಿ ಅಲೆಯುತ್ತಿದ್ದಾನೆ. ತನ್ನ ಕ್ಷೇತ್ರದಲ್ಲಿ ಇದೆಲ್ಲ ನಡೆದರೂ ಸಚಿವ ಗೋವಿಂದ ಕಾರಜೋಳನಿಗೆ ಇದ್ಯಾವುದು ಮುಖ್ಯವೇ ಅಲ್ಲ.

* * * *

ಕೃಷ್ಣೆಯ ಹರಿವಿನಿಂದ ರೊಕ್ಕದ ಹರಿವನ್ನು ಹೆಚ್ಚಿಸಿಕೊಂಡ ಇಲ್ಲಿನ ಮೇಲ್ಜಾತಿಯ ಭೂಮಾಲೀಕರ ಕೈಯಲ್ಲೇ ರಾಜಕೀಯದ ರಿಮೋಟ್ ಇದೆ. ಇಂಥವರ ಜೊತೆ ಶಾಮೀಲಾಗಿರುವ ಇಲ್ಲಿನ ಚೆಡ್ಡಿ ಶಾಸಕರು ಮತ್ತು ಸಚಿವಗಿರಿ ಪಡೆಯಲಷ್ಟೇ ದಲಿತತ್ವ ಬಳಸುವ ಲಿಂಬಾವಳಿ, ಕಾರಜೋಳರಂತಹ ಸಚಿವರು... ಇಂತಹ ಹೊತ್ತಲ್ಲಿ ನ್ಯಾಯ ಸಿಗಬೇಕೆಂದರೆ ದಲಿತ ಸಂಘಗಳ ಜೊತೆ ರೈತಸಂಘ, ಮತ್ತಿತರ ಪ್ರಗತಿಪರ ಸಂಘಟನೆಗಳೆಲ್ಲ ಸೇರಿ ಒಂದು ಪ್ರಬಲ ಜನಾಂದೋಲನ ರೂಪಿಸಬೇಕು. ಬಸವಣ್ಣನ ನೆಲದಲ್ಲಿ ಅದು ತುರ್ತಾಗಿ ಶುರುವಾಗಬೇಕಿದೆ.

● ಮಹಾಲಿಂಗಪ್ಪ ಆಲಬಾಳ


ಮುಧೋಳದಲ್ಲಿ ಸಿಕ್ಕಿಬಿದ್ದ ಮೈಸೂರಿನ ಮನ್ಮಥ!

ಮತ್ತೆ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ ಪರಮಹಾಶಯ ರಾಮಕೃಷ್ಣ ಎಂಬ ಹೆಣ್ಣುಬಾಕ. ಅಮಾಯಕ ಹೆಣ್ಣುಮಕ್ಕಳನ್ನು ಮದುವೆ ಆಗ್ತೀನಿ ಅಂತಾ ವಂಚಿಸುತ್ತಲೇ ಬಂದಿರುವ ಈ ಮೈಸೂರು ಮೂಲದ ರಾಮಕೃಷ್ಣನಿಗೆ ಈ ಸಲವೇನಾದರೂ ತಕ್ಕ ಶಾಸ್ತಿ ಆಗದಿದ್ದರೆ ಇವನ ಹಾವಳಿಗೆ ಇನ್ನೆಷ್ಟು ಹೆಣ್ಮಕ್ಕಳು ಮಾನ ಮತ್ತು ಹಣ-ಒಡವೆಗಳನ್ನು ಕಳೆದುಕೊಳ್ಳಬೇಕಾಗುತ್ತೋ ಯಾರಿಗೊತ್ತು?


ಈ ಹಿಂದೆ 2007ರ ನವೆಂಬರ್ 26ರಂದು ಮೈಸೂರು ಪೊಲೀಸರಿಗೆ ಇಂತಹುದ್ದೇ ಕೇಸಿನಲ್ಲಿ ಸಿಕ್ಕಿಬಿದ್ದಿದ್ದ ಈತನ ಕರಾಳ ಕಥೆ ಕುರಿತು ಅವತ್ತೇ 'ಲಂಕೇಶ್' ವಿವರವಾದ ವರದಿ ಬರೆದಿತ್ತು. ಬುಜುಬು 420 ಕೇಸ್ ಹಾಕಿದ ಪೊಲೀಸರ ಕ್ರಮವನ್ನು ಪತ್ರಿಕೆ ಪ್ರಶ್ನಿಸಿತ್ತು. ಇಂತಹ ಲೂಸ್ ಕೇಸಿನಿಂದಾಗಿ ಸಣ್ಣಪ್ರಮಾಣದ ಜೈಲುವಾಸ ಅನುಭವಿಸಿದ ಈ ಮುಠ್ಠಾಳ, ಜೈಲಿಂದ ಹೊರಬಂದಮೇಲೂ ಮತ್ತದೇ ದಂಧೆ ಶುರುಹಚ್ಚಿಕೊಂಡ. ಮೈಸೂರು ಭಾಗದ ಪೊಲೀಸ್ ಠಾಣೆಗಳಲ್ಲಿ ಈತನ ಜಾತಕಗಳೇ ಇದ್ದುದರಿಂದ ಈ ಸಲ ಇವನು ಬಾಗಲಕೋಟೆ ಕಡೆ ಕಣ್ಣು ಹಾಕಿದ.

ಹುಡುಗಿಗಾಗಿ ಆ್ಯಡ್!

ಮೂರು ತಿಂಗಳುಗಳ ಹಿಂದೆ 'ವಿಜಯ ಕರ್ನಾಟಕ'ದ ಬಾಗಲಕೋಟೆ ಆವೃತ್ತಿಯಲ್ಲಿ ಮದುವೆ ಕಾಲಂನಲ್ಲಿ ಒಂದು ಆ್ಯಡ್ ಕೊಟ್ಟ. 30 ವರ್ಷದ ಮೇಲಿರುವ ಹೆಣ್ಣು ಬೇಕೆಂದೂ, ಜಾತಿ ಯಾವುದಿದ್ದರೂ ಪರವಾಗಿಲ್ಲವೆಂದು ಜಾಹೀರಾತಿನಲ್ಲಿ ಹೇಳಿಕೊಂಡ. ಬಾಗಲಕೋಟೆ ಸುತ್ತಮುತ್ತಲ ಊರುಗಳಿಂದ ಹಲವು ಫೋನ್ ಬಂದವಾದರೂ ಅವರ್‍ಯಾರೂ ಸುಲಭವಾಗಿ ಬಲೆಗೆ ಬೀಳದವರಾಗಿದ್ದರು. ಆದರೆ ಗುಳೇದಗುಡ್ಡ ಸಮೀಪದ ಕೋಟೆಕೊಪ್ಪಲಿನಲ್ಲಿ ಶಿಕ್ಷಕಿಯಾಗಿರುವ 2 ವರ್ಷದ ದಾಕ್ಷಾಯಿಣಿ ಎಂಬುವವರು ಈ ಕಳ್ಳನಿಗೆ ಫೋನ್ ಹಚ್ಚಿ ಮದುವೆಯಾಗುವ ಬಯಕೆ ವ್ಯಕ್ತಪಡಿಸಿದರು. ಫೋನಿನಲ್ಲೇ ಸಾಗಿದ ಸಂಬಂಧ ಕೊನೆಗೆ ಇವರಿಬ್ಬರೂ ಬಾಗಲಕೋಟೆ ಬಸ್‌ಸ್ಟಾಂಡಿನಲ್ಲಿ ಭೇಟಿಯಾಗುವ ವೇಳೆಗೆ ಅರಳತೊಡಗಿತು. ದಾಕ್ಷಾಯಿಣಿಯ ಮನೆಯವರನ್ನೆಲ್ಲ 'ಅಂದರ್' ಮಾಡಿಕೊಂಡ ರಾಮಕೃಷ್ಣ ತಾನು ಮೈಸೂರು ಜಿಲ್ಲಾ ಪಂಚಾಯತಿಯಲ್ಲಿ ಇಂಜಿನಿಯರ್ ಎಂದು ರೀಲುಬಿಟ್ಟ. ಸಿಂಪಲ್ ಮ್ಯಾರೇಜ್ ಎನ್ನುತ್ತಾ ಸೋಗುಹಾಕಿದ.



ಒಂದಿನ ದೇವಸ್ಥಾನವೊಂದರಲ್ಲಿ ಮದುವೆ ನಿಗದಿ ಮಾಡಿದ. ಮೈತುಂಬಾ ಒಡವೆ ಧರಿಸಿ ಬಂದಳು ದಾಕ್ಷಾಯಿಣಿ. ತನ್ನ ಮಿತ್ರ ತಂದಿದ್ದ ಕಾರಿನಲ್ಲಿ ಆ ಆಭರಣಗಳನ್ನೆಲ್ಲ ಇರಿಸಿದ ರಾಮಕೃಷ್ಣ ನಡೆದುಕೊಂಡೇ ದೇವಸ್ಥಾನಕ್ಕೆ ಹೋಗೋಣವೆಂದ. ದೇವಸ್ಥಾನ ಹತ್ತಿರ ಬರುತ್ತಿದ್ದಂತೆ ಇವನಿಗೊಂದು ಫೋನ್ ಬಂತು. ಅದರ ನೆಪಮಾಡಿ, 'ಇಲ್ಲೇ ಹೋಗಿಬರುತ್ತೇನೆ' ಎಂದವನು ಸೀನ್‌ನಿಂದ ಗಾಯಬ್ ಆಗಿಬಿಟ್ಟ. ಇವನಿಂದ ಅನ್ಯಾಯಕ್ಕೊಳಗಾದ ಹೆಣ್ಣುಗಳ ಲಿಸ್ಟ್‌ಗೆ ದಾಕ್ಷಾಯಿಣಿ ಹೊಸ ಸೇರ್ಪಡೆಯಾದಳು.



ಪಟ್ಟುಬಿಡದ ದಾಕ್ಷಾಯಿಣಿ ಕಂಪ್ಲೇಂಟ್ ಕೊಟ್ಟಳು. ಬೆಂಗಳೂರಲ್ಲಿ ಕೆಲಸ ಮಾಡುವಾಗ ಈ ರಾಮಕೃಷ್ಣನ ಅಧ್ವಾನಗಳನ್ನು ಅರಿತಿದ್ದ ಪಿಎಸ್‌ಐ ಅಶೋಕ್ ಚುರುಕಾದರು. 'ವಿಜಯ ಕರ್ನಾಟಕ'ದಲ್ಲಿ ನೀಡಿದ್ದ ಜಾಹೀರಾತಿನಲ್ಲಿದ್ದ ರಾಮಕೃಷ್ಣನ ಮೊಬೈಲ್‌ಗೆ ಸಂಪರ್ಕಿಸಿದಾಗ ಅದು ಚಾಲ್ತಿಯಲ್ಲಿರಲಿಲ್ಲ. ಆದರೆ ಈ ಹಿಂದೆಯೇ ಇಂತಹ ಜಾಹೀರಾತುಗಳನ್ನು ನೀಡುವವರನ್ನು ಟೆಸ್ಟ್ ಮಾಡಲು ಹಲವಾರು ಮಹಿಳೆಯರನ್ನು ನೇಮಿಸಿದ್ದರು ಪಿಎಸ್‌ಐ ಅಶೋಕ್. ಅವರಲ್ಲಿ ಮುಧೋಳದ ಒಬ್ಬಾಕೆ ರಾಮಕೃಷ್ಣನ ಹೊಸ ನಂಬರ್ ಪಡೆದುಕೊಂಡಿದ್ದಳು. ಆಕೆಯ ಮೂಲಕ ತಂತ್ರ ಹೆಣೆದ ಪೊಲೀಸರು ರಾಮಕೃಷ್ಣನನ್ನು ಮುಧೋಳಕ್ಕೆ ಬರುವಂತೆ ಮಾಡಿದರು. ಆಸೆಗಣ್ಣಿನಿಂದ ಬಂದ ಮದುಮಗ ರಾಮಕೃಷ್ಣ ಈಗ ಬಾಗಲಕೋಟೆಯ ಪೊಲೀಸರ ಅತಿಥಿಯಾಗಿದ್ದಾನೆ.

ಯಾರಿವನು ಈ ಮನ್ಮಥನು?


ಈ ಹಿಂದೆ ಬೆಂಗಳೂರಿನ ಸುಧಾ ಎಂಬುವರನ್ನು ವಂಚಿಸಿ ಸಿಕ್ಕಿಬಿದ್ದಿದ್ದ ಈ ರಾಮಕೃಷ್ಣ ಆಗ ತಾನು ಕೃಷಿ ಇಲಾಖೆಯಲ್ಲಿ ಎಇಇ ಅಂದಿದ್ದ. ಈಗ ಜಿ.ಪಂ. ಇಂಜಿನಿಯರ್ ಅಂದಿದ್ದಾನೆ. ಅಸಲಿಗೆ ಇವನು ಪಕ್ಕಾ ಚೀಟರ್ ಅಷ್ಟೇ. ಈತನಿಂದ ಅನ್ಯಾಯಕ್ಕೊಳಗಾದ ಹೆಣ್ಮಕ್ಕಳ ಸಂಖ್ಯೆ ನೂರನ್ನು ದಾಟಿದೆ. ಜೊತೆಗೆ ಸೈಟು, ಜಮೀನು ಕೊಡಿಸುವ ನೆಪದಲ್ಲಿ ಹಲವಾರು ಜನರಿಗೆ ಟೋಪಿ ಹಾಕಿರುವ ಈ ರಾಮಕೃಷ್ಣ ಟಿ. ನರಸೀಪುರ ತಾಲ್ಲೂಕಿನ ಮೂಳಿಗನವಾಡಿಯವನು. 1993ರಿಂದ ಈ ಚೀಟಿಂಗ್ ಆರಂಭಿಸಿದ ಈತನ ನೆರವಿಗೆ ಹೆಂಡತಿ ಯಶೋದಾ, ಶ್ರೀಧರ, ಮಂಜರೆಂಬ ಅಡ್ನಾಡಿಗಳಿದ್ದಾರೆ.


ಆರಂಭದಲ್ಲಿ ಮಂಡ್ಯದ ಮಾಜಿ ಎಂಎಲ್‌ಸಿ ಕೃಷ್ಣಪ್ಪನವರ ಬಾಲಂಗೋಚಿಯಂತೆ ತಿರುಗಾಡಿಕೊಂಡಿದ್ದ. ಮುಂದೆ ಕೃಷ್ಣಪ್ಪನವರೇ ಇವನಿಗೆ ದಾವಣಗೆರೆ ಕಾಲೇಜಿನಲ್ಲಿ ಅಟೆಂಡರ್ ಕೆಲಸ ಕೊಡಿಸಿದರು. ಅಲ್ಲಿ ಸೈಟು ಕೊಡಿಸುವೆನೆಂದು ಹಲವಾರು ನೌಕರರ ಬಳಿ 30 ಲಕ್ಷ ಎತ್ತಿದ. ತಿಂಗಳೊಪ್ಪತ್ತಲ್ಲೇ ಅವರೆದುರು ಕೈ ಎತ್ತಿದ. ಆ ಕಾರಣಕ್ಕೆ ಕಾಲೇಜಿನಿಂದ ಒದ್ದೋಡಿಸಲ್ಪಟ್ಟ.


ಮುಂದೆ ಮದುವೆಯ ಹೆಸರಲ್ಲಿ ಮಹಿಳೆಯರನ್ನು ವಂಚಿಸುವ ಹಲ್ಕಾ ಕೆಲಸಕ್ಕಿಳಿದ. ಎರಡು ಮೂರು ಬಾರಿ ಜೈಲಿಗೆ ಬಿದ್ದರೂ ಬುದ್ಧಿ ಬರಲಿಲ್ಲ. ಈ ಸಲ ಬಾಗಲಕೋಟೆ ಪೊಲೀಸರು ಸಮಗ್ರ ತನಿಖೆ ಮಾಡಿ ಈ ಮನೆಹಾಳನಿಗೆ ಉಗ್ರಶಿಕ್ಷೆ ವಿಧಿಸಬೇಕಾಗಿದೆ.

● ಮೇಘರಾಜ್

...ಂತ್ರಿಕ ವಿವಿ: ...ೂಲ್ಸು ...ಾಲ್ಸು ...ೆಕ್ಕಕ್ಕಿಲ್ಲ


ಖಿಂಚಾ


ಲಿಂಬಾವಳಿ



...ಇದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾ...ಲಯದಲ್ಲಿ ನಡೆಯುತ್ತಿರುವ ಅಂಧದರ್ಬಾರಿನ ಕತೆ. ಇಲ್ಲಿ ಕೆಲವೇ ...ರ ಕೈಯಲ್ಲಿ ಇಡೀ ಆಡಳಿತ ವ್ಯವಸ್ಥೆ ನಲುಗುವಂತಾಗಿದೆ. ...ಕುಲಪತಿ ಖಿಂಚಾಗೆ ಇದನ್ನೆಲ್ಲ ನೋಡಲು ಕೊಂಚ ...ಪುರುಸೊತ್ತು ಇಲ್ಲವಂತೆ! ಆದರೆ ಅಸಲಿಯತ್ತು ಏನೆಂದರೆ ಇಲ್ಲಿ ...ಸ್ಟ್ರಾರ್ ಆಗಿರುವ ಕೆ.ವಿ.ಎ. ಬಾಲಾಜಿ ಎಂಬ ಮಹಾಶಯ ...ನೆಲ್ಲ ಒಪ್ಪಿಸಿಬಿಟ್ಟಿದ್ದಾರೆ ವಿ.ಸಿ. ಖಿಂಚಾ ಸಾಹೇಬರು. ...ದರೆ ಎರಡು ವರ್ಷದ ಹಿಂದೆ ಉತ್ತರ ಭಾರತದ ಮೂಲದ ...ರು ವಾಪಿ ಖಿಂಚಾ ವಿ.ಸಿ. ಆಗುವಂತೆ 'ಸಕಲ' ವ್ಯವಸ್ಥೆ ...ದ್ದೇ ರಿಜಿಸ್ಟ್ರಾರ್ ಬಾಲಾಜಿ. ಒಂದಾ...ರ್ಥದಲ್ಲಿ ...ಪಿ ಕಾಲದಿಂದಲೂ ಬಾಲಾಜಿಯೇ ...ಖಿಂಚಾನ ಗುರು! ಗುರು-ಶಿಷ್ಯರಿಬ್ಬರು ...ಮಹತ್ವಾಕಾಂಕ್ಷೆಯ ಸುಧಾರಣೆಗಳನ್ನು ...ಹಿದ್ದ ತಾಂತ್ರಿಕ ವಿವಿಯನ್ನು ತಮ್ಮ ...ಕ ಬುದ್ಧಿಯಿಂದಾಗಿ ಹಾಳುಗೆಡವು...

...ಹಳಷ್ಟು ಇಂಜಿನಿಯರಿಂಗ್ ಕಾಲೇಜು ...ಪ್ರಿನ್ಸಿಪಾಲರು ಆಗಾಗ ಇಂತಹ ಅವ್ಯವಸ್ಥೆಯ ವಿರುದ್ಧ ಧ್ವನಿ ...ತ್ತಲೇ ಬಂದಿದ್ದಾರೆ. ಹಿಂದಿನ ಉನ್ನತ ಶಿಕ್ಷಣ ಸಚಿವ ಡಿ.ಎಚ್. ...ಶಂಕರಮೂರ್ತಿ ಬರೀ ಟಿಪ್ಪೂ ಸುಲ್ತಾನ್ ತೇಜೋವಧೆ ...ಯಲ್ಲೇ ಕಾಲ ಕಳೆದುಹೋದ. ಈಗಿನ ಉನ್ನತ ಶಿಕ್ಷಣ ...ಸಚಿವ ಅರವಿಂದ ಲಿಂಬಾವಳಿ ಎಂಬ ಚಡ್ಡಿಗಂತೂ ಕಾಲೇಜುಗಳನ್ನು ...ಕೇಸರೀಕರಣ ಮಾಡುವುದರಲ್ಲೇ ಆಸಕ್ತಿ. ಇಲ್ಲಿಯವರೆಗೆ ವಿವೇ... ...ಉತ್ಸವದ ಹೆಸರಲ್ಲಿ ತನ್ನ ಪೂರ್ವಾ... ...ಶ್ರಮದ ಎಬಿವಿಪಿಯ ಪುಂಡ ವಿದ್ಯಾರ್ಥಿ...ಗಳ ಮೂಲಕ ಕಾಲೇಜು-ಕಾಲೇಜುಗಳಲ್ಲಿ ...ಸಂಘಪರಿವಾರದ ವಿಷಕಾರಿ ಸಿದ್ಧಾಂತಗಳ ... ಮಾಡಿದ.

...ಇನು ಇಂಜಿನಿಯರಿಂಗ್ ಮಾಡೀ... .... ತಾಂತ್ರಿಕ ವಿವಿಯತ್ತ ಒಂದಿಷ್ಟು ...ಹೋ ಮಾರಾಯ' ಅಂದರೆ ಪಕ್ಕಾ ...ಕ'ನಂತೆ ಸಂಸ್ಕೃತ ವಿವಿಯ ಬಗ್ಗೆ ...ಸಿಕೊಂಡ. ಈಗ ನೋಡಿದರೆ, ಈತನ ...ಪಿಯ ಪಟಾಲಂ ಅಲ್ಲಲ್ಲಿ ಪ್ರಶ್ನೆಪತ್ರಿಕೆ ...ಮಾಡುವ ಕೆಲಸದಲ್ಲಿ ತೊಡಗಿದೆ. ...ರುತ್ತೊಂದು ಹೆಜ್ಜೆ 'ಮುಂದೆ' ಹೋಗಿ ...ಲಿಂಬಾವಳಿ ಶಾಲೆ-ಕಾಲೇಜುಗಳಲ್ಲಿ ...ಜಿ ರವಿಶಂಕರ ಎಂಬ ಇಂಟರ್...ನ್ಯಾಷನಲ್ ಕಪಟನಿಂದ ಯೋಗ ಮಾಡಿಸು...



...ಪರಿಸ್ಥಿತಿ ಹೀಗಿರುವಾಗ ತಾಂತ್ರಿಕ ವಿಶ್ವವಿದ್ಯಾಲಯದ ...ಕುಬಿಟ್ಟ ನೀತಿ-ನಿಯಮಗಳನ್ನು ಕೇಳುವವರಾರು? ರಿಜಿಸ್ಟ್ರಾರ್ ...ಜಿ, ವಿ.ಸಿ. ಖಿಂಚಾ ಆಡಿದ್ದೇ ಆಟ ಎನ್ನುವಂತಾಗಿದೆ.

ನಿಯಮಬಾಹಿರ ಪಿ.ಜಿ.

...ತ್ರಿಕ ವಿವಿಯ ಆಡಳಿತಾತ್ಮಕ ನಿಯಮಗಳು ಎಷ್ಟು ...ಹೋಗಿವೆ ಎನ್ನುವುದಕ್ಕೆ ಇಲ್ಲೊಂದು ಸ್ಯಾಂಪಲ್ ನೋಡಿ. ...ಕೋಟೆಯ ಇಂಜಿನಿಯರಿಂಗ್ ಕಾಲೇಜಿನ ಪಿ.ಜಿ.(ಎಂ.ಇ., ...) ತರಗತಿಗಳಲ್ಲಿ ಓದುತ್ತಿರುವ ಹದಿನಾರು ಜನರು ... ವಿವಿಧ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ...ಪನ್ಯಾಸಕರಾಗಿದ್ದಾರೆ. ಹೀಗೆ ಒಂದು ಕಡೆ ಉಪನ್ಯಾಸಕ ವೃತ್ತಿ ...ಒಂದು ಇನ್ನೊಂದು ಕಡೆ ಪಿ.ಜಿ. ಮಾಡಲು ಬರುವು...ದಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ ...ವರು ಎಂ.ಟೆಕ್, ಎಂ.ಇ. ಇಲ್ಲದೇ ಬೋಧಿಸುತ್ತಿರುವುದು. ...ರಗತಿಗೆ ಉಪನ್ಯಾಸಕರಾಗಲು ಎಂ.ಇ. ಅಥವಾ ಎಂ.ಟೆಕ್ ...ಅರ್ಹತೆ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ...ಮಂಡಳಿ ನಿಯಮವಿದೆ. ಆದರೆ ಬಹುತೇಕ ಕಾಲೇಜುಗಳಲ್ಲಿ ...ನಿಯಮದ ಉಲ್ಲಂಘನೆ ನಡೆದೇ ಇದೆ. ಎಲ್ಲ ...ಕಾಲೇಜುಗಳಲ್ಲಿ ಅಧ್ವಾನಿ ಮುಡುಕುವ ಬಹುತೇಕ ...ಮ್ಯಾನೇಜ್‌ಮೆಂಟ್‌ಗಳು ತಮ್ಮ ಜಾತಿಯವರಿಗೆ ಉದ್ಯೋಗ ...'ಹಾಯಕ'ದಲ್ಲಿ ನಿರತವಾಗಿವೆ. ಅಂದಂತೆ ಬಾಗಲಕೋಟೆ ...ನಿಯರಿಂಗ್ ಕಾಲೇಜಿನ ದೊರೆ ಯಾರು ಗೊತ್ತೇ? ಬಿಜೆಪಿ ...ಶಾಸಕ ವೀರಣ್ಣ ಚರಂತಿಮಠ ಎಂಬ ಪಕ್ಕಾ ಜಾತಿವಾದಿ ...ನು! ಅದೇ ಬಾಗಲಕೋಟೆಯ ಮೂಲದ ಅರವಿಂದ

ಲಿಂಬಾವಳಿಯೇ ಉನ್ನತ ಶಿಕ್ಷಣ ಸಚಿವ! ಹೀಗಿದ್ದಾಗ ಅಲ್ಲಿ ಯಾವ ನಿಯಮಕ್ಕೇನು ಕಿಮ್ಮತ್ತು ಸಿಕ್ಕೀತು?

ಹೆಗ್ಡೆ : ಸ್ಟೂಡೆಂಟ್ ಕಮ್ ಆಫೀಸರ್!

ಮೇಲಿನದು ಒಂದು ಉದಾಹರಣೆಯಷ್ಟೇ. ಇನ್ನು ವಿವಿಯ ಕೇಂದ್ರ ಕಚೇರಿಯಲ್ಲಂತೂ ರಿಜಿಸ್ಟ್ರಾರ್ ಬಾಲಾಜಿ, ವಿ.ಸಿ. ಖಿಂಚಾಗಳ ಚೇಲಾಗಳದ್ದೇ ಕಾರುಬಾರು. ಅಂತಹವರಲ್ಲೊಬ್ಬ ಗೌರೀಶ್ ಎಸ್.ಹೆಗ್ಡೆ. ಈತ ಇಲ್ಲಿ ಅಕಾಡೆಮಿಕ್ ವಿಭಾಗದ ಸ್ಪೆಷಲ್ ಆಫೀಸರ್. ಜೊತೆಯಲ್ಲಿ ವಿ.ವಿ.ಕ್ಯಾಂಪಸ್‌ನಲ್ಲೇ ಎಂ.ಟೆಕ್ ಕಲಿಯುವ ಪಾರ್ಟ್‌ಟೈಮ್ ಸ್ಟೂಡೆಂಟ್ ಕೂಡಾ! ಅಂದರೆ ಈತನ ವಿದ್ಯಾರ್ಹತೆ ಬಿ.ಇ. ಪದವಿ ಮಾತ್ರವಾಗಿದ್ದು ಸ್ಪೆಷಲ್ ಆಫೀಸರ್ ಹುದ್ದೆಗೆ ಅನ್‌ಫಿಟ್ ಅಂದರೆ ಅನ್‌ಫಿಟ್. ಆದರೆ ರಿಜಿಸ್ಟ್ರಾರ್, ವಿ.ಸಿ.ಗಳೊಂದಿಗೆ ಹೆಗ್ಡೆಯದು ಮ್ಯಾಚ್ ಫಿಕ್ಸ್.

ಈ ಹೆಗ್ಡೆ ಎಂತಹ ಬಹುರೂಪಿ ಕಲಾವಿದನೆಂದರೆ ಎಂ.ಟೆಕ್ ಕಲೀತಾನೇ ಇದ್ದಾನೆ, ಸ್ಪೆಷಲ್ ಆಫೀಸರ್ ಕೆಲಸಾನೂ ಮಾಡ್ತಿದ್ದಾನೆ. ಜೊತೆಗೆ ಈತ ಮಂಗಳೂರಿನ ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಟಕ್ನಾಲಜಿಯಲ್ಲಿ ಉಪನ್ಯಾಸ ಮಾಡ್ತಾ ಇದ್ದಾನೆ.

ಅಂದರೆ ಮಂಗಳೂರಲ್ಲಿ ಪುಕ್ಕಟ್ಟೆ ಸಂಬಳ, ಬೆಳಗಾವಿಯಲ್ಲಿ ಅರ್ಹತೆ ಮೀರಿದ ಸಂಬಳ ಪ್ಲಸ್ ಗಿಂಬಳ

'ಕಲಾ'ಧಿಪತಿಯೀತ

ಕುಲಪತಿ, ಕುಲಾಧಿಪತಿ, ಉಪಕುಲಪತಿ ಎಂಬ ಹುದ್ದೆಗಳನ್ನು ಕೇಳಿದ್ದೀರಿ. ನಿಮಗೆ 'ಕಲಾ'ಧಿಪತಿ ಗೊತ್ತಾ? ಸ್ಪೆಷಲ್ ಆಫೀಸರ್ ಆಗಿದ್ದುಕೊಂಡು ಉಪಕುಲಪತಿಗಳ ಲೆವೆಲ್ಲಿನ ನಿರ್ಧಾರಗಳನ್ನು ಈ ಹೆಗ್ಡೆಯೇ ತೆಗೆದುಕೊಳ್ಳುತ್ತಿದ್ದಾನೆ. ಅಂದರೆ ಇವನು 'ಕಲಾ'ಧಿಪತಿಯೇ ಸರಿ! ಓದಿದ್ದು ಬರೀ ಬಿ.ಇ. ಕೋರ್ಸ್ ಮಾತ್ರವಾದರೂ ಉನ್ನತಮಟ್ಟದಲ್ಲಿ ರಚನೆಗೊಳ್ಳುವ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿ (ಎಲ್‌ಐಸಿ)ಗಳಲ್ಲೂ ಈತ ತಲೆಹಾಕುತ್ತಾನೆ. ತನಗೆ ಬೇಕಾದವರನ್ನು ಕಮಿಟಿಗೆ ತುಂಬುತ್ತಾನೆ. ಅದಿರಲಿ, ಸ್ಪೆಷಲ್ ಆಫೀಸರ್ ಆಗಲು ನಾಲಾಯಕ್ ಎನಿಸಿರುವ ಈ ಮನುಷ್ಯ ಐದು ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಗಳಲ್ಲಿ ತೂರಿಕೊಂಡಿದ್ದಾನೆ! ಗಾಳಿ ಬಿಟ್ಟಾಗ ತೂರಿಕೊಳ್ಳುವ ಎಕ್ಸ್‌ಪರ್ಟ್ ಎನಿಸಿರುವ ಈತನ ಬೆಂಬಲಕ್ಕೆ ರಿಜಿಸ್ಟ್ರಾರ್ ಬಾಲಾಜಿ, ವಿ.ಸಿ. ಖಿಂಚಾಗಳು ನಿಂತಿರುವುದಕ್ಕೆ ಸಾಕಷ್ಟು ಸಾಕ್ಷಿಗಳಿವೆ.

ಏಪ್ರಿಲ್ 1 ರಂದು ವಿ.ಟಿ.ಯು. ರಿಜಿಸ್ಟ್ರಾರ್ ಬರೆದ ಪತ್ರ ಇದಕ್ಕೆ ಸಾಕ್ಷಿ. ಪಿಎಚ್.ಡಿ. ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆ ಪರಿಶೀಲನೆ ಮಾಡುವ, ಮೌಲ್ಯ ಮಾಪನದ ಜವಾಬ್ದಾರಿ ನೋಡಿಕೊಳ್ಳುವ ಅಧಿಕಾರವನ್ನು ಸ್ವತಃ ರಿಜಿಸ್ಟ್ರಾರ್‌ರವರು ಹೆಗ್ಡೆಗೆ ದಯಪಾಲಿಸುತ್ತಾರೆ. ಇಷ್ಟು ಸಾಕಲ್ಲವೇ ಹೆಗ್ಡೆಗೆ? ಅದು ಬಿಡಿ. ಈತನೇ ಇನ್ನೂ ನೆಟ್ಟಗೆ ಪಿ.ಜಿ. ಮುಗಿಸಿಲ್ಲ, ಆದರೆ ಇವನ ಸುಪರ್ದಿನಲ್ಲಿ 2009ರ ಪಿ.ಜಿ.-ಸಿ.ಇ.ಟಿ. ಪರೀಕ್ಷೆ ನಡೆಸಲಾಗಿದೆ!

ಮಾರ್ಚ್ 31ರಂದು ಈತನನ್ನು ಸ್ಪೆಷಲ್ ಆಫೀಸರ್ ಹುದ್ದೆಯಿಂದ ರಿಲೀವ್ ಮಾಡುತ್ತಾರೆ. ಆಗಾತ ಅಲ್ಲೇ ಬೆಳಗಾವಿಯ ಗೋಗಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕ ಕೆಲಸವನ್ನು ಮಾಡುತ್ತಿದ್ದ. ಆದರೆ ಏಪ್ರಿಲ್ 3ರಂದು ವಿ.ಸಿ.ಯವರ ಆದೇಶದಂತೆ ಮತ್ತೆ ಈ ಹೆಗ್ಡೆ ಸ್ಪೆಷಲ್ ಆಫೀಸರ್ ಆಗಿ ವಕ್ಕರಿಸುತ್ತಾನೆ. ಒಂದು ಕಡೆ ರಿಜಿಸ್ಟ್ರಾರ್ ಬಲ, ಇನ್ನೊಂದು ಕಡೆ ವಿ.ಸಿ.ಯ ಬೆಂಬಲ... ಹೆಗ್ಡೆಯನ್ನು ಕೇಳುವವರಾರು?

ಈ ಕುರಿತು ಹಲವಾರು ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರು ಪ್ರಶ್ನೆ ಎತ್ತಿದ್ದಾರೆ. ಮಂಗಳೂರಿನ ಎಂ.ವಿ. ಶೆಟ್ಟಿ ಕಾಲೇಜಿನ ಪ್ರಾಂಶುಪಾಲರು ಎಂ.ಟೆಕ್ ಪ್ರವೇಶದಲ್ಲಾಗುತ್ತಿರುವ ಅವ್ಯವಹಾರಗಳ ಕುರಿತು ಪ್ರಶ್ನೆ ಎತ್ತಿ ವಿ.ಸಿ.ಗೇ ಪತ್ರ ಬರೆದಿದ್ದಾರೆ.

ವಿವಿಯಲ್ಲಿ ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ ಜಾರಿಯಲ್ಲಿದ್ದರೂ, ಮಾಹಿತಿ ಕೇಳಿದ ಯಾವ ಕಾಲೇಜನ್ನೂ ವಿವಿ ಸಂಪರ್ಕಿಸಿಲ್ಲ, ಮೇಲಿನದೆಲ್ಲಾ ಆರೋಪಗಳನ್ನು ಇವತ್ತಿಗೂ ಅಲ್ಲಗಳೆಯದಿರುವ ವಿ.ಸಿ. ಮಾತ್ರ ತಪ್ಪಿತಸ್ಥರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ, ಬಿಡಿ, ಆತನೇ ಒಬ್ಬ ಕಲ್‌ಪ್ರಿಟ್ ಅಲ್ಲವೇ?


ಬೆಳಗಾವಿಯಲ್ಲಿರದೇ ಸದಾ ಬೆಂಗಳೂರಲ್ಲೇ ಠಿಕಾಣಿ ಹೂಡುವ ಈತ ಹಲವಾರು ಕಂಪನಿಗಳಿಗೆ ಕನ್ಸಲ್ಟೆಂಟ್ ಆಗಿರುವುದರಿಂದ ಅದರಲ್ಲೇ ಕಾಲ ಹಾಕುತ್ತಾನೆ. ಬೆಳಗಾವಿಯಲ್ಲಿ ರಿಜಿಸ್ಟ್ರಾರ್ ಬಾಲಾಜಿ, ಹೆಗ್ಡೆಯಂಥ ಹೆಗ್ಗಣಗಳದ್ದೇ ಕಾರುಬಾರು.....

ಈಗಲಾದರೂ ಲಿಂಬಾವಳಿ ಸಂಸ್ಕೃತ ಗುಂಗಿನಿಂದ ಹೊರಬಂದು ಈ ತಾಂತ್ರಿಕ ವಿವಿಯತ್ತ ನೋಡುವನೇ?


● ಪಿ.ಕೆ.ಮಲ್ಲನಗೌಡರ್

ಕೊಳ್ಳೇಗಾಲ ಆಪರೇಷನ್ 'ಕೈ'ವಶ...

ಪಕ್ಷಾಂತರಿಗಳಿಗೆ ಕೈಲಾಸ!


ಮಹಾದೇವಪ್ರಸಾದ್

ಮಂಡ್ಯದ ನಗರಸಭೆಯಲ್ಲಿ 'ಆಪರೇಷನ್ ಕಮಲ' ಹಳ್ಳ ಹಿಡಿದು, ಸದನ್ನಾಗಿ ಚಡ್ಡಿ ತೊಟ್ಟಿದ್ದ ಜೆಡಿಎಸ್ ಸದಸ್ಯರು ಸದಸ್ಯತ್ವ ಕಳೆದುಕೊಂಡು ಬೀದಿಪಾಲಾದದ್ದರ ಸುದ್ದಿಯ ಬೆನ್ನಿಗೇ ಅಂತಹುದೇ ಸುದ್ದಿ ಬಂದಿದೆ ಕೊಳ್ಳೇಗಾಲದಿಂದ. ಇಲ್ಲೂ ಹತ್ತು ಜೆಡಿಎಸ್ ನಗರಸಭಾ ಸದಸ್ಯರು ಸದಸ್ಯತ್ವ ಕಳೆದುಕೊಂಡು ಅಬ್ಬೇಪಾರಿಗಳಾಗಿದ್ದಾರೆ. ಆದರಿಲ್ಲಿ ಇವರನ್ನು ಬಲಿ ತೆಗೆದುಕೊಂಡಿದ್ದು 'ಆಪರೇಷನ್ ಕಮಲ'ವಲ್ಲ; ಬದಲು 'ಆಪರೇಷನ್ ಹಸ್ತ!'



ಬಾಲರಾಜ್

ಧ್ರುವನ ಉಪದ್ರವ!


ನಾಗರಾಜು

ಸಸ್ಪೆಂಡಾಗಿರುವ ಹತ್ತು ಜೆಡಿಎಸ್ ಸದಸ್ಯರು ಬಾಯಿ ಬಾಯಿ ಬಡಿದುಕೊಂಡು ಧ್ರುವನಾರಾಯಣನನ್ನು ಶಪಿಸುತ್ತಿದ್ದಾರೆ. ಧ್ರುವ ಮಾತ್ರ ದೆಹಲಿಯಲ್ಲಿ ಆರಾಮಾಗಿ ಕುಳಿತಿದ್ದಾನೆ.


ಚಾಮರಾಜನಗರದ ಎಂಪಿ ಮತ್ತು ಹಿಂದಿನ ಕೊಳ್ಳೇಗಾಲದ ಕಾಂಗ್ರೆಸ್ ಶಾಸಕ ಧ್ರುವನಾರಾಯಣ ಸಾಹೇಬರು 'ಆಪರೇಷನ್ ಕಮಲ'ದ ರೂಟಿನಲ್ಲಿ ಸಾಗಿ, 'ಆಪರೇಷನ್ ಹಸ್ತ' ನಡೆಸಿ ಹತ್ತು ಜೆಡಿಎಸ್ ಸದಸ್ಯರನ್ನು ಹಳ್ಳಕ್ಕೆ ನೂಕಿದ್ದಾರೆ.


ಚೌಡಮ್ಮ


ಸಂತೇಮರಳ್ಳಿ ಕ್ಷೇತ್ರ ಕಳೆದುಹೋದ ನಂತರ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ಸಿನಿಂದ ಗೆದ್ದಿದ್ದ ಧ್ರುವನಾರಾಯಣ, ಶಾಸಕನಾಗಿದ್ದೇ ತಡ ಕೊಳ್ಳೇಗಾಲ ನಗರಸಭಾ ಗದ್ದುಗೆಯನ್ನು ಜೆಡಿಎಸ್‌ನಿಂದ ಕಿತ್ತುಕೊಳ್ಳಲು ಸಂಚು ರೂಪಿಸತೊಡಗಿದ. ಮೊದಲಿಗೆ ಬಲಿ ಬಿದ್ದವನು ಜೆಡಿಎಸ್ ಸದಸ್ಯ ಮಹದೇವಪ್ರಸಾದ್ ಅಲಿಯಾಸ್ ಪ್ರದೀಪ್ ಎಂಬ ಸೋಗಲಾಡಿ. ಅಲ್ಲಿಂದ 'ಕೈವಶ' ಕಾರ್ಯಾಚರಣೆ ಶುರುವಾಯ್ತು ನೋಡಿ, ಧ್ರುವನ ಗಂಟಿನ ಹಿಂದೆ ಬಿದ್ದ ಜೆಡಿಎಸ್‌ಗಳು ಕಾಂಗ್ರೆಸ್ಸಿನಲ್ಲಿ 'ಧ್ರುವೀ'ಕರಣಗೊಳ್ಳತೊಡಗಿದರು.


ರಾಜೇಶ್ವರಿ

ಮೊದಲು ಮಾಜಿ ಶಾಸಕ ಜೆಡಿಎಸ್‌ನ ಎಸ್. ಬಾಲರಾಜ್ ಅವಧಿಯಲ್ಲಿ ಅವರ ಬಾಲಂಗೋಚಿಯಾಗಿದ್ದ ಪ್ರದೀಪ್‌ನೇ 'ಆಪರೇಷನ್ ಕೈವಶ' ಎಂಬ ಕೊಳಕು ಕಾರ್ಯಾಚರಣೆಯ ನೇತೃತ್ವ ವಹಿಸಿದ. ಜೆಡಿಎಸ್‌ನ ಆಸೆಬುರುಕ ಸದಸ್ಯರುಗಳಾದ ಸೆಲ್ವರಾಜ್, ಜಿ.ಎಂ. ಸುರೇಶ್, ಕಂದಸ್ವಾಮಿ, ಚೌಡಮ್ಮ, ಸುರೇಶ್, ನಾಗರಾಜ್, ವೀಣಾಧರ ಸೇಠ್, ಎಂ.ಎಸ್.ಆರ್. ಬಾಬು, ರಾಜೇಶ್ವರಿ ನಾರಾಯಣಗಳೆಲ್ಲ ತಲೆಮೇಲಿನ ತೆನೆಯನ್ನು ಬೀದಿಗೆಸೆದು 'ಕೈ' ವಶವಾಗಿ ಹೋದರು. ನಂತರ ಜೆಡಿಎಸ್‌ನ ಪರಮಶಿವಯ್ಯನನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಲು ಅವಿಶ್ವಾಸ ನಿರ್ಣಯ ಎಂಬ ಡ್ರಾಮಾ ರಾತ್ರೋರಾತ್ರಿ ರೂಪುಗೊಂಡಿತು. ಪರಮಶಿವಯ್ಯನನ್ನು ಕೆಳಗಿಳಿಸಿದ ಈ ಪಕ್ಷಾಂತರಿಗಳು ತಮ್ಮದೇ ಗುಣದ ಸೆಲ್ವರಾಜ್ ಎಂಬ ಬಕಾಸುರನನ್ನು ಅಧ್ಯಕ್ಷ ಪದವಿಯಲ್ಲಿ ತಂದೊಗೆದರು.


ಧ್ರುವನಾರಾಯಣ


ಜಿ.ಎಂ.ಸುರೇಶ್


ಕಂದಸ್ವಾಮಿ

ಆಗ ಎಚ್ಚೆತ್ತುಕೊಂಡ ಮಾಜಿ ಶಾಸಕ ಬಾಲರಾಜ್ ತನ್ನ ಶಿಷ್ಯಂದಿರಾದ, ನಗರಸಭಾ ಸದಸ್ಯರೂ ಆದ ಕಿಟ್ಟಿ ಮತ್ತು ಚಿಂತುಗಳನ್ನು, ಜೊತೆಗೆ ಪದಚ್ಯುತ ಅಧ್ಯಕ್ಷ ಪರಮೇಶ್ವರಯ್ಯನನ್ನು ಬಳಸಿಕೊಂಡು, ಪಕ್ಷಾಂತರಗೊಂಡ ಹತ್ತೂ ಜೆಡಿಎಸ್ ಸದಸ್ಯರ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ಮತ್ತು ವಿಪ್ ಉಲ್ಲಂಘಟನೆಯ ಅಸ್ತ್ರ ಹೂಡಿ, ನ್ಯಾಯಾಲಯಕ್ಕೆ ಹೋದ.



ಸದಸ್ಯತ್ವ ರದ್ದಿನಿಂದ ಪಾರಾಗಲು ಪಕ್ಷಾಂತರಿ ಸದಸ್ಯರು ನೂರೆಂಟು ತಂತ್ರ ಹೆಣೆದರು. ಸಂಸದ ಧ್ರುವನಾರಾಯಣನೂ ಅವರ ಜೊತೆಗೆ ನಿಂತಂತೆ ಮಾಡಿದ. ಆದರೆ ನೀತಿಗೆಟ್ಟ ಜೆಡಿಎಸ್ ಸದಸ್ಯರಿಗೆ ಕುತ್ತು ಬಂದೇಬಿಟ್ಟಿತು. ಜಿಲ್ಲಾಧಿಕಾರಿ ಮನೋಜ್‌ಕುಮಾರ್ ಮೀನಂ ಜೂನ್ 26 ರಂದು ಈ ಜಂಪಿಂಗ್ ಸದಸ್ಯರ ಸದಸ್ಯತ್ವವನ್ನೇ ರದ್ದು ಮಾಡಿ ಸರಿಯಾಗಿ ಪಾಠ ಕಲಿಸಿಬಿಟ್ಟರು.




ಕಾವ್‌ಕಾವ್ ಎನ್ನುತ್ತಿವೆ!


ಜೆಡಿಎಸ್‌ನಿಂದ ಕಾಂಗ್ರೆಸ್ಸಿಗೆ ಹೋಗಿ ಸದಸ್ಯತ್ವ ಕಳೆದುಕೊಂಡ 'ಮಹಾತ್ಮ'ರೆಲ್ಲ ಈಗ ಕಾವ್ ಕಾವ್ ಎಂದು ಕಿರುಚುತ್ತಿದ್ದಾರೆ. 'ಧ್ರುವನ ನಂಬಿ ಹಾಳಾದೆವು' ಎಂದು ಬೊಬ್ಬೆ ಹಾಕುತ್ತಿದ್ದಾರೆ. ಸಂಸದ ಧ್ರುವನಾರಾಯಣ ತಮ್ಮ ಬೆನ್ನಿಗಿದ್ದಾನೆಂದು ನಂಬಿದ ಈ ಅಡ್ನಾಡಿ ಸದಸ್ಯರು ಈಗ ಜನರಿಗೂ ಮುಖ ತೋರಿಸುವ ಸ್ಥಿತಿಯಲ್ಲಿಲ್ಲ. ದೆಹಲಿ ಪಾಲಾದ ಧ್ರುವನಾರಾಯಣ್ ಯಾವಾಗ ತಮ್ಮ ಕೈಗೆ ಸಿಗದ 'ಧ್ರುವತಾರೆ' ಎಂದು ಜ್ಞಾನೋದಯವಾಗಿತ್ತೊ ಆಗ ಈ ಸಸ್ಪೆಂಡ್ ಸದಸ್ಯರು ಮತ್ತೆ ಆಸರೆ ಬಯಸಿ ಹೋಗಿದ್ದು ಜೆಡಿಎಸ್‌ಗೇ! ಮಾಜಿ ಶಾಸಕ ಬಾಲರಾಜುವಿನ ಹಿಂದೆಬಿದ್ದ ಇವರು, "ಹೇಗಾದರೂ ಮಾಡಿ ಸದಸ್ಯತ್ವ ಮತ್ತೆ ಸಿಗುವಂತೆ ಮಾಡಿ ಸ್ವಾಮಿ, ನೀವು ಹೇಳಿದವರನ್ನೇ ಅಧ್ಯಕ್ಷರನ್ನಾಗಿ ಮಾಡೋಣ" ಎಂದು ತೋಯ್ಕೊಳ್ತಾ ಇದ್ದಾರೆ.

ಈ ಆಪರೇಷನ್ ಕಮಲ, ಆಪರೇಷನ್ ಹಸ್ತ ಎಂಬ ಬ್ಯುಸಿನೆಸ್‌ಗಳಿಗೆ ನಗರಸಭೆಯ ಮಟ್ಟದಲ್ಲಿ ಹೊಡೆತ ಬೀಳುತ್ತಿರುವುದು ಸ್ವಾಗತಾರ್ಹ ವಿಷಯವೇ. ಮೊನ್ನೆ ಮಂಡ್ಯ, ಇವತ್ತು ಕೊಳ್ಳೇಗಾಲ... ನಾಳೆ ಇನ್ನೊಂದು...

● ಚಕ್ರಮಾಳಿಗೆ

ಅರುಣ್ ಜೋಳದಕೂಡ್ಲಿಗಿ





ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ 'ಬಯಲು ಸಾಹಿತ್ಯ ವೇದಿಕೆ' ಎಂಬ ಒಂದು ಸಂಘಟನೆಯಿತ್ತು. ಅದೊಂದು ತರಹ ನಮ್ಮ ಹಿರಿಯ ತಲೆಮಾರಿನ ಲೇಖಕರು ಕಟ್ಟಿಕೊಂಡಿದ್ದ 'ಗೆಳೆಯರ ಗುಂಪ'ನ್ನು ಹೋಲುವಂತಹುದು. ಅಲ್ಲಿ ಕೆಲವು ಯುವ ಲೇಖಕರು ವರ್ಷಕ್ಕೊಮ್ಮೆಯಾದರೂ ಕಲೆತು, ಯಾರಾದರೊಬ್ಬ ಹಿರಿಯ ಲೇಖಕರನ್ನು ಮುಂದಿಟ್ಟುಕೊಂಡು, ತಮ್ಮ ಬರೆಹದ ಸುಖದುಃಖಗಳನ್ನು ಹಂಚಿಕೊಳ್ಳುತ್ತಿದ್ದರು. ಈ ಸಾಹಿತ್ಯ ವೇದಿಕೆಯಿಂದ ಅನೇಕ ಜೀವಪರ ಹೊಮ್ಮಿದರು. ಅವರು ವೇದಿಕೆಯಿಂದಲೇ ಹೊರಹೊಮ್ಮಿದವರು ಎಂಬುದಕ್ಕಿಂತ ವೇದಿಕೆಯಲ್ಲಿ ಅವರು ತಮ್ಮನ್ನು ತಾವು ಮಸೆದುಕೊಂಡು ಸ್ಪಷ್ಟತೆ ಪಡೆದುಕೊಂಡರು ಎನ್ನುವುದೇ ಹೆಚ್ಚು ಸರಿ.

ಆದರೆ ಅಲ್ಲಿಂದ ಎಷ್ಟು ಲೇಖಕರು ರೂಪುಗೊಂಡರು ಎಂಬುದಕ್ಕಿಂತ ಅಲ್ಲಿ ಸೇರುತ್ತಿದ್ದ ಎಷ್ಟು ಲೇಖಕಲೇಖಕಿಯರು ಪರಸ್ಪರ ವರಿಸಿ ಬಾಳಸಂಗಾತಿಗಳಾದರು ಎಂಬ ಬಗ್ಗೆ ಅದರ ಟೀಕಾಕಾರರು ಲೆಕ್ಕ ಇಟ್ಟಿರುವುದುಂಟು. ಈ ವೇದಿಕೆಯ ಗುಪ್ತ ಅಜೆಂಡಾವೇ ಲಗ್ನದ್ದಾಗಿದ್ದು, ಸೂಕ್ತ ಸಂಗಾತಿಗಳು ಸಿಕ್ಕಬಳಿಕ ಬಯಲು ಸಾಹಿತ್ಯ ವೇದಿಕೆ ಬಯಲಾಯಿತು ಎಂದು ಅವರು ಆಪಾದನೆ ಮಾಡುವುದುಂಟು.

ಹತ್ತು ವರ್ಷಗಳ ಬಳಿಕ ನೋಡುವಾಗ, ಬೆಂಗಳೂರಿನಾಚೆ ಸ್ಥಳೀಯ ಮಟ್ಟದಲ್ಲಿದ್ದ ಇಂಥ ಲೇಖಕರ ಗುಂಪುಗಳು, ಬರೆಹದ ಗುಟ್ಟುಗಳನ್ನೊ ಸಮಸ್ಯೆಗಳನ್ನೊ ಹಂಚಿಕೊಂಡಿದ್ದಕ್ಕಿಂತ, ನಮ್ಮ ಸುತ್ತಣ ಸಮಾಜದ ಬಗ್ಗೆ ವಿಮರ್ಶಾತ್ಮಕವಾದ ಜಾತ್ಯತೀತವಾದ ಧೋರಣೆಯನ್ನು ರೂಪಿಸಿಕೊಂಡವು ಎಂಬುದೇ ನನಗೆ ಮುಖ್ಯವಾಗಿ ಕಾಣುತ್ತದೆ. ಅರುಣ್ ಈ ವೇದಿಕೆಯಲ್ಲಿ ಸಕ್ರಿಯವಾಗಿದ್ದ ಲೇಖಕರಲ್ಲಿ ಒಬ್ಬರು.

ಯುವ ಲೇಖಕಿಯರ ವಿಳಾಸ ಮತ್ತು ಸೆಲ್ ನಂಬರ್ ಬೇಕಾದರೆ ಅರುಣ್‌ಗೆ ಕೇಳಬೇಕು ಎಂಬ ಖ್ಯಾತಿಯನ್ನು ಗೆಳೆಯರಲ್ಲಿ ಗಳಿಸಿರುವ ಅರುಣ್, ಕುಂವೀಯವರ ಕೊಟ್ಟೂರು ಸೀಮೆಯವರು. ಕೂಡ್ಲಿಗಿ ತಾಲೂಕಿನ ಪುಟ್ಟಹಳ್ಳಿ ಜೋಳದ ಕೂಡ್ಲಿಗಿಯವರು. ಬೇಸಾಯದ ಮನೆಯವರು. ಮೂಲತಃ ಕವಿಯಾಗಿರುವ ಅರುಣ್, ಕೆಲವು ಅತ್ಯುತ್ತಮ ಕವಿತೆಗಳನ್ನು ಬರೆದಿರುವವರು. ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದ ಎಂಎ ಪದವಿ ಪಡೆದಿದ್ದು, ಕರ್ನಾಟಕದಲ್ಲಿ ಈತನಕ ನಡೆದಿರುವ ಜಾನಪದ ಅಧ್ಯಯನಗಳನ್ನು ತಾತ್ವಿಕವಾಗಿ ವಿಶ್ಲೇಷಣೆ ಮಾಡುವಂತಹ ಪಿ.ಎಚ್‌ಡಿ., ಸಂಶೋಧನೆಯನ್ನು ಮುಗಿಸಿರುವರು. ಸದ್ಯ ಉದ್ಯೋಗದ ತಲಾಶಿನಲ್ಲಿರುವರು. ಈತನಕ ಅರುಣ್ ಎರಡು ಪುಸ್ತಕಗಳನ್ನು ಹೊರತಂದಿದ್ದಾರೆ. ಒಂದು-'ನೆರಳು ಮಾತನಾಡುವ ಹೊತ್ತು' ಎಂಬ ಕವನ ಸಂಕಲನ. ಇನ್ನೊಂದು- 'ಸೊಂಡೂರು ಭೂ ಹೋರಾಟ' ಎಂಬ ಸಂಶೋಧನ ಕೃತಿ. ಅನೇಕ ಪತ್ರಿಕಾಬರೆಹಗಳನ್ನೂ ಸಣ್ಣಕತೆಗಳನ್ನೂ ಬಿಡಿಬಿಡಿಯಾಗಿ ಪ್ರಕಟಿಸಿರುವ ಅರುಣ್, ಅವಕ್ಕೆ ವಿಶ್ವವಿದ್ಯಾಲಯ ಮತ್ತು ರಾಜ್ಯಮಟ್ಟದ ಅನೇಕ ಪುರಸ್ಕಾರಗಳನ್ನೂ ಪಡೆದಿದ್ದಾರೆ. ತಮ್ಮ ಕವಿತೆಗಳಿಗೆ ಪ್ರಜಾವಾಣಿ ಕಾವ್ಯಸ್ಪರ್ಧೆಯಲ್ಲಿ ಎರಡು ಬಾರಿ ಪುರಸ್ಕಾರವನ್ನೂ ದೊರಕಿಸಿಕೊಂಡಿದ್ದಾರೆ.

ಹುಮ್ಮಸ್ಸು, ಜೀವಂತಿಕೆ ಪುಟಿಯುವ ಅರುಣ್, ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಸ್ಥಳೀಯ ಸಮಸ್ಯೆಗಳನ್ನು ಬರೆಯುತ್ತ ಲೇಖಕರಾಗಿ ರೂಪುಗೊಂಡವರು. ನಮ್ಮ ಗ್ರಾಮ ಬದುಕಿನಲ್ಲಿರುವ ಬಾಳಿನ ಹೋರಾಟವನ್ನೂ, ಮಾನವ ಪ್ರೀತಿಯನ್ನೂ ಸಣ್ಣತನ ಮತ್ತು ಕೊಳಕನ್ನೂ ಬರೆಹದಲ್ಲಿ ಹಿಡಿಸಿದವರು. ಅವರ ಬರೆಹದಲ್ಲಿ ಪ್ರೀತಿಗಾಗಿ ಹಾತೊರೆಯುವ ಜೀವವೊಂದರ ತುಡಿತಗಳಿವೆ. ಅದರಲ್ಲೂ ಅವರ ಪ್ರೇಮಪದ್ಯಗಳು ಬಹಳ ತೀವ್ರವಾಗಿವೆ. ಹೀಗೆ ಏಕಕಾಲಕ್ಕೆ ಆರ್ದ್ರವಾದ ಪ್ರೇಮಪ್ರೀತಿಯನ್ನೂ ಸಾಮಾಜಿಕ ರಾಜಕೀಯ ವಿದ್ಯಮಾನಗಳ ಬಗ್ಗೆ ನಿಷ್ಠುರವಾದ ನಿಲುವನ್ನೂ ಒಳಗೊಂಡಿರುವುದು ಹೊಸತಲೆಮಾರಿನ ಬಹುತೇಕ ಲೇಖಕರ ಗುಣವಾಗಿದೆ. ಇವರ ಜತೆಗೆ ಹೊರಜಗತ್ತಿನ ಬಗ್ಗೆ ಕಾಳಜಿಯಿಲ್ಲದ, ನಿರಾಳವಾದ ಸ್ಥಿತಿಯಲ್ಲಿ ಒಂದು ಅಂತರ್ಮುಖಿ ಜಗತ್ತನ್ನು ಕಟ್ಟಿಕೊಳ್ಳುವ ಲೇಖಕರೂ ಇದ್ದಾರೆ. ಅವರಲ್ಲಿ 'ರಾಜಕೀಯ' ಎನ್ನಲಾಗುವ ವಿದ್ಯಮಾನಗಳ ಬಗ್ಗೆ ಒಂದು ಬಗೆಯ ಕೋಮಲ ಹಿಂಜರಿಕೆ, ನಿರ್ಲಿಪ್ತತೆ ಅಥವಾ ಅತಿ ಹುಶಾರುತನ ಇವೆ. ಲಹರಿ ರೂಪದಲ್ಲಿ ಮನದೊಳಗಿನ ಹೂಹಗುರಭಾವಗಳಿಗೆ ರೂಪಕೊಡುವ ಕಲಾತ್ಮಕತೆ ಅವರಿಗೆ ಪ್ರಿಯ. ಬರೆಹದ ಈ ಮನೋಧರ್ಮವನ್ನು ಕೆಲವು ಪತ್ರಿಕೆಗಳು ಅಥವಾ ಲೇಖಕರು ಮುನ್ನಿಂತು ಓರಿಯಂಟ್ ಮಾಡಿರುವರು. ಸಾಮಾಜಿಕವಾಗಿ ಎಲ್ಲವನ್ನೂ ಎದುರಾಳಿ ಪರಿಕಲ್ಪನೆಯಲ್ಲೇ ಮಣಿಸಿ ನೋಡುವ ಆಕ್ರೋಶದಲ್ಲಿ ಹೂಂಕರಿಸುವ ಮನೋಧರ್ಮದಂತೆ, ಈ ಬಗೆಯ ವರ್ತಮಾನದ ದರ್ದಿಲ್ಲದ ನಿರಾಳತೆಯ ಮನೋಧರ್ಮ ಕೂಡ ಸಾಹಿತ್ಯದಲ್ಲಿ ಅನೇಕ ಮಿತಿಗಳಿಗೆ ಕಾರಣವಾಗಿದೆ.

ಆದರೆ ದಿಗ್ಭ್ರಮೆ ಮೂಡಿಸುವಂತಹ ವಿದ್ಯಮಾನಗಳು ಜರುಗುವ, ದಾರಿದ್ರ್ಯ ಮತ್ತು ಒಂದೇ ಕಡೆ ಗುಡ್ಡೆಬಿದ್ದಿರುವ ಸಂಪತ್ತುಗಳ ಎರಡು ಅತಿಗಳಿರುವ ಬಳ್ಳಾರಿ ಸೀಮೆಯಲ್ಲಿ, ಇಲ್ಲಿನ ಯಾವುದೇ ಸೂಕ್ಷ್ಮಮನಸ್ಸಿನ ಲೇಖಕರಲ್ಲಿ ಸಹಜವಾಗಿ ಇರುವಂತೆ, ಅರುಣ್ ಬರೆಹದಲ್ಲೂ ತಲ್ಲಣಗಳಿವೆ. ಇಲ್ಲಿನ ಗಣಿಗಾರಿಕೆ, ಜಾತಿ ಮತ್ತು ರೊಕ್ಕದ ರಾಜಕಾರಣವು ಸಾಮಾನ್ಯ ಎಂದು ನಾವು ಕರೆಯುವ ಜನರಲ್ಲೂ ನಿರ್ಮಿಸಿರುವ ಮನೋಧರ್ಮದ ಬಗ್ಗೆ ಸೋಜಿಗದ ಒಳನೋಟಗಳು ಅವರಲ್ಲಿವೆ. ಇದರ ಸುಳಿವು ಅವರ ಆರಂಭದ ಪತ್ರಿಕಾ ಬರೆಹಗಳಲ್ಲಿಯೇ ಪ್ರಕಟವಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರ ಕಷ್ಟದ ಮೇಲೆ ಅವರು ಬರೆದ ಪತ್ರಿಕಾ ಲೇಖನ, ಸರ್ಕಾರದ ಇಲಾಖೆ ಎಚ್ಚೆತ್ತುಕೊಂಡು ತನ್ನ ದೋಷವನ್ನು ತಿದ್ದಿಕೊಳ್ಳುವಂತೆ ಮಾಡಿತು. ಇದು ಬರೆಹದ ಸಣ್ಣಶಕ್ತಿಯನ್ನು ತನಗೆ ಮನವರಿಕೆ ಮಾಡಿತು ಎಂದು ಒಂದೆಡೆ ಅವರು ಹೇಳಿಕೊಂಡೂ ಇದ್ದಾರೆ. ಆದರೆ ಸಮಸ್ಯೆಯನ್ನು ಬಗೆಹರಿಸುವ ಸರಳ ಆಕ್ಟಿವಿಸಂನ ಆಚೆಹೋಗಿ, ಚಿಂತನೆ ನಡೆಸುವ ದಿಸೆಯಲ್ಲಿ ಅವರ ಬರೆಹಗಳು ಚಲಿಸಿದವು. ಕೆಲವೊಮ್ಮೆ ಅವರ ಪತ್ರಿಕಾ ಬರೆಹಗಳಲ್ಲಿ ಛೇಡಿಸುವಿಕೆಯ ತಮಾಶೆಯ ಗುಣದಿಂದ, ಸ್ತ್ರೀಸ್ವಾತಂತ್ರ್ಯದ ಬಗ್ಗೆ ಲಘುವಾದ ರೀತಿಯ ಧೋರಣೆಯ ಬರೆಹಗಳೂ ಬಂದಿರುವುದಿ[...] ಇದರಿಂದ ಸಹಲೇಖಕಿಯರು ಅದರಿಗೆ ವಾಗ್ಬಂಧ[...] ವಿಧಿಸಿರುವುದೂ ಉಂಟು. ಮುಖ್ಯವೆಂದರೆ, ತಂತಮ[...] ಹಳ್ಳಿಗಳಿಂದ ನಗರದ ನಾಗರಿಕ ಲೋಕಕ್ಕೆ ವಿಸ್ಮಯದಿಂದ[...] ಮತ್ತು ರೋಚಕತೆ ಉಂಟುಮಾಡುವ ವಿಶಿಷ್ಟ[...] ಆಚರಣೆಗಳ ಬಗ್ಗೆ ಬರೆದ ಆಮೀಷವನ್ನು ಅರು[...] ಬಿಟ್ಟು ಕೊಟ್ಟಿರುವುದು. ಬದಲಿಗೆ ಅಲ್ಲಿನ ಜೀವಸ[...] ದುಗುಡ ಮತ್ತು ಬೈಸತ್ವಶೀಲತೆಯನ್ನು ತೋರುವ ವಿಶ್ಲೇಷ[...] ಬರೆಹಗಳನ್ನು ಮಾಡುತ್ತಿರುವುದು.

ನಮ್ಮ ಬಹುತೇಕ ಗ್ರಾಮೀಣ ಮೂಲದ ಲೇಖಕರ[...] ಇರುವಂತೆ, ಅಸಮಾನತೆ ಬಗ್ಗೆ ವ್ಯಗ್ರತೆ, ಕೋಮುವಾದದ[...] ಬಗ್ಗೆ ಖಚಿತವಾದ ನಿಲುವು, ದುಡಿವ ಸಮುದಾಯದ[...] ಸೆಣಸುಬಾಳಿನ ಬಗ್ಗೆ ಪ್ರೀತಿ, ಎಲ್ಲವನ್ನೂ ಅರುಣ್ ಬರೆಹ[...] ಒಳಗೊಂಡಿದೆ. ನಾಡಿನ ಚಳವಳಿ ಮತ್ತು ಹೋರಾಟಗಳ[...] ಬಗ್ಗೆ ಆಳದಲ್ಲಿ ಸೆಳೆತವುಳ್ಳ ಅರುಣ್ ಕೊಂಚ ಭಾವುಕ[...] ಲೇಖಕ. ಅದು ಕೆಲವೊಮ್ಮೆ ತೊಡಕೂ ಆಗಿದೆ. ಬದುಕಿ[...] ನಲ್ಲಿರುವ ಜೀವಂತಿಕೆ ಹಾಸ್ಯಗಳನ್ನು ಸೂಕ್ಷ್ಮ?ವಾಗಿ ಗ್ರಹಿಸುವ ಇವರ ಲವಲವಿಕೆ ಪ್ರಕಟವಾಗಿರುವ ಬರಿ[...] ಕತೆಗಳಲ್ಲಿ ಕಾಣುತ್ತದೆ. ಇಲ್ಲಿ ತುಂಬಿರುವ ವಿನೋದ[...] ಪ್ರಜ್ಞೆ ಆಪ್ತವಾಗಿದೆ. ಆದರೆ ಇದು ದೈತ್ಯಲೇಖಕ ಕುಂವಿ[...] ಯವರ ಪ್ರಭಾವದಿಂದ ತಪ್ಪಿಸಿಕೊಂಡು ತಮ್ಮದೇ ಆದ[...] ನುಡಿಗಟ್ಟನ್ನು ಕಂಡುಕೊಳ್ಳುವುದರ ಸವಾಲಿರುವುದನ್ನು ಸಹ ಈ ಲೇಖಕನಿಗೆ ಸೂಚಿಸುತ್ತದೆ. ಅತಿ ಗಂಭೀರತೆಯು[...] ಬರೆಹಕ್ಕೆ ಸಹಜವಾಗಿ ಇರಬಹುದಾದ ವಿನೋದ[...] ಪ್ರಜ್ಞೆಯನ್ನು ಕೊಂದು, ಜೋಭದ್ರ ಮುಖವನ್ನು ಜೋಡಿಸುತ್ತದೆ. ಬರಿಯ ವಿನೋದವು ವರ್ತಮಾನದಲ್ಲಿ ಏನೂ ಸಮಸ್ಯೆಯಿಲ್ಲ ಎಂಬಂತೆ ಕೇವಲ ಸಂಭ್ರಮದ ಬೇಹೊಣೆ ಮನೋಧರ್ಮವನ್ನು ಒಳಗೊಳ್ಳುತ್ತದೆ. ಈ ಎರಡು ದಡದಗಳಲ್ಲಿ ನಮ್ಮ ಕೆಲವು ಹೊಸಬರೆಹಗಾರರು ತುಯ್ಯಲಾಡುವುದುಂಟು.

ಅರುಣ್ ಅವರಲ್ಲಿ ಮೊದಲಿದ್ದ ಭಾವುಕ ಪ್ರಧಾನತೆ ಕಡಿಮೆಗೊಂಡು ಚಿಂತನಶೀಲತೆ ಒದಗುತ್ತಿದೆ. ಇದಕ್ಕೆ ಕಾರಣ, ದೊಡ್ಡಪ್ರಮಾಣದಲ್ಲಿ ಅವರು ಬರೆದ 'ಸೊಂಡೂರು ಭೂಹೋರಾಟ' ಕೃತಿಯೊ, ಅವರು ಸಂಶೋಧನ ಚಟುವಟಿಕೆಯೊ ತಿಳಿಯದು. ಕವಿತೆ ಅವರ ಅಸ್ಮಿತೆಯ ಪ್ರಕಾರವಾಗಿದ್ದರೂ, ಯಾವ ಪ್ರಕಾರದಲ್ಲಿ ತಮ್ಮ ಸೃಜನಶೀಲತೆಯನ್ನು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂಬ ಒಂದು ತೆರೆದ ಸ್ಥಿತಿಯಲ್ಲಿ ಅವರಿದ್ದಾರೆ ಅನಿಸುತ್ತದೆ. ಜೀವಪ್ರೀತಿಯೂ ವಿಶಿಷ್ಟ ಅನುಭವ ಲೋಕವೂ ಹದುಳದಾಯಕ ಮನಸ್ಸೂ ಇರುವ ಅರುಣ್, ಅವನ್ನೆಲ್ಲ ತಮ್ಮ ಬರೆಹದಲ್ಲಿ ಹೇಗೆ ಪ್ರಕಟಿಸುತ್ತಾರೊ ಕಾಯ್ದು ನೋಡಬೇಕಿದೆ. ■

▶▶▶4

ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ ಎಂಬ ಸಂಜ್ಞಾಜ್ಯೋತಿ

ಇಲ್ಲದಿರುವಾಗ ಬಯಲುಸೀಮೆಗಳು ಯಾತಕ್ಕೆ? ಇದೆಲ್ಲವನ್ನು ನೋಡಿದರೆ ಬ್ರೇಕ್ ಇಲ್ಲದ ಬಸ್ಸಿನಲ್ಲಿ ನಾವೆಲ್ಲ ಕುಳಿತು ಪ್ರಪಾತದ ತಪ್ಪಲಿಗೆ ರಭಸದಿಂದ ಚಲಿಸುತ್ತಿದ್ದರೂ ಯಾವ ಹಾಡನ್ನು ಹಾಡಬೇಕೆಂಬುದರ ಬಗ್ಗೆ ಜಗಳವಾಡುತ್ತಿದ್ದೇವೆ ಎನಿಸುತ್ತದೆ.

ಪ್ರಾಯಶಃ "ಜೈ ಹೋ" ಹಾಡನ್ನು?

* * * * *

ಅದೇನೇ ಇದ್ದರೂ 2009 ರ ಚುನಾವಣಾ ಫಲಿತಾಂಶ 'ಪ್ರಗತಿ' ಪ್ರಾಜೆಕ್ಟ್ ಅನ್ನು ಎತ್ತಿಹಿಡಿದಿದ್ದರೂ 'ರಾಷ್ಟ್ರೀಯತೆ' ಯೋಜನೆಯನ್ನಂತೂ ಬದಿಗೊತ್ತಿಲ್ಲ. ಫಿಲಿಬಿಟ್‌ನ ಸಾರ್ವಜನಿಕ ಸಭೆಯಲ್ಲಿ ಕೋಮು ದ್ವೇಷ ಭಾಷಣವನ್ನು ಮಾಡಿದ ವರುಣ್ ಗಾಂಧಿ ನರೇಂದ್ರ ಮೋದಿಯನ್ನೇ ಮಂದಗಾಮಿಯಾಗಿ ಕಾಣಿಸಿದ್ದಾನೆ.

ವರುಣ್ ಗಾಂಧಿ ಓರ್ವ ಆಧುನಿಕ ರಾಜಕಾರಣಿ. ಕಾರ್ಪೊರೇಟ್ ಕಂಪನಿಗಳಿಗೆ ಹೇಗೆ ಒಂದು ಸಮೂಹ ಮಾರುಕಟ್ಟೆಯ ಅವಶ್ಯಕತೆ ಇದೆಯೋ ಹಾಗೆಯೇ ಓರ್ವ ರಾಜಕಾರಣಿಗೆ ಒಂದು ವೋಟ್‌ಬ್ಯಾಂಕಿನ ಅಗತ್ಯತೆ ಇರುತ್ತದೆ. ಎರಡಕ್ಕೂ ಸಾಮೂಹಿಕ ಮಾಧ್ಯಮಗಳ ನೆರವು ಬೇಕಿರುತ್ತದೆ. ಕಾರ್ಪೊರೇಟ್‌ಗಳು ಆ ನೆರವನ್ನು ಖರೀದಿಸುತ್ತವೆ. ಆದರೆ ರಾಜಕಾರಣಿ ಅದನ್ನು ಗಳಿಸಬೇಕಿರುತ್ತದೆ. ಅದನ್ನು ಕೆಲವರು ಕಷ್ಟಪಟ್ಟು ಗಳಿಸುತ್ತಾರೆ, ಇತರರು ಅಪಾಯಕಾರಿ ಸ್ಟಂಟ್‌ಗಳ ಮೂಲಕ ಪಡೆಯುತ್ತಾರೆ. ವರುಣ್‌ನ ವಿಷಪೂರಿತ ಭಾಷಣ ಆತನನ್ನು ರಾಷ್ಟ್ರೀಯ ಸುದ್ದಿಯನ್ನಾಗಿಸಿತು. ಜೈಲಿನಲ್ಲಿ ಆತ ಕಳೆದ ಕೆಲ ಸಮಯ ಆತನನ್ನು ಹುತಾತ್ಮನನ್ನಾಗಿಸಿತು. ಸಾರ್ವಜನಿಕವಾಗಿ (ಮಾಧ್ಯಮಗಳ ಬಳಕೆಗೆ) ಆತನನ್ನು [illegible] ನಾಯಕರು ಸೂಕ್ಷ್ಮವಾಗಿ ಛೇಡಿಸಿದರಾದರೂ ನರೇಂದ್ರ ಮೋದಿಯಂತೆಯೇ ಆತನನ್ನು ಬಿಜೆಪಿಯ ಸ್ಟಾರ್ ಪ್ರಚಾರಕನೆಂಬಂತೆ ವಿಶೇಷ ವಿಮಾನದಲ್ಲಿ ಎಲ್ಲೆಡೆ [illegible].

ವರುಣ್ ಗಾಂಧಿ ಭಾರಿ ಪ್ರಮಾಣದ ಅಂತರದಿಂದ ಗೆದ್ದ ಇಂತಹ ಸ್ಪಷ್ಟ ಗೆಲುವು ಮತ್ತು ಇತರೆಡೆ ದೊರೆತ ಸ್ಪಷ್ಟ ಸೋಲುಗಳಿಂದ ಬಿಜೆಪಿ ಎಂತಹ ಪಾಠವನ್ನು ಕಲಿಯಬಹುದು ಎಂದು ಯೋಚಿಸಿದರೆ ಚಿಂತೆಯಾಗುತ್ತದೆ. ಅದು ಗೆದ್ದ ಹಲವಾರು ಕ್ಷೇತ್ರಗಳಲ್ಲಿ ವಿಷಕಾರಿ ಭಾಷಣ (ಮತ್ತು ಕೃತ್ಯ) ಅದರ ನೆರವಿಗೆ ಬಂದಿದೆ. ಇವತ್ತಿಗೂ ಎರಡನೆ ಅತಿದೊಡ್ಡ ರಾಜಕೀಯ ಪಕ್ಷವಾಗಿರುವ ಬಿಜೆಪಿಗೆ ದೇಶದೆಲ್ಲೆಡೆ ಅಸ್ತಿತ್ವವಿದೆ ಮತ್ತು ಕಾಂಗ್ರೆಸ್‌ಗೆ ನಿಜವಾದ ಸವಾಲಾಗಿದೆ. ಅದು ಖಂಡಿತವಾಗಿಯೂ ಮತ್ತೊಂದು ದಿನ ಯುದ್ಧ ಸಾರುತ್ತದೆ. ಆದರೆ ಆಗ ಅದು ಬೆಂಕಿಯನ್ನು ಹಬ್ಬಿಸುತ್ತದೆಯೋ ಅಥವಾ ಕಡಿಮೆ ಮಾಡುತ್ತದೆಯೋ ಎಂಬುದೇ ಇಲ್ಲಿನ ಯಕ್ಷಪ್ರಶ್ನೆ.

ಭಾರತೀಯ ಪ್ರಜಾಪ್ರಭುತ್ವದ ಸಂಸ್ಥೆಗಳಾದ ನ್ಯಾಯಾಂಗ, ಪೊಲೀಸ್, 'ಮುಕ್ತ' ಮಾಧ್ಯಮ ಮತ್ತು ಚುನಾವಣೆಗಳು ಇಲ್ಲಿನ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ತಿದ್ದುವುದರ ಬದಲಾಗಿ ಅದರ ವಿರುದ್ಧವಾಗಿಯೇ ವರ್ತಿಸುತ್ತಿವೆ. ಅವೆಲ್ಲವೂ 'ರಾಷ್ಟ್ರೀಯತೆ' ಮತ್ತು 'ಅಭಿವೃದ್ಧಿ'ಯ ಹಿತಾಸಕ್ತಿಗಳನ್ನು ಬೆಳೆಸಲು ಗೌಪ್ಯವಾಗಿ ಪರಸ್ಪರ ಸಹಕರಿಸುತ್ತಿವೆ. ಆ ಪ್ರಕ್ರಿಯೆಯಲ್ಲಿ ಅವು ಅದೆಷ್ಟು ಗೊಂದಲ ಮತ್ತು ಅಪಶ್ರುತಿಯನ್ನು ಸೃಷ್ಟಿಸುತ್ತವೆಂದರೆ ಎಚ್ಚರಿಕೆ ನೀಡುವ ದನಿಗಳು ಆ ಗದ್ದಲದ ಭಾಗವಾಗಿ ಹೋಗುತ್ತದೆ. ಹಾಗಾದಾಗ ಭಾರತ ಅದೆಷ್ಟು ಸಹಿಷ್ಣು ಒಡ್ಡೊಡ್ಡಾಗಿ ಚಲಿಸುವ, ವರ್ಣರಂಜಿತ ಮತ್ತು ಅಸ್ತವ್ಯಸ್ತ ಪ್ರಜಾಪ್ರಭುತ್ವ ಎಂಬ ಕಲ್ಪನೆಯನ್ನು ವೃದ್ಧಿಸುತ್ತಿದೆ. ಆದರೆ ಇಲ್ಲಿನ ಅಸ್ತವ್ಯಸ್ತತೆ ನಿಜವಾದದ್ದು. ಹಾಗೆಯೇ ಇಲ್ಲಿನ ಒಮ್ಮತ ಕೂಡ.

ಅಂದಹಾಗೆ, ಕಾಶ್ಮೀರದ ವಿಷಯಕ್ಕೆ ಬಂದಾಗ ಮಾತ್ರ ಭಾರತದ ವ್ಯವಸ್ಥೆಯ ಪ್ರತಿ ಅಂಗಗಳ ನಡುವೆ-ಮಾಧ್ಯಮ, ಆಡಳಿತಾಂಗ, ಬುದ್ಧಿಜೀವಿಗಳು ಮತ್ತು ಬಾಲಿವುಡ್ ಕೂಡ ಸೇರಿದಂತೆ-ಒಮ್ಮತವಿದೆ.

ಕಳೆದ 20 ವರ್ಷಗಳಿಂದ ಕಾಶ್ಮೀರದ ಕಣಿವೆಯಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಈಗಾಗಲೇ 70,000 ಜನ ಸತ್ತಿದ್ದಾರೆ. ಹತ್ತಾರು ಸಾವಿರ ಜನರಿಗೆ ಹಿಂಸೆ ನೀಡಲಾಗಿದೆ. ಸಾವಿರಾರು ಜನ 'ನಾಪತ್ತೆ'ಯಾಗಿದ್ದಾರೆ. ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದಿವೆ, ಸಾವಿರಾರು ಮಹಿಳೆಯರು ವಿಧವೆಯರಾಗಿದ್ದಾರೆ. ಜಗತ್ತಿನಲ್ಲೇ ಅತಿಹೆಚ್ಚು ಸೈನ್ಯೀಕರಣಗೊಂಡಿರುವ ಪ್ರದೇಶ ಕಾಶ್ಮೀರ. ತಾನೊಂದು ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುವ ದೇಶ ಇಂತಹ ಸೈನ್ಯೀಕರಣವನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ? ಉತ್ತರ: ಅಲ್ಲಿ ಚುನಾವಣೆಗಳನ್ನು ನಡೆಸುವ ಮೂಲಕ!

ಮೊನ್ನೆ ಕಾಶ್ಮೀರದಲ್ಲೂ ಚುನಾವಣೆ ಎಂಬ ಪ್ರಕ್ರಿಯೆ ನಡೆಯಿತು. ಕರ್ಫ್ಯೂ, ಸಾಮೂಹಿಕ ಬಂಧನಗಳು, ಸೈನ್ಯದ ಉಪಸ್ಥಿತಿಯ ನಡುವೆ ನಡೆದ ಈ ಚುನಾವಣೆಗಳನ್ನು ಯಾರೂ ವಿಮರ್ಶಿಸುವ ಗೋಜಿಗೆ ಹೋಗಲಿಲ್ಲ. ಫಲಿತಾಂಶ ಪ್ರಕಟಗೊಂಡ ಕೂಡಲೇ ಸರ್ಕಾರ ಮತ್ತು ಮುಖ್ಯವಾಹಿನಿಯ ಮಾಧ್ಯಮಗಳು ಮತ್ತೆ ಭಾರತ ಗೆದ್ದಿತು ಎಂದವು. ಅದಾದ ಕೆಲವಾರಗಳಲ್ಲೇ ಅಲ್ಲಿನ ಸ್ಥಿತಿ ಯಥಾಸ್ಥಿತಿಗೆ ಮರಳಿತು. ಸ್ವಾತಂತ್ರ್ಯಕ್ಕಾಗಿ ಪ್ರತಿಭಟನೆಗಳು ಮತ್ತು ರಕ್ಷಣಾ ಪಡೆಗಳಿಂದ ಕ್ಷಿಪ್ರಕೊಲೆಗಳು ಮತ್ತೆ ಶುರುವಾದವು. ಅದನ್ನೆಲ್ಲ ಕಂಡು ಚುನಾವಣೆಗಳಿಗೂ, ಪ್ರಜಾಪ್ರಭುತ್ವಕ್ಕೂ ಸಂಬಂಧವಿದೆಯೇ ಎನಿಸುತ್ತದೆ.

ನಮ್ಮ ಕಾಲದ ಹುಚ್ಚುತನಕ್ಕೆ ಜಗತ್ತಿನ ಅತಿ ಎತ್ತರದ ಯುದ್ಧ ಭೂಮಿಯಾದ ಸಿಯಾಚಿನ್ ಹಿಮರಾಶಿ ಒಂದು ಸೂಕ್ತ ರೂಪಕವಾಗಬಲ್ಲದು. ಭಾರತ ಮತ್ತು ಪಾಕಿಸ್ತಾನದ ಸಾವಿರಾರು ಸೈನಿಕರನ್ನು 40^0 ಸೆಲ್ಸಿಯಸ್‌ನಷ್ಟು ತಂಡಿಯಾಗಿರುವ ಆ ಪ್ರದೇಶಕ್ಕೆ ನಿಯೋಜಿಸಲಾಗಿದೆ. ಈಗ ಆ ಹಿಮಧಾರೆಯೇ ಕಸದ ರಾಶಿಯಂತಾಗಿದೆ. ಸಾವಿರಾರು ಫಿರಂಗಿ ಶೆಲ್‌ಗಳು, ಖಾಲಿ ಇಂಧನ ಡ್ರಮ್‌ಗಳು, ಹಿಮಕೊಡಲಿಗಳು, ಹಳೆ ಬೂಟ್‌ಗಳು, ಟೆಂಟ್‌ಗಳು, ಯುದ್ಧದಲ್ಲಿ ತೊಡಗಿರುವ ಸಾವಿರಾರು ಮನುಷ್ಯರು ಬಿಸಾಡಿರುವ ವಸ್ತುಗಳು ಅಲ್ಲೆಲ್ಲ ಹರಡಿವೆ. ಅಲ್ಲಿನ ತಂಡಿಯಿಂದಾಗಿ ಅವೆಲ್ಲ ಕೊಳೆಯದೇ ಹಾಗೆ ಇವೆ, ಮಾನವನ ಮೂರ್ಖತನಕ್ಕೆ ನಿಷ್ಕಳಂಕ ಸ್ಮಾರಕದಂತೆ. ಭಾರತ ಮತ್ತು ಪಾಕಿಸ್ತಾನದ ಸರ್ಕಾರಗಳು ಆ ಎತ್ತರದ ಪ್ರದೇಶದಲ್ಲಿ ನಡೆಸುತ್ತಿರುವ ಯುದ್ಧಕ್ಕೆ ಅಗತ್ಯವಾದ ಸಲಕರಣೆಗಳಿಗೆ ಬಿಲಿಯನ್‌ಗಟ್ಟಲೆ ಡಾಲರ್‌ಗಳನ್ನು ವೆಚ್ಚ ಮಾಡುತ್ತಿರುವಾಗಲೇ ಆ ಹಿಮದ ರಾಶಿ ಕರಗುತ್ತಿದೆ. ಈಗಾಗಲೇ ಅದು ಅರ್ಧದಷ್ಟು ಕರಗಿದೆ. ಅಲ್ಲಿರುವ ಜನರಿಗಿಂತಲೂ ದೂರದಲ್ಲಿ ಜಗತ್ತಿನ ಇನ್ನೊಂದು ತುದಿಯಲ್ಲಿ ನೆಮ್ಮದಿಯ ಜೀವನ ನಡೆಸುತ್ತಿರುವವರೇ ಆ ಕರಗುವಿಕೆಗೆ ಕಾರಣರಾಗಿದ್ದಾರೆ. ಅವರೆಲ್ಲ ಒಳ್ಳೆಯ ಜನ. ಶಾಂತಿ, ವಾಕ್‌ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳಲ್ಲಿ ನಂಬಿಕೆ ಇಟ್ಟಿರುವ ಜನ. ಅವರೆಲ್ಲ ಅಭಿವೃದ್ಧಿ ಹೊಂದಿರುವ ಪ್ರಜಾಪ್ರಭುತ್ವಗಳಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಪ್ರತಿನಿಧಿಸುವ ಸರ್ಕಾರಗಳು ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸದಸ್ಯರಲ್ಲ, ಅವರ ದೇಶಗಳ ಆರ್ಥಿಕತೆ ಅವಲಂಬಿಸಿರುವುದೇ ಭಾರತ ಮತ್ತು ಪಾಕಿಸ್ತಾನದಂತಹ ದೇಶಗಳಿಗೆ ಯುದ್ಧಗಳನ್ನು ಮತ್ತು ಆಯುಧಗಳಿಗೆ ಅಗತ್ಯವಾಗಿರುವ ಶಸ್ತ್ರಾಸ್ತ್ರಗಳನ್ನು ರಫ್ತು ಮಾಡುವ ಉದ್ಯಮವನ್ನು.

* * * * *

ನಾನು 'ಲಿಸನ್ನಿಂಗ್ ಟು ಗ್ರಾಸ್ ಹಾಪ್ಪರ್ಸ್' ಲೇಖನವನ್ನು ಓದುತ್ತಿರುವಾಗ ರಾಕೆಲ್ ಡಿಂಕ್ (ಟರ್ಕಿಯಲ್ಲಿ ಕೊಲ್ಲಲ್ಪಟ್ಟ ಲೇಖಕ ಹ್ರಾಂತ್ ಡಿಂಕ್ ಅವರ ಪತ್ನಿ) ಮೊದಲ ಸಾಲಿನಲ್ಲಿ ಕುಳಿತು ಅಳುತ್ತಿದ್ದರು. ನಾನು ಓದಿ ಮುಗಿಸಿದಾಗ ಆಕೆ ನನ್ನನ್ನು ಅಪ್ಪಿಕೊಂಡು "ನಾವು ಆಶಿಸುತ್ತಲೇ ಇರುತ್ತವೆ. ಯಾಕೆ?" ಎಂದು ಕೇಳಿದರು. "ನಾವು" ಎಂದರಾಕೆ, "ನೀವು" ಅನ್ನಲಿಲ್ಲ.

ಆಗ ನನಗೆ ಫೈಯಜ್ ಅಹಮದ್ ಅವರ ಕವನವೊಂದು ನೆನಪಾಯಿತು:

ಕನಸುಗಳು ಮುರಿದುಬಿದ್ದಿದ್ದರೆ, ಆ ಜಾಗದಲ್ಲಿ ಹಂಬಲವಿರಬೇಕು

ಪುನರ್ಮಿಲನ ಅಸಾಧ್ಯವಾಗಿದ್ದರೆ, ಆ ಜಾಗದಲ್ಲಿ ತವಕವಿರಬೇಕು.

ಪ್ರಾರಂಭದಲ್ಲಿ ಕಾವ್ಯದ ಬಗ್ಗೆ ನಾನು ಹೇಳಿದ್ದು ಯಾಕೆ ಎಂದು ಗೊತ್ತಾಯಿತಾ?

* * * * *

ಸುಮಾರು 8,000 ಪದಗಳಷ್ಟು ಸುದೀರ್ಘವಾಗಿರುವ ಅರುಂಧತಿ ರಾಯ್ ಅವರ ಲೇಖನವನ್ನು ಸ್ಥಳಾಭಾವದಿಂದ ಇಲ್ಲಿ ಎರಡು ಪುಟಗಳಿಗೆ ಸೀಮಿತಗೊಳಿಸಿದ್ದೇನೆ. ಹಾಗೆ ಮಾಡುವಾಗ ಕೆಲ ಕಡೆ ಲೇಖನದ ಲಿಂಕ್‌ಗಳು ತಪ್ಪಿವೆ. ಅದಕ್ಕೆ ನಾನೇ ಹೊಣೆ. ರಾಯ್ ಅವರ ಸಂಪೂರ್ಣ ಲೇಖನವನ್ನು ಓದಬಯಸುವವರು ಅಂತರಜಾಲದಲ್ಲಿ http://www.outlookindia.com/fullprint.asp? choice=1&fodname= 20090713 &fname=Arundhati+ Roy+%28F%29 &sid=1 ಗೆ ಹೋಗಿ ನೋಡಬಹುದು.

● ಗೌರಿ ಲಂಕೇಶ್

ಮೂರ್ರೂಪಾಯಿಗೆ ಅಕ್ಕಿಗೋಧಿ ತಿನ್ನೋರ ಮಾತಾಡಸಕ್ಕಾದತೆ?


ಉಗ್ರಿ ಬರುತ್ತಿದ್ದಂತೆ ಕಾತುರದಿಂದ,
"ಕಾಳಮಾವ, ಕೇಂದ್ರದ ಬಜೆಟ್ ವಿಸಿಯ ...ತ್ಯಾಯ್ತು?" ಎಂದ
"ನನಿಗ್ಯಂಗೊತ್ತಾಗಬೇಕ್ಲ?" ಎಂದ ಕಾಳ ಸೀರ ...ಸೀನದಿಂದ.
"ಮೂರುರೂಪಾಯಿಗೆ ಕೆ.ಜಿ. ಅಕ್ಕಿ ಗೋಧಿ ಕೊಟ್ಟ..."
"ಯಲ್ಲಾರಿಗೂ ಕೊಟ್ಟರೆ?"
"ಯಲ್ಲಾರಿಗೂ ಕೊಡಕ್ಕಾದತೇ? ಯಾರ್‍ಯಾರು ಸೀರ ...ವುರೋ ಅವುರಿಗೆ ಕೊಡ್ತರಂತೆ."
"ಮೂರುಪಾಯಿ ಸೀರ ಆಗ್ತಾಯ್ತು ಕಂಡ್ಯ. ...ರೂಪಾಯಿಗೆ ಕೊಡಬವುದಿತ್ತ" ಎಂದಳು ಜುಮ್ಮಿ.
"ನೀನೇನೆ ಬಡವುರ ವಿರುದ್ಧ ಮಾತಾಡ್ತಿ? ಅಕ್ಕಿ ...ಧಿಯ ಮೂರುಪಾಯಿಗೆ ಕೊಟ್ರೂ ಕೂಡ ಬ್ಯಾಳೆ, ... ರೇಟ ಕೇಳಿದ್ದೀಯಾ? ಇಲ್ಲಿ ಮಿಗೊ ದುಡ್ಡು ...ಲೋಗೇ ಹೋಯ್ತದೆ."
"ಅಂಗಲ್ಲ ಕಂಡ್ಯ. ಮೂರುಪಾಯಿಗೆ ಅಕ್ಕಿ ತಗಂಡು ...ಣ್ಣೀರ ಕೂಲಿಗೆ ಕರಿಯಕ್ಕಾದತ್ಲ? ಮನೆತಕ್ಕೋಗಿ ...ವೆ ನೋಡನೋಗು ಅಂತರೆ. ಅಕ್ಕಿ ತಿನ್ನೋರೆ ...ನ್ನಗಾದ್ರೆ ಇನ್ನ ಗೋದಿನೂ ತಿಂದ್ರೆ ಅವುರ ...ಡ್ಸಕ್ಕಾದತ್ಲ?" ಎಂದಳು ಜುಮ್ಮಿ.
"ಜುಮ್ಮಿ ಹೇಳಿದ್ದು ನಿಜ ಕಂಡ್ಯ. ಇವತ್ತಿನ ದಿವಸದಲ್ಲಿ ... ಮಾಡೋ ಜನವ ಮಾತಾಡ್ಸಕ್ಕಾದತೆ?" ಎಂದ ...ಮಾವ.

ಯ ಲು ಸೀ ಮೆ
ಕಟ್ಟೆಪುರಾಣ
▸▸ ಬಿ. ಚಂದ್ರೇಗೌಡ

"ಮಾತಾಡ್ಸದೋಗ್ಲಿ ಕಣಮಾವ, ನಮ್ಮ ಕ್ಟಟಗೆ ...ಗಿ ಒಂಚೂರು ಗಾರೆ ಮೆತ್ತಪ್ಪ ಅಂತ ಒಂದುಡುಗುನ್ನ ...ಟ್ಟೆ. ಕ್ವಾಳೆನಳ್ಳಿ ಮಂಜ ಅಂತ ಅವುನೆಸರು. ವತ್ತರಿಂದ ...ಗಂಟ ಟೇಪ್ ರಿಕಾಲ್ಡಾಯ್ಕೊಂಡೇ ಕ್ಯಲಸ ಮಾಡಿದ. ... ಮಬೈಲಲ್ಲೇ ಟೇಪ್ ರಿಕಾಲ್ಡ ಮಡಿಕಂಡವುನೆ" ...ಳು ಜುಮ್ಮಿ.
"...ನೋಡು ಮತ್ತೆ, ಇನ್ನಂತಾ ಇವುನಿದ್ದನವುನು" ... ಕಾಳಮಾವ.
"ಅಯ್ಯೋ, ಇವತ್ತಿನ ದಿವಸದಲ್ಲಿ ಕೂಲಿಮಾಡೋರ ...ರೀಗ ನೋಡಕ್ಕಾದತೇ? ಮನೆಲಿ ಟಿ.ವಿ. ಮಡಿಕಂಡು ...ಜೋಬಲ್ಲಿ ಮಬೈಲು ಮಡಿಕಂಡವುರೆ, ಸಿಗರೀಟ್ ..., ಬ್ರಾಂದಿ ಕುಡಿತರೆ. ಇಟೊಂತರ ಜಮೀನಿದ್ದು ...ದೋಟು ತೆಂಗಿನಮರ ಮಡಗಿದ್ರು ಅವುರ ಜೀವನ ... ಮಾಡಕ್ಕಾದತೇ?" ಎಂದ ಸೀರ.
"ಅವುರ ಜೀವನ ಹಿಂದೂ ಮಾಡಲಿಲ್ಲ, ಮುಂದೂ ...ಕ್ಕಾಗದಿಲ್ಲ ಬುಡೋ ಸೀರಮಾವ. ಏನು ಬ್ಯಾಡಪ್ಪ ಅವುರತ್ರ ಇರೋ ಅಂಗಿ ಪ್ಯಾಂಟು ನಿನ್ನತ್ರ ಇದ್ದವೆ? ಅವುರ ಕಟ್ಟರೊ ಗಡಿಯಾರವ ನೀನು ಕಟ್ಟಕ್ಕಾದತೆ? ಹೋಗ್ಲಿ ವಾರಕೊಂದಿನ ಬಾಡತಂದು ತಿಂತರೆ ನೀನು ತಿಂದಿಯಾ?" ಎಂದ ಉಗ್ರಿ.
"ತಿನ್ನೊ ಮಾತಿಗೆ ಬರಬ್ಯಾಡ, ನಾವು ಸರಿಯಾಗೇ ತಿಂದಿದ್ದಿವಿ ಬುಡ್ಡ. ನಮ್ಮಣ್ಣ ಅನ್ನಕೆ ತುಪ್ಪ ಹುಯ್ಯಿಗಳನಲ್ಲಾ ಅದ ನೋಡಿದ್ರೆ ಸಾಕು ನೀನು ಬೇದಿ ಮಾಡಿಕತಿದ್ದೆ" ಎಂದು ಸೀರ ಕಾಳಮಾವನನ್ನು ಹೊಗಳಿದ.
"ನಿಜವೇನೋ ಮಾವ?" ಎಂದಳು ಜುಮ್ಮಿ. ತುಟಿ ಬರಿದ ಕಾಳಮಾವ, "ಮನೆಲಿ ಕರಾವೆ ಅಂಗಿತ್ತಲ್ಲೇ ಆಗ. ಯಮ್ಮೆ ಈದ ಮ್ಯಾಲೆ ಹಸ ಕರ ಹಾಕದು, ಅದಾದ ಮ್ಯಾಲೆ ಇದು, ಇದಾದ ಮ್ಯಾಲೆ ಅದು ಹಿಂಗೆ ಯಾವ ಕಾಲ್ದಲೂ ಕರಾವು ನಿಂತಿದ್ದೇ ಇಲ್ಲ, ನನ್ನ ಮನೆಲಿ. ನಿಮ್ಮತ್ತೆ ಬೈಣ್ಣೆ ಮಾರತಿರಲಿಲ್ಲ, ತುಪ್ಪ ಕಾಸೋಳು, ಹುಯ್ಯಳು. ಬಾಡಿನೆಸಿರಿಗೂ ತುಪ್ಪ ಬುಟಗಂಡೇ ಉಂಡಿದ್ದಿವಿ" ಎಂದ ಕಾಳಮಾವ.
"ಸರಿಯಾಗಿ ತಿಂದ ಘಟ ಕಣೆ ಇವು, ಅದ್ಕೆ ಬಾಳಕೆ ಬಂದವೆ. ಮಮ್ಮಕ್ಕಳು ಮರಿಮಕ್ಕಳು ತಲೆನ್ಯಲ್ಲ ನೋಡ್ತ ಅವುರೇ" ಎಂದ ಉಗ್ರಿ.
"ಮಮ್ಮಕ್ಳು ಅಂದಾಗ ಗ್ಯಾಪಕ್ಕೆ ಬತ್ತು, ದ್ಯಾವೇಗೌಡ ಮಮ್ಮಕ್ಕಳಿಗೆ ರಾಜಕೀಯ ಕಲುಸ್ತಯಿದ್ದನಂತೆ" ಎಂದ ಸೀರ.
"ಯಾರೋ ಹೇಳಿದೋರು?"
"ವಳೆನರಸಿಪುರದಿಂದ ರಾಮಯ್ಯ ಬಂದಿದ್ದ ಕಂಡ್ಯ. ದ್ಯಾವೇಗೌಡ ಮಮ್ಮಕ್ಕಳ ಕರಕಂಡು ಬಂದು ತಾನು ಮಾಡಿರೊ ಕ್ಯಲಸ ತೋರಿಸಿ ಯಾರ್‍ಯಾರಿಂದ ಉಸಾರಾಗಿರಬೇಕು, ಎಲ್ಲಿ ಹೋಗಬೇಕು, ಎಲ್ಲಿ ಬರಬೇಕು, ಅಂತ ಹೇಳ್ತಯಿದ್ದಂತ್ನೆ" ಎಂದ ಸೀರ.
"ನರಿ ಹೋದ್ರೆ ಹುಲಿನೆ ಹೋಯ್ತು ಅಂತಿರಿ ನೀವು. ದ್ಯಾವೇಗೌಡ ಈಗ ಕಾಲುಳುಕಿರೊ ಎತ್ತಿನಂಗೆ ಮನಿಗ್ಯವುನೆ ಗೊತ್ತೆ?" ಎಂದ ಉಗ್ರಿ.
"ಮನಿಗಿದ್ರೇನ್ನ, ನಾನು ಮುಪ್ಪಾದ್ರು ನನ್ನ ಚಾಡಿ ಮುಪ್ಪಾದತೇ ಅಂತ ಇವತ್ತಿಗೂ ಸುಮ್ಮನಿಲ್ಲ ಅವುನು" ಎಂದ ಸೀರ.
"ಎಜ್ಜಾಕ್ಟ್ಲಿ ಕರಟ್ ಚಿಗಪ್ಪ" ಎಂದುಕೊಂಡು ವಾಟಿಸ್ಸೆ ಬಂದು ಚಿಕ್ಕಣ್ಣನ ಒಲೆ ಮುಂದೆ ಕೂರುತ್ತ ಕ್ಯೆಯ್ಯಾನಿಸಿ ಬೆಂಕಿಯಲ್ಲಿ ಕೈ ಬಿಸಿಯಾದ ಕೂಡಲೇ ತನ್ನ ಕೆನ್ನೆ ಮುಟ್ಟಕೊಂಡು, ನಂತರ ಉಗ್ರಿ ಕೆನ್ನೆ ಮುಟ್ಟಲು ಹೋದ. ಹಿಂದೆ ಸರಿದ ಉಗ್ರಿ.
"ಅದ್ಯಾಕಪ್ಪ ನನ್ನ ಕ್ಯನ್ನೆ ಸವುರಕ್ಕೆ ಬತ್ತಿ?" ಎಂದ.
"ಇಪ್ಪು ಸಳಿಲೂ ನನ್ನ ಕೈಯಿ ಯಂಗೆ ಬಿಸಿ ಅವೆ ನೋಡು ಅನ್ನಕ್ಕೆ ಕಣೊ ಉಗ್ರಿ. ನನ್ನನ್ನೇನು ಸಲಿಂಗಕಾಮಿ ಅನ್ನಕಂಡ್ಯಾ?"
"ಸಲಿಂಗಕಾಮಿ ಅಂದ್ರೇನ್ನಾ?" ಎಂದಳು ಜುಮ್ಮಿ.
"ಬ್ಯಾಡ ಕಣಕ್ಕ ಆ ಮ್ಯಾಟ್ರು ತಗಂಡೇನು ಮಾಡ್ತಿ, ನೀನು ಪ್ಯೂರ್ ಹೆಣ್ಣುಮಗಳು, ಅಂಗೆ ಇರು" ಎಂದ ವಾಟಿಸ್ಸೆ.
"ಅಂಗೆ ಇರು ಅಂದ್ರೆ ಅದೇನ್ನ ಅಂಗಂತೀ?"
"ನೋಡಕ್ಕ, ಸರಕಾರ ಸಲಿಂಗ ಕಾಮನ ಸಕ್ರಮ ಮಾಡ್ಯದೆ ಗೊತ್ತೇ?"
"ಅದೇನು ಸರಿಯಾಗೇಳ್ಳ?"
"ನಿನಿಗೆ ಯಂಗೇಳುಬೇಕು ಅನ್ನದೇ ನನ್ನ ಪ್ರಾಬ್ಲಮ್ಮು. ನಮ್ಮ ದ್ವಡಪ್ಪ ಬ್ಯಾರೆ ಸೆನ್ಸಾರ್ ಅಧಿಕಾರಿಯಂಗೆ ನೋಡ್ತ ಅವ್ರುನೆ."



"ನೋಡ್ಡಿ, ಹೇಳ್ಳ, ಅದು ಬಜೆಟ್ಟಿನ ಸುದ್ದಿ ಅಲವೇ?" ಎಂದಳು ಜುಮ್ಮಿ.
"ನೋಡಕ್ಕ, ಗಂಡಸು ಹೆಂಗಸನ್ನ ಇಷ್ಟಪಡತನೆ. ಅಮ್ಯಾಲೆ ಗಂಡ್ಸನ್ನ ಹೆಂಗ್ಸು ಇಷ್ಟಪಡತಳೆ. ಇದು ನಿಯಮ. ಆದ್ರೆ ಎಲ್ಲೊ ಏನೊ ಹುಟ್ಟಾಣಕೆಲೆ ದೋಶ ಕಾಣಸಿಗಂಡು ಗಂಡಸು ಗಂಡನ್ನೇ ಇಷ್ಟಪಡದು, ಹೆಂಗಸು ಹೆಂಗಸನ್ನೆ ಇಷ್ಟಪಡದೂ ನಡೀತದೆ, ನ್ಯಡಿತಾ ಅದೆ ಗೊತ್ತೇ?"
"ಸಣ್ಣದ್ರು ಜ್ವತೆಲಿ ಮನಿಕಳವಾಗ ಅಂಗಾಡ್ತವೆ ಕಂಡ್ಯ. ದ್ವಡೊರಾಗಿ ಮದಿವಾದ ಮ್ಯಾಲೂ ಅಂಗಾಡಕ್ಕೋದರೆ" ಎಂದ ಸೀರ.
"ನೋಡು ಇಲ್ಲೇ ಒಂದು ಕೇಸು ಸಿಕ್ತು. ಸೀರ ಚಿಗಪ್ಪನ ಬಾಲ್ಯ ಬಾಳ ಥ್ರಿಲ್ಲಾಗ್ಯದೆ. ಹೇಳ ಚಿಗಪ್ಪ ನಿನ್ನ ಎಕ್ಸ್‌ಪೀರಿಯನ್ಸ."
"ನಾನೇನೇಳನ್ನ ನೀನೇಳತಾಯಿರದ್ನೆ ಹೇಳು, ಕೇಳನ."
"ಹೇಳ್ತಿನಿರು ಚಿಗಪ್ಪ, ಹೆಣ್ಣೂ ಅಲ್ಲ, ಗಂಡೂ ಅಲ್ಲದವುರು ಯಂಗೋ ಏನೋ, ಜೀವನ ಮಾಡ್ತರೆ. ಅವುರ ಜೀವನ ವಿವರಿಸಿ ಹೇಳದು ಕಷ್ಟ. ಅದೂ ನಮ್ಮ ದೊಡ್ಡಪ್ಪನೆದ್ರಿಗೆ. ಅದ್ರು ಅವುನು ಅಸಂಖ್ಯಾತ ಮಕ್ಕಳು ಟ್ಟಸಿರೋ ತಂದೆ. ಅವುನಿಗೆ ಒಬ್ಬ ಕೋಜಾ ಮಗ ಹುಟ್ಟದ್ರೆ, ಕೋಜಾ ಮಗಳು ಹುಟ್ಟದ್ರೆ ಏನು ಯೋಚನೆ ಮಾಡತಿದ್ದ? ಅದರಲ್ಲಿ ಅವುನ ತಪ್ಪಂತೂ ಇಲ್ಲ, ಹುಟ್ಟದವನ ತಪ್ಪಂತೂ ಇಲ್ಲ, ಸೃಷ್ಟಿಲೇ ನಡೆದ ಅಚಾತುರ್ಯಕ್ಕೆ ನಾವೇನು ಮಾಡಕ್ಕಾದತೂ? ಅದ್ಕೆ ಅಂಥೋರು ಏನಾರ ಮಾಡಿಕಳ್ಳಿ ಅಂತ ಸರಕಾರ ಕಾನೂನು ಮಾಡ್ತು, ಅದನ್ನ ಗೌರವುಸದು."
"ನೀನೇನೇಲಾತಾಯಿದ್ದಿಯೋ ಒಂದೂ ಗೊತ್ತಾಗಲಿಲ್ಲ ಹೋಗು" ಎಂದಳು ಜುಮ್ಮಿ.
"ಹೇಳ್ತಿನಿರಕ್ಕ, ನಾನು ಹೈಸ್ಕೂಲು ಓತ್ತಿದ್ದಾಗ ಸಿ.ಪ್ರತಾಪ ಅಂತ ಕ್ಲಾಸ್‌ಮೇಟಿದ್ದ, ಅವುನು ಸರಿಯಾಗಿರಲಿಲ್ಲ, ಹುಡುಗಿರ ಕಂಡ್ರೆ ದ್ವೇಶ ಮಾಡೋನು. ಅದೇ ನಮ್ಮ ಕಂಡ್ರೆ ಮೈಮ್ಯಾಲೆ ಬೀಳೋನು. ಪಕ್ಕಿಸಿಗಂಡು ಕೂತಗಳೋನು. ಬ್ರಾಂಬ್ರು ಪೈಕಿ ಆದ್ರೂ ಜಾತಿಬೇದ ಮಾಡದಂಗೆ ನಮ್ಮ ಜ್ವತೆಲೆ ಇದ್ದ ಅಂದ್ರೆ ಅವುನು ನಮ್ಮ ಜೊತೆ ಹುಡುಗಿ ತರನೆ ಇದ್ದ. ಈ ನಮ್ಮಾವನ ಮಗ ರುದ್ರನಂತೂ ಅವ್ನನ್ನ ಮನಿಗೇ ಕರಕಂಡು ಬರೊನು. ಎಸೆಸೆಲ್ಸಿಗೆ ಬಂದಾಗ ನಾನವ್ನನ್ನ ಕೇಳಿದೆ. 'ಲೇ ಪ್ರತಾಪ, ನೀನಿಗ್ಯಾಕೆ ಹೆಂಗಸರ ಕಂಡ್ರೆ ಆಗದಿಲ್ಲ?' ಅಂತ. ಅದಕವುನು ಏನೇಳಿದ ಗೊತ್ತೇನಕ್ಕ?"
"ನನಿಗೇನು ಗೊತ್ತು ಹೇಳ್ಳ."
"ಅವುನು ಸಣ್ಣುಡುಗನಾಗಿದ್ದಾಗ ಅವ್ವರವ್ವ ಮುಟ್ಟಾಗಿ ಮನೆ ವರಗಡೆ ಇರೋಳಂತೆ. ಇವುನು ಅತ್ತಹೋದ್ರೆ ಹಿಂದ್ನರಿ ಮುಟ್ಟುಬ್ಯಾಡ ಅಂತ ಕೂಗಿ ಬುಡೋಳಂತೆ. ಅಜ್ಜಿ ಕೇಳಿದ್ರೆ ಅವ್ವನ್ನ ಮುಟ್ಟಬ್ಯಾಡ ಅನ್ನೊಳಂತೆ. ಈ ಮುಟ್ಟುಬ್ಯಾಡ ಅನ್ನದು ಕ್ರಮೇಣ ಹೆಂಗಸರನ್ನೆ ಮುಟ್ಟದಂಗಾಯ್ತು, ಬ್ರಾಂಬ್ರು ಮಡಿ ಏನು ಮಾಡತದಪ್ಪ ಅಂದ್ರೆ ಪ್ರಾಯಕ್ಕೆ ಬಂದಾಗ ಹೆಂಗುಸರ ಸವಾಸವೇ ಬ್ಯಾಡ ಅನ್ನಂಗೆ ಮಾಡ್ತದೆ. ಸಿ.ಪ್ರತಾಪ ಅಂಗಾಗಿದ್ದ. ಸರಕಾರ ಈಗ ಅಂಥೋರಿಗ್ಯಲ್ಲ ನೀವು ಗಂಡಸರ ಜೊತೆ ಇರಬವುದು ಅಂತ ಕಾನೂನು ಸದ್ಯ ಮಾಡ್ಯದಂತೆ" ಎಂದ ವಾಟಿಸ್ಸೆ.
"ಸರಿಯಪ್ಪ ಮಠಾಧಿಪತಿಗಳ್ಯಾಕೆ ವಿರೋಧಿಸಿದ್ದರಂತಲ್ಲಾ" ಎಂದ ಉಗ್ರಿ.
"ಮಠಾಧಿಪತಿಗಳದೇನು ಪ್ರಾಬ್ಲಮ್ಮು ಅಂದ್ರೇ, ಯಾರಂಥಾ ವಿಷಯದಲ್ಲಿ ತಲೆಕೆಡಿಸಿಗಂಡಿದ್ರೋ ಅವುರೇ ಪ್ರತಿಭಟಿಸಿದ್ರೆ, ಆಗ ಅವುರ ಮ್ಯಾಲೆ ಡವುಟ್ ಬರದಿಲ್ಲ ನೋಡು, ಅದ್ಕೆ ಕೂಗ್ಯವಂತೆ."
"ಓಹೊಹೊ ಅಂಗೇ ಅನ್ನ. ಏನೇ ಆಗ್ಲಿ ಸರಕಾರ ಇಂತವುಕ್ಯಲ್ಲ ತಲೆಕೆಡಿಸಿಗಳದೇ ಬ್ಯಾರೆ ಕ್ಯಲಸ ಮಾಡಬವುದತ್ತು, ಅಲವೆ ಕಾಳಮಾವ" ಎಂದ ಉಗ್ರಿ.
"ಊ ಕಂಡ್ಯ. ಬಡವರಿಗೆ ಯಂಗೇ ಮೂರುಪಾಯಿಗೆ ಅಕ್ಕಿ ಗೋದಿ ಕೊಡಕ್ಕೆ ಅಂತ ವಂಟದೊ ಅದೇ ತರ ಒಬ್ಬ ಹಿಡುವಳಿದಾರನ ಮನೆತನಕ್ಕೆ ಬೀಜಗೊಬ್ಬರ ತಂದು ಮಡಗಿದ್ರೆ ಒಪ್ಪಬವುದಿತ್ತು."
"ಭೇಷ್ ದೊಡಪ್ಪ ದೇವೇಗೌಡ್ರು ನಿನ್ನಂಗೆ ಅಂದವುನೆ."
"ಏನಂದವುನೆ?"
"ಈ ಬಜೆಟ್ಟಲ್ಲಿ ರೈತಾಪಿ ವರ್ಗಕ್ಕೆ ಏನೂ ಮಾಡಿಲ್ಲ ಅಂದವುನೆ."
"ಏಟೇ ಆಗ್ಲಿ ರೈತನ ಮಗಲವೆ."
"ರೈತನ ಮಗಲ್ಲ ಮಣ್ಣಿನ ಮಗ."
"ಇನ್ನಳದೋರು ಯಾತ್ರ ಮಗನ್ನ" ಎಂದ ಸೀರ. ■




ಸಾಹಿಂತಿ, ನೀತಿ

ಫ್ರಾನ್ಸಿಸ್ ಬೇಕನ್ ಹೆಸರನ್ನು ನೀವು ಕೇಳಿರಬಹುದು. ಈತ ರಾಜಕಾರಣಿ, ವಿಜ್ಞಾನಿ, ಪ್ರಬಂಧಕಾರ, ಈತ ಹೇಳಿದ್ದು: "ಕೆಲವರು ದೊಡ್ಡವರಾಗಿ ಹುಟ್ಟುತ್ತಾರೆ. ಕೆಲವರು ದೊಡ್ಡವರಾಗಿ ಮಾಡಲ್ಪಡುತ್ತಾರೆ. ಕೆಲವರ ಮೇಲೆ ದೊಡ್ಡಸ್ತಿಕೆ ಹೇರಲ್ಪಡುತ್ತದೆ." ಇಂಥ ನೂರಾರು ಮಾತುಗಳನ್ನು ಬರೆದಿದ್ದಾನೆ. ಅಷ್ಟೇ ಅಲ್ಲ ಈತ ಎಂಥ ಅದ್ಭುತ ಭಾಷಣಕಾರನಾಗಿದ್ದ ಎಂದರೆ, ಅವನು ಭಾಷಣ ಮಾಡುವಾಗ ಎಲ್ಲಿ ನಿಲ್ಲಿಸಿಬಿಡುತ್ತಾನೋ ಎಂದು ಜನ ಆತಂಕದಿಂದಿರುತ್ತಿದ್ದರು. ಆತ ಒಮ್ಮೆ ಮಂತ್ರಿಯಾದ. ಆತನ ಭ್ರಷ್ಟತೆಯನ್ನು ಕಂಡು ಪ್ರಧಾನಿ ...ನ್ನು ಮಂತ್ರಿ ಕೆಲಸದಿಂದ ತೆಗೆದುಹಾಕಿದ. ತನ್ನ ಪ್ರತಿಭೆಯನ್ನು ಗಮನಿಸಿಯಾದರೂ ಶಿಕ್ಷಿಸಲಿಕ್ಕಿಲ್ಲ ... ಬೇಕನ್ ಆಶಿಸಿದ್ದ, ಹಾಗಾಗಲಿಲ್ಲ, ತನ್ನ ಪ್ರತಿಭೆಗಾಗಿ ಮತ್ತೆ ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುತ್ತಾರೆ ... ತಿಳಿದಿದ್ದ, ಹಾಗೂ ಆಗಲಿಲ್ಲ, ಕೊನೆಗೆ ತಡೆದುಕೊಳ್ಳಲಾಗದೆ ಕೇಳಿಕೊಂಡೇ ಬಿಟ್ಟ. "ಹಣದ ...ಗೆ ತುಂಬ ಆಗಿದೆ–ಕೆಲವೇ ತಿಂಗಳಾದರೂ ಮಂತ್ರಿ ಮಾಡಿದರೆ ತೀರಿಸಿಕೊಂಡು ಬಿಡ್ತೇನೆ!"

...ಹಿತಿಗಳಲ್ಲಿ ನೈತಿಕತೆಯ ಪ್ರಶ್ನೆ ಮತ್ತೆ ಮತ್ತೆ ಏಳುತ್ತದೆ. ಹದಿನೆಂಟನೇ ಶತಮಾನದ ಬಾಸ್ವೆಲ್ ...ನ್‌ಸನ್‌ನ ಜೀವನಚರಿತ್ರೆ ಬರೆದು ಪ್ರಖ್ಯಾತನಾದ. ಶ್ರೀಮಂತ, ವಕೀಲ ಗಣ್ಯಕುಟುಂಬದ ...ಗ ಈ ಬಾಸ್ವೆಲ್. ಆದರೆ ಈತ ಮಾಡದಿರುವ ಕೆಟ್ಟಕೆಲಸಗಳೇ ಇರಲಿಲ್ಲ, ವ್ಯಭಿಚಾರ, ...ಮ್ಮುವುದರಿಂದ ಓಡಿದು ಅನುಭವಕ್ಕಾಗಿ ಏನನ್ನಾದರೂ ಮಾಡಿಬಿಡುತ್ತಿದ್ದ, "ಬಾಸ್ವೆಲ್ ತುಂಬ ...ಕ ವ್ಯಕ್ತಿಯಾಗಿದ್ದ" ಅನ್ನುತ್ತಾನೆ ಲಟ್ಟನ್ ಸ್ಟ್ರೇಚಿ; "ಆದರೆ ಎಲ್ಲ ಅನೈತಿಕರೂ ಬಾಸ್ವೆಲ್ ...ವುದು ಸಾಧ್ಯವಿಲ್ಲ" ಎಂದು ದೊಡ್ಡ ವಿಶಂಪರ್ಯಾಸಕ್ಕೆ ನಮ್ಮನ್ನೂ ಒಡ್ಡುತ್ತಾನೆ.

...ಗಾದರೆ ಬಾಸ್ವೆಲ್‌ನನ್ನು ಯಾವುದು ಪೊರೆಯುತ್ತದೆ? ಯಾವುದು ಆತನನ್ನು ನಮ್ಮ ತಾತ್ಸಾರದಿಂದ ...ತ್ತದೆ? ಆತನ ಜೀವನ ಪ್ರೇಮ ಮತ್ತು ಪ್ರತಿಭೆ, ಅಟದಲ್ಲಿ ವಿಚಿತ್ರ ಕೋಡಂಗಿಯಾಗಿದ್ದ ಬಾಸ್ವೆಲ್ ...ಲೇಖಕನೂ ಆಗಿದ್ದ, ಆತ ಬರೆದ "ಡಾ. ಜಾನ್‌ಸನ್ ಜೀವನಚರಿತ್ರೆ"ಯನ್ನು ಮೀರಿಸುವ ...ಚರಿತ್ರೆ ಇನ್ನೂ ಬಂದಿಲ್ಲ.



ಪುನರಪಿ ಜನನಂ....

ಬರೆಯುವುದು, ಕ್ರಿಯಾಶೀಲರಾಗಿ ಬರೆಯುವುದು–ಅಂದರೆ ಕತೆ, ಕಾದಂಬರಿ, ನಾಟಕ ಬರೆಯುವುದು ಎಂಥ ಏಕಾಂತದ, ಕಷ್ಟದ, ದ್ವಂದ್ವಗಳ ಕೆಲಸ ಎಂಬುದು ಅನೇಕರಿಗೆ ಗೊತ್ತಿಲ್ಲ. ಬರೆಯದೆ ಆರಾಮಾಗಿರುವವರಿಗೆ ಇದು ಅರ್ಥವಾಗುವುದಿಲ್ಲ. ನೀವು ನಿಮ್ಮ ಬದುಕಿನಲ್ಲಿ ಕಂಡ, ಕೇಳಿದ, ಅನುಭವಿಸಿದ ವಿಷಯಗಳನ್ನೇ ಬರೆಯುತ್ತಿದ್ದರೂ ಪ್ರತಿಯೊಂದು ವಾಕ್ಯವೂ ಅನೇಕ ಸಾಧ್ಯತೆಗಳಲ್ಲಿ ಒಂದನ್ನು ಆರಿಸಿಕೊಂಡು ರೂಪುಗೊಳ್ಳುತ್ತದೆ. ಆ ವಾಕ್ಯವೇ ಸರಿ ಎಂಬ ವಿಶ್ವಾಸ ಕೂಡ ಲೇಖಕನಿಗಿರುವುದಿಲ್ಲ. ಹಿಂದಿನ ಪುಟ, ಪ್ಯಾರಾಗಳು ಮತ್ತು ಅವುಗಳ ಶೈಲಿ ಮುಂದಿನ ವಾಕ್ಯಗಳನ್ನು ನಿರ್ಧರಿಸುತ್ತವೆ; ಸ್ವಲ್ಪ ಹೆಚ್ಚುಕಮ್ಮಿಯಾದರೂ ವರದಿಯೋ, ರಗಳೆಯೋ ಆಗಿ ಹೋಗುತ್ತದೆ!

ಆದ್ದರಿಂದಲೇ ಜೇನ್ ಆಸ್ಟೆನ್, ಫಾಕ್ನರ್ ಮುಂತಾದ ಲೇಖಕರು ತಮ್ಮ ಆರಂಭದ ಕೃತಿಗಳನ್ನು ಮತ್ತೆ ಓದಿದಾಗ, "ನಾನು ಇಷ್ಟೆಲ್ಲ ಚೆನ್ನಾಗಿ ಬರೆದೆನೆ!" ಎಂದು ಉದ್ಗರಿಸುತ್ತಿದ್ದರು ಮತ್ತು ಅಷ್ಟು ಚೆನ್ನಾಗಿಲ್ಲ ಅನ್ನಿಸಿದಾಗ ಒಮ್ಮೆ ಅಚ್ಚಾದ ಆ ಕೃತಿಯನ್ನು ಮತ್ತೆ ಬರೆದು ಪ್ರಕಟಿಸಲು ಯತ್ನಿಸುತ್ತಿರಲಿಲ್ಲ.

ತೇಜಸ್ವಿಯವರು ಮೊನ್ನೆ 'ಕೃಷ್ಣೇಗೌಡನ ಆನೆ' ಕತೆಯನ್ನು ಮತ್ತೊಮ್ಮೆ ಬರೆದುಕಳಿಸಿ, 'ಇಷ್ಟವಾದರೆ ಹಾಕಿ" ಅಂದರು. ನಾನು ಕುತೂಹಲದಿಂದ ಓದಿದೆ. ಹಳೆಯದನ್ನು ಮತ್ತೊಮ್ಮೆ ಓದಿದೆ. ಎರಡೂ ಚೆನ್ನಾಗಿವೆ. ತೇಜಸ್ವಿ ಚೆನ್ನಾಗಿ ಬರೆಯುವುದರಿಂದ ಓದುಗರು ಮತ್ತೊಮ್ಮೆ ಓದಲು ಹಿಂಜರಿಯುವುದಿಲ್ಲ. ಆದ್ದರಿಂದ ಪ್ರಕಟಿಸಿದೆವು.

ಆದರೆ ಮೂಲದ ಪ್ರಶ್ನೆ ನನ್ನನ್ನು ಕಾಡುತ್ತಲೇ ಇತ್ತು, 'ಕೃಷ್ಣೇಗೌಡನ ಆನೆ'ಯೇನೋ ನಾಲ್ಕೈದು ವರ್ಷದ ಹಿಂದೆ ಬರೆದದ್ದು; ಪುಸ್ತಕವಾಗಿ ಇನ್ನೂ ಪ್ರಕಟವಾಗಿಲ್ಲ, ಅದು ಸರಿ. ನನಗೆ ನನ್ನ ಯಾವುದೇ ಹಳೆಯ ಪದ್ಯ ಸರಿ ಅನ್ನಿಸದಿದ್ದರೆ ಅದನ್ನು ಮತ್ತೆ ಬರೆಯಬಹುದೇ?

ಇಲ್ಲ, ಹಾಗಾಗುವುದಿಲ್ಲ ಎಂದು ನನ್ನ ಅನ್ನಿಸಿಕೆ. ಹಿಂದೆ ಬರೆಯುವಾಗ ಇದ್ದ ಒತ್ತಡ, ಸ್ಫೂರ್ತಿ, ಆತಂಕಗಳೇ ಬೇರೆ; ಆಗಿನ ತಪ್ಪುಗಳೇ ಬೇರೆ. ಆ ತಪ್ಪುಗಳಲ್ಲಿ ಕೂಡ ವೈಶಿಷ್ಟ್ಯವಿರುತ್ತದೆ. ಆದ್ದರಿಂದಲೇ ಏಟ್ಸ್ ತನ್ನ ಆರಂಭದ ಸರಳ, ರೋಮ್ಯಾಂಟಿಕ್ ಕವನಗಳನ್ನು ಅಲ್ಲಗಳೆಯಲಿಲ್ಲ ಮತ್ತು ಪುನರ್ರಚಿಸಲು ಹೋಗಲಿಲ್ಲ, ಅವುಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡೇ 'ಟವರ್' ತರಹದ ಅದ್ಭುತ ಕವನಗಳನ್ನು ರಚಿಸಿದ.



ಸೆಪ್ಟೆಂಬರ್ 1, 1991

ಸರ್ವಸಮಸ್ಯೆಯಾನಕಿ ಪೂಜೆ ಮದ್ದು

ರಾಜಕಾರಣಿಗಳ ಮೇಧಾವಿತನವನ್ನು ಕಂಡು ಮೂಕವಿಸ್ಮಯ ಅಂತಾರಲ್ಲ ಅದು ಆಗಿದ್ದೇನೆ. ಎಂತಹ ಕ್ಲಿಷ್ಟ ಸಮಸ್ಯೆ ಎದುರಾದರೂ 'ಸುಲಿದ ಬಾಳೆಯ ಹಣ್ಣಿನಂದದಿ' ಪರಿಹಾರ ಸೂಚಿಸುವುದನ್ನು ಕಂಡು ಬೆರಗಾಗಿದ್ದೇನೆ. ಆ ಬ್ರಹ್ಮ ಅನ್ನೋನು ರಾಜಕಾರಣಿ ಅನ್ನೊ ಸ್ಪೀಶೀಸ್‌ಗಳ ತಲೆ ಒಳಕ್ಕೆ ಇದ್ದಬದ್ದ ಚಾಣಾಕ್ಷತನವನ್ನೆಲ್ಲ ತುರುಕಿ ಬಿಟ್ಟಿದ್ದಾನೇನೋ ಎಂದು ಆಶ್ಚರ್ಯಪಟ್ಟಿದ್ದೇನೆ.

ಸಾಮಾನ್ಯ ಜನ ಬರಗಾಲದಲ್ಲಿ ಏನು ಮಾಡ್ತೀವಿ. ಜಲಾಶಯದಲ್ಲಿ ನೀರಿಲ್ಲ, ಮಳೆರಾಯ ಕಣ್ಣು ತೆರೆದಿಲ್ಲ, ಬೆಳೆಗೆ ಇರಲಿ. ಕುಡಿಯುವ ನೀರಿಗೂ ತತ್ವಾರ ಆಗಿದೆ ಎಂದು ಯೋಚಿಸುತ್ತಾ ಮುಖ ಜೋಲುಬಿದ್ದೀವಿ. ರಾಜಕಾರಣಿಗಳು ಹಾಗಲ್ಲ, ಇದರ ಬಗ್ಗೆ ಚಿಂತೆಯೇ ಅವರಿಗಿಲ್ಲ, 'ಯಾಕಿಂಗೆ ಹೆದರಿ ಸಾಯ್ತೀರಿ, ನೀರು ಕೊಡ್ತೀವಿ' ಅನ್ನೊ ಮಾತನ್ನ ಆಡುತ್ತಾರೆ.

ಕೊಡ್ತಾರೆ ನಿಜ. ಆದರೆ ಕೊಡಲು ಎಲ್ಲಿದೆ ನೀರು?

ಬಿರು ಬೇಸಿಗೆಯಲ್ಲೇ ಬಂದಿತು ಹಾಳಾದ ಸಂಸತ್ ಚುನಾವಣೆ. ಮತದಾರನ ಓಲೈಕೆಗೆ ಮುಂದಾಯಿತು ಸರ್ಕಾರ. ಬರಿದಾಯಿತು ಜಲಾಶಯ.

ಸರ್ಕಾರಕ್ಕೆ ಯೋಜನೆ ಎಂಬುದೇ ಇಲ್ಲವೆ?

ಭೇಷಾಗಿದೆ-ಚುನಾವಣೆ ಗೆಲ್ಲುವ ಯೋಜನೆ!

ಜಲಾಶಯ ಬತ್ತಿಸಿದ ಈ ಭಗೀರಥರು ನೀರು ತರುವುದಾದರೂ ಎಲ್ಲಿಂದ?

'ಇನ್ನೂ ಬತ್ತಿಲ್ಲವಲ್ಲ ಡೆಡ್ ಸ್ಟೋರೇಜು. ಅದನ್ನೆತ್ತುವೆವು' ಎನ್ನುತ್ತಾರೆ ರಾಜಕಾರಣಿ.

'ಹೀಗೆ ಮಾಡಿದರೆ ಒಣಗಿ ಬಿರುಕು ಬಿಡದೆ ಅಣೆಕಟ್ಟು? ನೀರು ಬಂದಾಗ ಒಡೆಯದೆ' ಎಂದರೆ 'ಒಡೆದರೆ ಇನ್ನೊಂದ ಕಟ್ಟಿಸಿದರಾಯ್ತು' ಎನ್ನುವರು ಅವರು!

ಡೆಡ್ ಸ್ಟೋರೇಜೇ ಬರಿದಾದರೆ?

ಅದಕ್ಕೂ ಅವರಲ್ಲಿ ಮದ್ದಿದೆ.

ಆಂಧ್ರದ ರಾಜಶೇಖರರೆಡ್ಡಿ ಏನು ಮಾಡಿದರು?

ನೂರಾರು ಪುರೋಹಿತರನ್ನು ಕಲೆ ಹಾಕಿ ಮಾಡಿದರು

'ವರುಣ ಯಜ್ಞ'!

ಅವರಿಗೆ ಸಾಧ್ಯ ಆದದ್ದು ಇವರಿಗೆ ಆಗಲ್ಲವೆ?

ಮುಜರಾಯಿ ಸಚಿವರು ಸೂಚನೆ ನೀಡಿದ್ದಾರೆ- 'ಎಲ್ಲ ಮುವ್ವತ್ತನಾಲ್ಕು ಸಾವಿರ ಮುಜರಾಯಿ ದೇವಸ್ಥಾನಗಳಲ್ಲಿ ಬೆಳಗಿನ ಆರು ಗಂಟೆಗೆ ಪೂಜೆ ನಡೆಯಬೇಕು.'

ಯಾಕೆ ಈ ಆರು ಗಂಟೆಯ ಪೂಜೆ?

ದೇವರು ಅನ್ನೋನು ಇನ್ನೂ ಫ್ರೆಷ್ ಆಗಿರ್‍ತಾನೆ. ಪೂಜೆಯಿಂದ ಪುಳಕಿತನಾದ ಅವನು ವರುಣನನ್ನು ಓಲೈಸಲಿ ಎಂದಿರಬೇಕು!

ವರುಣ ಮುನಿಸಿಕೊಂಡೇ ಇದ್ದರೆ?

ಮಾಡುವರು ಹೋಮ ಯಜ್ಞ, ಸುರಿಸುವರು ಮಳೆ.

ಹೋಮಯಜ್ಞದಿಂದ ತುಂಬುವುದು ಪುರೋಹಿತರ ಹೊಟ್ಟೆ. ನೀರಿನಿಂದ ತುಂಬಬಹುದೆ ಕಟ್ಟೆ?

ತುಂಬುತ್ತದೆ ಎಂಬ ಭರವಸೆ ಅವರಿಗೆ!

'ಸರ್ವ ರೋಗಾನಕಿ ಸಾರಾಯಿ ಮದ್ದು' ಅನ್ನುತ್ತಿದ್ದರು. ಈಗ ನೋಡಿದರೆ 'ಸರ್ವ ಸಮಸ್ಯೆಯಾನಕಿ ಪೂಜೆ ಮದ್ದು' ಆಗಿದೆ!



ಅಣಕ

▶ ಎಚ್.ಎಲ್. ಕೇಶವಮೂರ್ತಿ

ಚಿನ್ನ ಚಿನ್ನ ಆಸೈ.....

ಈ ಇಳಿವಯಸ್ಸಿನಲ್ಲಿ ಕರುಣಾನಿಧಿಗೆ ಇಂತಹ ಸಂಕಟ ಬರಬಾರದಿತ್ತು. ಹೇಗೋ ಇಬ್ಬರು ಮಕ್ಕಳಿಗೆ ಒಂದು ದಾರಿ ಮಾಡಿದ್ದರು. ಮಗಳು ಕನ್ನಿಮೋಳಿಗೆ ಕೇಂದ್ರದ ಮಂತ್ರಿ ಅಂತ ಮಾಡಿದರೆ ತನ್ನ ಜವಾಬ್ದಾರಿ ಮುಗಿಯಿತು ಅಂತ ಇರೋ ಹೊತ್ತಿನಲ್ಲಿ ಇದು ಬಂದಿದೆ. ಅಲ್ಪ ಅಧಿಕಾರ ಇದ್ದಾಗ ತನಗೆ ಬೇಕಾದವರಿಗೆ ಸಹಾಯ ಮಾಡದಿದ್ದರೆ ಅಧಿಕಾರ ಹೋದ ಮೇಲೆ ಮಾಡುವುದಕ್ಕೆ ಆಗುತ್ತಾ. ಅವರ ಪಕ್ಷದ ಕೇಂದ್ರ ಮಂತ್ರಿ ಏನೋ ನಮ್ಮವರಲ್ಲವ ಅಂತ ಮದರಾಸು ಹೈಕೋರ್ಟು ನ್ಯಾಯಾಧೀಶರಿಗೆ ಒಂದು ಮಾತು ಹೇಳಿದ್ದಾನೆ. ಅವನು ರಘುಪತಿಯವರಲ್ಲಿ ಸಹಾಯ ಕೋರಿದ್ದು ಒಂದು ಜುಜುಬಿ ಕೇಸಿನಲ್ಲಿ, ಪಾಂಡಿಚೆರಿಯ ಡಾಕ್ಟರು ಅವರ ಮಗನ ಕೇಸು ಅದು. ಅವರೇನೋ ಅದ್ಯಾವುದೋ ಅಂಕಪಟ್ಟಿಯನ್ನು ತಿದ್ದಿದ್ದರಂತೆ. ಅದೇ ಸಮಯಕ್ಕೆ ಪಾಂಡಿಚೆರಿ ವಿಶ್ವವಿದ್ಯಾಲಯದ ಕಂಪ್ಯೂಟರ್ ಪ್ರೋಗ್ರಾಮರ್ ಸತ್ತನಂತೆ. ಅವನು ಯಾಕೆ ಸತ್ತನೋ ಏನೋ. ಇವರನ್ನು ಕಂಡರೆ ಆಗದವರು ಸಂಶಯಾಸ್ಪದ ಸಾವು ಎಂದು ಇವರ ಮೇಲೆ ದೂರು ನೀಡಿದರಂತೆ. ಇದರ ತಲೆನೋವು ನಮಗ್ಯಾಕೆ ಬೇಕು ಎಂದು ಅದನ್ನು ಸಿಬಿಐಗೆ ಎತ್ತಾಕಿ ಪಾಂಡಿಚೆರಿ ಪೊಲೀಸ್ನೋರು ಕೈ ತೊಳೆದುಕೊಂಡರಂತೆ.

ಸಿಬಿಐನವರೂ ಮನುಷ್ಯರೇ ಅಲ್ಲವಾ. ಇಂತಹ ದೊಡ್ಡ ಮನುಷ್ಯರನ್ನು ಜೈಲಿನಲ್ಲಿ ಕೊಳೆಸಿದರೆ ಏನು ಬಂತು. ಇನ್ನೂ ಈ ಡಾಕ್ಟರು ಯಾರ್‍ಯಾರಿಗೆ ಸಹಾಯ ಮಾಡಬೇಕಾಗಿದೆಯೋ ಏನು ಕತೆಯೋ ಅಂತ ಕೇಸು ದಾಖಲಾಗಿ ಒಂದು ವರ್ಷ ಆದರೂ ಆಸಾಮಿಗಳು ನಾಪತ್ತೆ ಎಂದು ಅವರ ಎದುರೇ ಕುಣಿಕುತ್ತಾ ಇದ್ದರಂತೆ.

ನಿರೀಕ್ಷಣಾ ಜಾಮೀನು ದೊರೆತ ಮೇಲೆ ಪ್ರಭಾವಿ ಆರೋಪಿ ಸಿಬಿಐ ಅವರ ಕಣ್ಣಿಗೆ ಬೀಳೋದು ಲಾಗಾಯ್ತಿನಿಂದಲೂ ನಡೆದುಬಂದಿರೋ ಪದ್ಧತಿ. ಈ ವಿಶಿಷ್ಟ ಪದ್ಧತಿಯನ್ನು ಮೀರಬಾರದಲ್ಲಾ ಅಂತ ಇವರೂ ಮದರಾಸು ಹೈಕೋರ್ಟಿನಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಗುಜರಾಯಿಸಿದರಂತೆ. ಗುರುತು ಇರುವವನೇ ಹೇಗೂ ಕೇಂದ್ರ ಮಂತ್ರಿ ಆಗಿದ್ದಾನಲ್ಲ ಹೇಗೋ ಇರಲಿ ಅಂತ ಅವನ ಕೈಲಿ ಒಂದು ಮಾತು ಹೇಳಿಸಿದರಂತೆ. ಇದೇ ಘನಘೋರ ಅಪರಾಧ ಅನ್ನುವಂತೆ ನ್ಯಾಯಾಧೀಶರು ಹಾರಾಡಿದ್ದಾರೆ.

ನ್ಯಾಯಾಧೀಶರೂ ದೊಡ್ಡ ಮನುಷ್ಯರೆ. ಒತ್ತಡ ಹೇರಿದ ಸಚಿವರು ಯಾರು ಅಂತ ಹೇಳಿಲ್ಲ, ಜಯಲಲಿತ ಸುಮ್ಮನಿರಬೇಕಲ್ಲ, ಅದು ಕೇಂದ್ರ ಮಂತ್ರಿ ರಾಜನೇ, ಅವನು ರಾಜೀನಾಮೆ ನೀಡಲಿ ಎಂದು ಬೊಬ್ಬೆ ಹೊಡೀತಿದಾಳೆ.

ಇದೆಲ್ಲದರಿಂದ ಕರುಣಾನಿಧಿ ಮುದಿ ಜೀವ ತತ್ತರಿಸಿಹೋಗಿದೆ. ಇಂತಹವನ್ನೆಲ್ಲ ಮುಚ್ಚುಮರೆಲಿ ಮಾಡಿಕೊಳ್ಳಬಾರದ. ಹಾದಿರಂಪ ಬೀದಿರಂಪ ಮಾಡಿ ನನ್ನ ಮಾನಾನೂ ಹರಾಜು ಮಾಡಿದ್ನಲ್ಲ ಅಂತ ಕರುಣಾನಿಧಿಗೆ ಆ ಮಂತ್ರಿ ಮೇಲೆ ಅಗದಿ ಕೋಪ ಬಂದಿತಾದರೂ... ಚಿನ್ನ ಚಿನ್ನ ಆಸೈ ಒಂದು ತಲೆಹಾಕಿತಂತೆ. ನೈತಿಕತೆ ಪ್ರಶ್ನೆ ಎತ್ತಿ ರಾಜೀನಾಮೆ ಬಿಸಾಕು ಅಂದರೆ..... ಖಾಲಿಯಾದ ಮಂತ್ರಿ ಸ್ಥಾನಕ್ಕೆ ತಮ್ಮ ಪ್ರೀತಿಯ ಕನ್ನಿಮೋಳಿಯನ್ನು ತಳ್ಳಬಹುದಲ್ಲಾ..... ಮುದಿಮುಖದಲ್ಲಿ ಸಂತೋಷ ಮೂಡುವ ಮುನ್ನವೇ... ಹಾಳಾದ ವಿರೋಧಿಗಳು ತನ್ನ ಮಗಳನ್ನು ಮಂತ್ರಿ ಮಾಡಲೆಂದೇ ಈ ಮುದಿಯ ಈ ಬಲೆ ಎಣೆದಿದ್ದಾನೆ ಅನ್ನುವ ವದಂತಿ ಹಬ್ಬಿಸುತ್ತಾರೇನೋ ಎಂಬ ಆತಂಕ ತಲೆದೋರಬೇಕೆ. ಮುದಿ ವಯಸ್ಸಿನಲ್ಲಿ ಇಂತಹ ದುಸ್ಥಿತಿ ಯಾರಿಗೂ ಬರಬಾರದು ಅಲ್ವಾ.....

ಕಪಾಳಮೋಕ್ಷ

ಮುಜರಾಯಿ ಸಚಿವ ಸೋಮಣ್ಣನ ತಲೆ ಕೆಟ್ಟು ತಿಪ್ಪೆಗುಂಡಿ ಆಗಿತ್ತು. ಕೋಳಿ ಕೆದಕಿದ ಹಾಗೆ ಅದನ್ನು ಕೆದಕಿ ನೋಡಿದರು. ಮಂತ್ರಿಯಾದವನು ಕೈಕೆಳಗಿನ ಅಧಿಕಾರಿಗಳಿಗೆ ಹೊಡೀಲೆಬಾರದು, ಬಾಲ ಭಾಷೆ ಪ್ರಯೋಗಿಸಲೇಬಾರದು ಅಂದರೆ ಅವರನ್ನೇನು ತಬ್ಬಿ ಮುದ್ದಾಡಬೇಕ ಅನ್ನುವುದೇ ಅವರ ಚಿಂತೆಗೆ ಕಾರಣ ಆಗಿತ್ತು.

ನಡೆದದ್ದು ಇದು.

ಹೇಳಿಕೇಳಿ ಬೆಂಗಳೂರಿನ ಅನಭಿಷಕ್ತ ದೊರೆ ಈ ಸೋಮಣ್ಣ ಅನ್ನೊ ಪ್ರತೀತಿ ಇದೆ. ಅವರನ್ನ ಮಂತ್ರಿ ಮಾಡಿದ್ದೇ ನಗರಪಾಲಿಕೆಯನ್ನು ಚಿನ್ನದ ತಟ್ಟೇಲಿ ತಂದು ಒಪ್ಪಿಸುತ್ತಾರೆ ಎಂದು. ಅದರ ಪೂರ್ವಭಾವಿ ಸಿದ್ಧತೆಗಾಗಿ ಮಂತ್ರಿವರ್ಯರು ಅಗ್ರಹಾರ ದಾಸರಹಳ್ಳಿಗೆ ತಮ್ಮ ಪಾದ ಬೆಳೆಸಿದ್ದರು. ಮಂತ್ರಿ ದಯಮಾಡಿಸಿದ್ದಾರೆ. ಅಂದಮೇಲೆ ಯಾರಿಲ್ಲದಿದ್ದರೂ ಅಧಿಕಾರಿಗಳು ಇರ್‍ತಾರೆ. ಅಧಿಕಾರದ ಬಾಲ ಹಿಡಿಯೋ ಪಡ್ಡೆಹೈಕಳು ಸರೇ ಸರಿ. ಅವರ ಮುಂದೆ 'ಬಲೇ ಜೋರು ಆಸಾಮಿ' ಅನ್ನಿಸಿಕೊಳ್ಳಬೇಕಲ್ಲ, ಅದಕ್ಕೇನು ಮಾಡಿದರಪ್ಪ ಅವರು ಎಂದರೆ ಇಂಜಿನಿಯರ್ ಹಿಡ್ಕಂಡರು. ಯಾವ ಕಾಮಗಾರೀನೂ ಸರಿಯಾಗಿರಲ್ಲ ಅನ್ನೋದು ಅವರಿಗೆ ತಿಳಿದ ವಿಷಯವೇ. ಅವರೂ ಫಲಾನುಭವಿಗಳು ತಾನೆ! ಅವನ್ನ ಹಿಗ್ಗಾಮುಗ್ಗಾ ಜಾಡಿಸಿದರು. ಬಾಲಭಾಷೆ ಅಂತಾರಲ್ಲ ಅದರಲ್ಲಿ, ಮಾತು ಅಶ್ಲೀಲದ ಅಂಚನ್ನು ಮೀರುತ್ತಿದೆ ಎಂದಾಗ ಇಂಜಿನಿಯರ್ ಸೋಮರಾಜು ಮಂತ್ರಿಗಳತ್ತ ಗುರಾಯಿಸಿದ! ದೊಡ್ಡೋರಾದೋರು ಒಂದು ಮಾತು ಅನ್ನುತ್ತಾರೆ ಅಂತ ಅನ್ನಿಸಿಕೊಂಡು ಸುಮ್ಮನಿದ್ದರೂ ಆಗ್ತಿತ್ತು, ಆದರೆ ಹಂಗಾಗಲಿಲ್ಲ, ಮಂತ್ರಿಗಳಿಗೇ ಗುರಾಯಿಸಿದ್ದ!

ಇಂತಹ ಪರಿಸ್ಥಿತಿಯೂ ಎದುರಾಗಬಹುದು ಎಂದು ಸೋಮಣ್ಣ ಕನಸಿನಲ್ಲಿಯೂ ಎಣಿಸಿರಲಿಲ್ಲ, ಮಂತ್ರಿ ಮೀಸೆ ಮಣ್ಣಾಗಬಾರದಲ್ಲ ಅಂತ ಅವನ ಕಪಾಳಕ್ಕೆ ನಾಲ್ಕು ಬಿಗಿದರು. ಅವನು ಮೊದಲೇ ನಗರದ ಶ್ರೀಮಂತರ ಕಾಯಿಲೆಗಳೆಲ್ಲದರ ವಾರಸುದಾರನಾಗಿದ್ದನಂತೆ. ಅಲ್ಲೇ ಫಿಟ್ ಅಂತ ಬಿದ್ಕಂಡ.

ಇಷ್ಟೇ. ಅಷ್ಟಕ್ಕೇ ತಲೆ ಕೆಟ್ಟೋರು ತಲೆಗೊಂದು ಮಾತಾಡ್ತಾ ಅವೆ. ಸೋಮಣ್ಣನವರೇನೋ 'ಅವನ್ನ ಬೈಯ್ದದ್ದು ನಿಜ. ಆದರೆ ಕಪಾಳಕ್ಕೆ ಹೊಡೆದಿಲ್ಲ' ಅಂತ ಹೇಳಿ ತಾತ್ಕಾಲಿಕವಾಗಿ ಪರಿಸ್ಥಿತಿ ನಿಯಂತ್ರಿಸಿದರು.

ಅವರು ಸುಮ್ಮನಿದ್ದರೂ ಜನ ಬಿಡಬೇಕಲ್ಲ. ಮುಜರಾಯಿ ಮಂತ್ರಿ ಆಗಿ ಇಂತಹ ಬಾಲಭಾಷೆ ಬಳಸುವುದು ಶೋಭೆ ತರುವುದಿಲ್ಲ ಅನ್ನುತ್ತಿದ್ದಾರೆ. ಅಲ್ಲ ಮುಜರಾಯಿ ಮಂತ್ರಿ ಆದರೂ ಅವರು ಸೋಮಣ್ಣ ತಾನೆ. ಇಲಾಖೆಗೆ ತಕ್ಕನಾಗಿ ಗುಣಾನೂ ಬದಲಾಯಿಸಿಕೊಳ್ಳಿ ಅಂದರೆ ಹೇಗೆ ಹೇಳಿ. ಆದರೂ ಮಂತ್ರಿಗಳಿಗೆ ಒಂದು ಅನುಮಾನ ಬಂದಿರಬೇಕು. ಅವಾಚ್ಯ ಶಬ್ದಗಳನ್ನು ಬಳಸಿದ್ದು ತಪ್ಪಾಯಿತೇನೋ ಅಂತ. ತಮ್ಮ ಹೇಳಿಕೆಯಲ್ಲಿ ಕೊಂಚ ಬದಲಾವಣೆ ಮಾಡಿದರು 'ನಾಗರಿಕರು ಕಾಮಗಾರಿ ಸಮರ್ಪಕವಾಗಿ ನಡೆದಿಲ್ಲ ಎಂದು ಆಕ್ರೋಶಗೊಂಡು ನನಗೆ ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದರು., ಕಾಮಗಾರಿ ನಡೆಸಿದ ಅಧಿಕಾರಿ ಇಲ್ಲೇ ಇದ್ದಾರೆ. ಅವರನ್ನೇ ಬಯ್ಯಿರಿ ಅಂದೆ. ಅಂದರೆ ಬೈದದ್ದು ನಾಗರಿಕರು! ಸೋಮಣ್ಣ ಅಲ್ಲ!

ಅಂದಮೇಲೆ ಸುಸಂಸ್ಕೃತರಾದ ಮಂತ್ರಿ ಸೋಮಣ್ಣ ಅವರು ಇಂಜಿನಿಯರ್ ಸೋಮರಾಜ ಅವರಿಗೆ ಕಪಾಳಮೋಕ್ಷವನ್ನೂ ಮಾಡಿಲ್ಲ, ಅವಾಚ್ಯ ಶಬ್ದಗಳನ್ನೂ ಬಳಸಿಲ್ಲ ಎಂದಾಯಿತು.

ಇದಕ್ಕೂ ಒಂದು ಕೊಕ್ಕೆ ಹಾಕುವವರು ಇದ್ದಾರೆ. ಈ ಮಾತನ್ನು ಅಲ್ಲೇ ಹೇಳಬಹುದಾಗಿತ್ತಲ್ಲ ಅಂತಾರೆ. ಅವರಿಗೇನು ಬುದ್ಧಿ ಇದೆಯಾ? ಬೈದದ್ದನ್ನು ಕೇಳಿಸಿಕೊಂಡವರ ಮುಂದೇನೇ ಬೈದಿಲ್ಲ ಅನ್ನುವುದಕ್ಕಾಗುತ್ತೇನ್ರಿ?

ಇನ್ನು ಕೆಲವರು ಹೇಳ್ತಾರೆ 'ಮಂತ್ರಿಯಾಗಿ ಗೂಂಡಾ ತರಹ ವರ್ತಿಸೋದು ತರವಲ್ಲ' ಅಂತ. 'ತರಹ' ಏನ್ರಿ ಬಂತೂ ಗೂಂಡಾನೆ ಅನ್ರಿ. ಇಲ್ದಿದ್ರೆ ಮಂತ್ರಿ ಮಾಡುತ್ತಿದ್ದರಾ......

ಸಂಸ್ಕೃತವನ[್ನು]
ಕೊಂದವರ್‍ಯಾರು...

ಬಿಜೆಪಿಯ ತವರುಮನೆ ಆರೆಸ್ಸೆಸ್‌ನ ಕಪಿಮುಷ್ಟಿಯಲ್ಲಿರುವ ... ಸರ್ಕಾರ ತನ್ನ ಹಿಡನ್ ಅಜೆಂಡಾವನ್ನ ಬತ್ತಳಿಕೆಯಿಂದ ಒಂದೊಂದಾಗಿ ... ಹೊರಟಿವೆ. ಅದರ ಒಂದು ಹಂತವೇ ಸಂಸ್ಕೃತ ವೇದ ವಿಶ್ವವಿದ್ಯಾ... ಸ್ಥಾಪನೆ ಹಾಗೂ ಜ್ಯೋತಿಷ್ಯ ಶಾಸ್ತ್ರವನ್ನು ಪಠ್ಯವನ್ನಾಗಿಸುವ ಕುರಿತು ವಿಶ್ವ... ಲಯಗಳಿಗೆ ಕಳುಹಿಸುತ್ತಿರುವ ಸುತ್ತೋಲೆ. ಇವೆಲ್ಲವೂ ಶಿಥಿಲಗೊ... ಪುರೋಹಿತಶಾಹಿಯ ಭದ್ರಕೋಟೆಯನ್ನು ಮರಳಿ ಕಟ್ಟುವುದೇ ಹೊ... ಬೇರೇನಲ್ಲ, ಪ್ರಾಚೀನ ಭಾರತದಲ್ಲಿ ಹಲವಾರು ಭಾಷೆಗಳ (ಪಾಳಿ, ... ಇತ್ಯಾದಿ) ನಡುವೆ ಸಂಸ್ಕೃತವೂ ಒಂದು ಪರಿಚಿತ ಭಾಷೆಯಾಗಿ ... ನಡುವೆ ಬಳಕೆಯಲ್ಲಿತ್ತು, ಮೈತ್ರೇಯಿ ಮತ್ತು ಗಾರ್ಗೇಯಿಯಂತ ಮ... ವಿದ್ವಾಂಸರ ದೃಷ್ಟಾಂತ, ಕಾಳಿದಾಸ ಮತ್ತು ವಾಲ್ಮೀಕಿಯಂತ ಶೂದ್ರ ಕುಲದ... ರಚಿಸಿದ ಸಂಸ್ಕೃತ ಸಾಹಿತ್ಯಗಳು ನಮ್ಮ ಮುಂದಿವೆ. (ಬ್ರಾಹ್ಮಣರ ... ಗಾಯತ್ರಿ ಮಂತ್ರ ಕ್ಷತ್ರಿಯ ವಿಶ್ವಾಮಿತ್ರನ ರಚನೆ) ಆದರೆ ಕ್ರಮೇಣ ... ಕಾಲದಲ್ಲೂ ಎಲ್ಲಾ ಧರ್ಮಗಳಲ್ಲೂ ಇರುವಂತೆ ಕೆಲ ಸಂಕುಚಿತ ಮನಸ್ಸು... ಈ ವೇದ ಸಾಹಿತ್ಯವಿರುವ ಸಂಸ್ಕೃತ ಭಾಷೆಯನ್ನು ಪವಿತ್ರತೆ (ದೇವಭಾಷ... ಗೂಡಿನಲ್ಲಿ ಬಂಧಿಸಿಟ್ಟರು.

ಒಟ್ಟಾರೆಯಾಗಿ ಸಂಸ್ಕೃತವನ್ನು ಕೊಂದವರೇ ಇಂದು ಇದು ಇಂ... ಆಧುನಿಕ ಕಾಲದ ಕಂಪ್ಯೂಟರ್‌ಗೂ ಸೂಕ್ತ ಎನಿಸುವ ಲಿಪಿಯುಳ್ಳ ... ಎನ್ನುವುದುಂಟು. ವಾಸ್ತವವಾಗಿ ಈ ಲಿಪಿ ನಾಗರೀ(ದೇವನಾಗರಿ)ಲಿಪಿ... ವಿನಃ ಸಂಸ್ಕೃತವಲ್ಲ. (ಹಿಂದೂಗಳ ಪವಿತ್ರ ಸಂಕೇತ ಓಂ ಸಮೇತ). ಇಂಗ್ಲಿಷ್... ಇತರ ಯೂರೋಪಿಯನ್ ಭಾಷೆಗಳು, ಲ್ಯಾಟಿನ್ ಲಿಪಿಯಾಗಿ ಬಳಸಿಕೊಂ... ಸಂಸ್ಕೃತ ನಂತರ ಹಿಂದಿ ಇನ್ನಿತರ ಭಾಷೆಗಳು ನಾಗರಿಲಿಪಿಯನ್ನ ಬಳಸಿಕೊಳ್ಳ... ಯಷ್ಟೆ. ಇವೇನೇ ಇದ್ದರೂ ಸಂಸ್ಕೃತ ಒಂದು ಪಕ್ವತೆಯನ್ನು ಪಡೆದ ಸ... ಭಾಷೆಯಾಗಿತ್ತೆಂಬುದು ಸತ್ಯ. ಆದರೆ ಸಂಸ್ಕೃತದ ಈ ಶ್ರೇಷ್ಠತೆಯೇ ಅ... ಮುಳುವಾಗಿ ಮಡಿ-ಮೈಲಿಗೆಯ ನೆಪದಲ್ಲಿ ಈ ಭಾಷೆ ಸೊರಗತೊ... ನಂತರ ಕೇವಲ ಪೂಜಾರಿಗಳ ಮಂತ್ರ ಹಾಗೂ ಕೆಲ ಗ್ರಂಥಗಳಲ್ಲ... ಉಳಿಯಬೇಕಾದ ದೌರ್ಭಾಗ್ಯಕ್ಕೀಡಾಯಿತು.

ಶಿವಮೊಗ್ಗದ ಒಂದು ಸಮಾರಂಭದಲ್ಲಿ ಇತ್ತೀಚೆಗೆ ಸಂಸ್ಕೃತದ ಅವನ... ಅನ್ಯಧರ್ಮಿಯರ ದಾಳಿಯೇ ಕಾರಣ ಅಂತ ಒಬ್ಬ ಬ್ರಾಹ್ಮಣ ಮಹಾಶ... ಭಾಷಣ ಮಾಡಿದ್ದ (ತೋಳಬಿದ್ದರೆ ಆಳಿಗೊಂದು ಕಲ್ಲೆಂಬಂತೆ ಎಲ್ಲಕ್ಕೂ ಅವರುಗಳೇ ಕಾರಣ) ದೇವದಾಸಿ, ಜಾತೀಯತೆಗೂ ಇವರುಗಳೇ ಕಾರಣ ಎಂದು ಬೈರಪ್ಪ-ಚಿಮೂ ತರಹದ ಸಾಹಿತಿಗಳು ಹೇಳಿದ್ದಾರೆ. ಸಂಸ್ಕೃತವನ್ನ ಮಡಿವಂತಿಕೆಯ ಕೋಟೆಯಲ್ಲಿ ಬಂಧಿಸಿಟ್ಟದ್ದೇ (ಹೇಳಿದ ಶೂದ್ರರ ನಾಲಗೆ ಕತ್ತರಿಸುವ, ಕೇಳಿದ ಶೂದ್ರರ ಕಿವಿಗೆ ಕಾದ ಸೀಸ ಹುಯ... ಎಂಬಷ್ಟರಮಟ್ಟಿಗೆ) ಅದರ ಅವನತಿಗೆ ಕಾರಣ ಎಂಬುದು ಐತಿಹಾಸಿಕ ...

ಒಂದು ಪತ್ರ


ಐದಾರು ವರ್ಷಗಳ ಹಿಂದೆ ದಸರಾ ನಾಡಹಬ್ಬದ ಕಾರ್ಯಕ್ರಮವೊಂ... ಹೋಗಿದ್ದೆ. ಆವತ್ತಿನ ಮುಖ್ಯ ಭಾಷಣಕಾರರ ಭಾಷಣದ ವಿಷಯ ಇ... ಆಗಿತ್ತು. ವಿದ್ಯಾಸಂಸ್ಥೆಯೊಂದರ ಸಂಸ್ಕೃತ ಉಪನ್ಯಾಸಕರಾಗಿ ಸಂಸ್ಕೃತ ಸಾಹಿತ್ಯ... ಆಳವಾದ ಜ್ಞಾನ ಹೊಂದಿರುವ ಅವರ ಭಾಷಣದಲ್ಲಿ "ಸಂಸ್ಕೃತ ಗುತ್ತಿಗೆದಾರ... ಮಡಿವಂತಿಕೆಯ ಬಗ್ಗೆ ವಿಷಾದವಿತ್ತು. ಅವರು ಉಡುಪಿಯಲ್ಲಿ ಸಂಸ... ವ್ಯಾಸಂಗ ನಡೆಸುತ್ತಿದ್ದಾಗ (35-40 ವರ್ಷಗಳ ಹಿಂದೆ) ನಡೆದಂತ ಮದುವೆ... ಕತೆಯೊಂದನ್ನವರು ನೆನಪಿಸಿಕೊಂಡರು. ಬ್ರಾಹ್ಮಣರಷ್ಟೇ ವೇದೋಕ್ತ ರೀತಿಯ... ಮದುವೆಯಾಗುತ್ತಿದ್ದ ಆ ಕಾಲದಲ್ಲೇ ಶೆಟ್ಟರೊಬ್ಬರಿಗೆ ಆ ರೀತಿ ಮದುವೆಯಾಗ... ಆಸೆಯಾಯಿತಂತೆ. ದೊಡ್ಡ ಮನೆತನದ ವ್ಯಕ್ತಿಯಾಗಿದ್ದ ಕಾರಣ ಅದ... ತಿರಸ್ಕರಿಸಲಾರದೇ ಪುರೋಹಿತರು ಅದನ್ನು ಒಪ್ಪಿಕೊಂಡರೂ ಸಂಪ್ರದಾಯ... ಭಯ ಅವರಿಗೆ. ಅಂತೂ ಕೊನೆಗೆ ಉಡುಪಿಯ ಅಲಂಕಾರ್ ಥಿಯೇಟರ್‌... ಅದು ನಡೆದೇಹೋಯಿತು. ಶೆಟ್ರಿಗೂ ಖುಷಿಯಾಯ್ತು. ಅದೇ ರೀತಿ ಮದು... ಮಾಡಿಸಿದ ಭಟ್ರಿಗೂ ಸಹ. ಯಾಕೆಂದರೆ ಭಟ್ಟರು ಸಂಪ್ರದಾಯವನ್ನ ಮುರಿಯ... ಮದುವೆ ಮಾಡಿಸಿದ್ದರು. ಅಂದರೆ ಮದುವೆಯಲ್ಲಿ ಮಂತ್ರಗಳನ್ನು ಹೇಳ... ಬದಲು ಸಂಬಂಧವೇ ಇಲ್ಲದೆ ವ್ಯಾಕರಣಸೂತ್ರಗಳನ್ನೇ ಮಂತ್ರಗಳ ಭ್ರ... ಬರುವಂತೆ ಪಠಿಸಿ ಶೆಟ್ಟರ ಮದುವೆ ಮಾಡಿಸಿದ್ದರು. ಇಂದು ಶೂದ್ರ... ಮನೆಯಲ್ಲೂ ಲಕ್ಷ್ಮೀ ಧಾರಾಳವಾಗಿ ಹರಿದಾಡುವ ಕಾರಣಕ್ಕೆ ವೇದಮಂತ್ರಗ... ಮಡಿಮೈಲಿಗೆಯನ್ನ ತೊರೆದಿವೆ.

ಅಲ್ಲದೇ ಆ ಭಾಷಣಕಾರರು ವೇದಮಂತ್ರಗಳನ್ನು ಕೇಳಬಾರದವ... (ಸ್ತ್ರೀ-ಶೂದ್ರ), ಚಪ್ಪಲಿ ಧರಿಸಿದವರು... ಇತ್ಯಾದಿಗಳಿರುವ ಶಾಲೆಗಳಲ್ಲಿ ವೇದಪ... ಸರಿಯಲ್ಲ ಎನ್ನುವವರ ಅತಿಮಡಿವಂತಿಕೆಯ ಬಗ್ಗೆಯೂ ಮಾತನಾಡಿದ್ದರ... ವೇದಗಳ ಕುರಿತು ಮಡಿವಂತಿಕೆ ತೋರುವ ಇವರು ಈ ವೇದಗಳನ... ಪರಿಷ್ಕರಿಸಿದವನು ಬೆಸ್ತರ ಹೆಣ್ಣಿನ (ಮತ್ಸ್ಯಗಂಧಿ) ಮಗನಾದ ವೇದವ್ಯಾ... ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ?

ಒಂದು ಕಾಲದಲ್ಲಿ ಗಾರ್ಗೇಯಿಯಂತ ಸ್ತ್ರೀಯರು ಬೃಹದಾರಣ್ಯ... ಉಪನಿಷತ್‌ನ ಬಗ್ಗೆ ಯಾಜ್ಞವಲ್ಕ್ಯನಂತವರ ಸರಿಸಾಟಿಯಾಗಿ ವಾದ ಮಾಡುವಷ್ಟು... ಪ್ರಭಾವಶಾಲಿಯಾಗಿದ್ದರೆ ನಂತರದ ದಿನಗಳಲ್ಲಿ ಗಾಯತ್ರಿ ಮಂತ್ರ, ಲಲಿ... ಸಹಸ್ರನಾಮದಂತ ಸ್ತ್ರೀದೇವತೆಯ ಮಂತ್ರಗಳನ್ನೂ ಹೇಳದಂತೆ ಅವರ... ನಿಷಿದ್ಧ ವಿಧಿಸಲಾಯಿತು. ಇಂತಹ ಸಂಕುಚಿತ ವಾದವೇ ಸಂಸ್ಕೃತ-ವೇ... ಜ್ಞಾನಕ್ಕೆ ಕೂಪಮಂಡೂಕನ ಸ್ಥಾನವನ್ನು ನೀಡಿತು.

ತಮಾಷೆ ನೋಡಿ, ಎಲ್ಲವನ್ನು ಬಲ್ಲ ಸರ್ವಜ್ಞ, ಸರ್ವಾಂತರ್ಯಾಮಿ ಎಂಬಬಿರುದಾಂಕಿತ ದೇವರಿಗೆ ಬೇಕಿರುವುದು ನಿಷ್ಕಲ್ಮಶ ಭಕ್ತಿಯಷ್ಟೇ. ಆದರೂ ಕೇವಲ ಸಂಸ್ಕೃತದ ಮಂತ್ರಗಳಿಂದಷ್ಟೇ ನಡೆಯುವ ಪೂಜೆ-ಮನಸ್ಕಾರಗಳು ದೇವರಿಗೆ ತಲುಪುತ್ತವೆ ಎಂಬ ಭ್ರಮೆಯನ್ನು ಬತ್ತಲಾಗಿದೆ.

-ರವಿ ಪುತ್ತೂರ, ದ...



ಹವ್ಯಕ ಅಭಿಮಾನಕ್ಕೆ ಅಂಡು ನೋವೇ ಮದ್ದು!

ಅಮೆರಿಕದಲ್ಲಿ ನೆಲೆಸಿರುವ ಒಂದಷ್ಟು ಜನ ಎನ್ನಾರೈಗಳು ಸೇರಿ 'ಈ ಪ್ರೀತಿ' ಎಂಬ ಕನ್ನಡ ಚಿತ್ರ ವೊಂದನ್ನು ನಿರ್ಮಿಸುತ್ತಿದ್ದಾರೆ. ಅದರ ಮುಖ್ಯ ನಿರ್ಮಾಪಕ ನಾರಾಯಣ ಹೊಸ್ಮನೆ ಎಂಬಾತ ಅಮೆರಿಕದ ವಿಶ್ವ ವಿದ್ಯಾಲಯವೊಂದರಲ್ಲಿ ಪ್ರೊಫೆಸರ್ ಅಂತೆ. ಚಿತ್ರ ಆರಂಭವಾದಾಗ ಈ ಪ್ರೊಫೆಸರ್ ಮಹಾಶಯ "ದಿಗಂತ್ ...ಮ್ಮ ಹವ್ಯಕ ಕುಲದವನು. ನಾವೂ ಹವ್ಯಕರು. ಹಾಗಾಗಿ ಆತನಿಗೋಸ್ಕರ ...ನಿಮಾ ಮಾಡುತ್ತಿದ್ದೇವೆ'' ಎಂಬ ನಾಚಿಕೆಗೆಟ್ಟ ಹೇಳಿಕೆಯನ್ನು ನೀಡಿದ್ದ. ...ವರೆ ಇಂದು ಅದೇ ಹವ್ಯಕ ದಿಗಂತ ಅವರ ಚಿತ್ರದ ಚಿತ್ರೀಣಕರಣಕ್ಕೆ ...ಜರಾಗದೆ ಕೈಕೊಟ್ಟು ಓಡಿ ಬಂದಿದ್ದಾನೆ. ಆದ್ದರಿಂದ ಆ ಚಿತ್ರದ ...ರ್ದೇಶಕಿ ಪ್ರಿಯಾ ಭಾರತಿ ಎಂಬಾಕೆ ಅಮೆರಿಕದಿಂದ ಬಂದು ಛೇಂಬರ್‌ನಲ್ಲಿ ...ಗಂತ್ ವಿರುದ್ಧ ದೂರು ದಾಖಲಿಸಿ "ಆತ ಅಮೆರಿಕಕ್ಕೆ ಬಂದು ...ನಿಮಾ ಮುಗಿಸುವುದಾಗಿ ಮಾತು ಕೊಡುವ ತನಕ ನಾನು ಭಾರತ ...ಟ್ಟು ಹೋಗುವುದಿಲ್ಲ'' ಎಂದು ಹಠ ಹಿಡಿದು ಕುಳಿತಿದ್ದಾಳೆ.


ದಿಗಂತ್ ಈ ರೀತಿ ಕೈಕೊಟ್ಟಿರುವುದು ಇದೇ ಮೊದಲಲ್ಲ. ಯೋಗರಾಜ ...ಟ್ಟರ 'ಮನಸಾರೆ' ಚಿತ್ರವೊಂದನ್ನು ಹೊರತುಪಡಿಸಿದರೆ ದಿಗಂತ್ ನಟಿಸಿದ, ...ಟಿಸುತ್ತಿರುವ ಯಾವ ಚಿತ್ರಗಳಿಗೂ ನಿಯತ್ತಾಗಿ ಕೆಲಸ ಮಾಡಿದ ...ದಾಹರಣೆಯೇ ಇಲ್ಲ. ಹಿಂದೊಮ್ಮೆ 'ಒಂದು ಪ್ರೀತಿಯ ಕಥೆ' ಎಂಬ ...ತ್ರಕ್ಕೆ ಈತನನ್ನೇ ನಾಯಕನನ್ನಾಗಿ ಆಯ್ಕೆ ಮಾಡಲಾಗಿತ್ತು. ಮುಹೂರ್ತದ ...ನ "ಬನಶಂಕರಿ ದೇವಸ್ಥಾನದ ಹತ್ತಿರ ಕಾರು ಕಳಿಸಿ'' ಎಂದು ಹೇಳಿದ ...ಗಂತ್ ಆನಂತರ ತನ್ನ ಮೊಬೈಲ್‌ಅನ್ನು ಸ್ವಿಚ್ ಆಫ್ ಮಾಡಿ ...ಪತ್ತೆಯಾಗಿದ್ದು. ಅತ್ತ ಮುಹೂರ್ತದ ಘಳಿಗೆ ಮೀರಿದರೂ ಇತ್ತ ಕಾರ್ ...ನಶಂಕರಿ ದೇವಸ್ಥಾನದ ಹತ್ತಿರ ದಿಗಂತ್‌ಗಾಗಿ ಕಾಯುತ್ತಲೇ ಇತ್ತು. ...ನ್ನು ಈತ ಬರುವುದಿಲ್ಲ ಎಂದರಿತ ಆ ಚಿತ್ರದ ನಿರ್ದೇಶಕರು ಸಪೋರ್ಟಿಂಗ್ ...ಕ್ಯರೆಕ್ಟರ್ ಪಾತ್ರಕ್ಕೆ ಬಂದಿದ್ದ ಧಾರಾವಾಹಿ ನಟ ಸ್ವಾಮಿ ...ಂಬಾತನನ್ನೇ ನಿಲ್ಲಿಸಿ ಕ್ಲಾಪ್ ಹೊಡೆಸಿದ್ದರು.

ನೈಟ್ ಪಾರ್ಟಿಗಳಲ್ಲೇ ಸಮಯ ಕಳೆಯುವ ದಿಗಂತ್ ...ಷನ್ ಲೋಕದಲ್ಲಿ ಮತ್ತು ಟೈಮ್ಸ್ ಆಫ್ ಇಂಡಿಯಾದ ...ಜ್ ಥ್ರೀನಲ್ಲಿ ಮಾತ್ರ ಮಿಂಚುತ್ತಿರುತ್ತಾನೆ. ಇಂತಹ ...ಗಂತನನ್ನು ನಂಬಿ ಇಲ್ಲಿನವರೇ ಹೆಣಗಾಡುತ್ತಿರುವಾಗ ...ವ್ಯಕ ಅಭಿಮಾನದಿಂದ ದಿಗಂತನನ್ನು ಹೀರೋ ...ಮಾಡಿದ ತಪ್ಪಿಗೆ ಎನ್ನಾರೈಗಳು ಅಂಡು ...ಡಿದುಕೊಳ್ಳದೇ ಮತ್ತೇನು ಮಾಡಲು ಸಾಧ್ಯ?



'ಮಂಜುನಾಥ'ನ ಸನ್ನಿಧಿಯಿಂದ ಗುರುಗಳ ನಿರ್ಗಮನ!

...'ಮಠ' ಖ್ಯಾತಿಯ ನಿರ್ದೇಶಕ ಗುರುಪ್ರಸಾದ್ ಮತ್ತು ನಾಯಕ ನಟ ...ಗ್ಗೇಶ್ ನಡುವಿನ ಕೋಳಿಜಗಳ ಬೀದಿಗೆ ಬಂದಿದೆ. ಮೊನ್ನೆ ಈ ಚಿತ್ರದ ...ಡುಗಳ ಪ್ರದರ್ಶನವಿತ್ತು. ಅಲ್ಲಿ ನಿರ್ಮಾಪಕ ಸನತ್ ಕುಮಾರ್, ನಾಯಕ ...ಗ್ಗೇಶ್ ಮತ್ತು ನಾಯಕಿ ಯಜ್ಞಾ ಶೆಟ್ಟಿ ಮಾತ್ರ ಹಾಜರಿದ್ದರು. "ನಿರ್ದೇಶಕ ...ರುಪ್ರಸಾದ್ ಯಾಕೆ ಬಂದಿಲ್ಲ?'' ಎಂಬ ಪತ್ರಕರ್ತರ ಪ್ರಶ್ನೆಗೆ "ಅವರು ...ಸೂರಿನಲ್ಲಿ ಅನಿಮೇಶನ್ ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ'' ಎಂಬ ...ತ್ತರವನ್ನು ಜಗ್ಗೇಶ್ ಮತ್ತು ಸನತ್ ಕೋರಸ್‌ನಲ್ಲಿ ನೀಡಿದರು.



ವಾಸ್ತವವಾಗಿ ಗುರುಪ್ರಸಾದ್ ಅಂದು ಬೆಂಗಳೂರಿನಲ್ಲೇ ಇದ್ದರು. ಗುರುಪ್ರಸಾದ್ ಮತ್ತು ನಿರ್ಮಾಪಕ...ರ ನಡುವೆ ಈಗಾಗಲೇ ಎರಡು ಸುತ್ತಿನ ಜಗಳ ನಡೆದಿದೆ. ಈ ಮಧ್ಯೆ ...ರುಪ್ರಸಾದ್ ಮತ್ತು ನಾಯಕ ಜಗ್ಗೇಶ್ ಕೂಡಾ ರಾತ್ರಿ ಹನ್ನೊಂದು ...ಯ ನಂತರ ಫೋನ್‌ನಲ್ಲಿ 'ಸಂಸ್ಕೃತ'ದಲ್ಲಿ ಜಗಳವಾಡಿದ್ದಾರೆ.

...ಸುಮಾರು ಎರಡೂವರೆ ವರ್ಷಗಳ ನಂತರ 'ಮಠ' ಖ್ಯಾತಿಯ ಈ ...ಡಿಯ ಚಿತ್ರ ಬರುತ್ತಿರುವುದು ಅಭಿಮಾನಿಗಳಲ್ಲಿ ಪುಳಕ ಹುಟ್ಟಿಸಿದೆ. ...ರೆ ಈ ಜಗಳ ಮತ್ತು ವಿವಾದದಿಂದಾಗಿ 'ಎದ್ದೇಳು ಮಂಜುನಾಥಾ' ... ಈಗಾಗಲೇ ವಿಳಂಬವಾಗಿ ಬಿಡುಗಡೆಯಾಗುತ್ತಿದೆ. "ಇನ್ನು ಮುಂದೆ ...ವುದೇ ಕಾರಣಕ್ಕೂ ಜಗ್ಗೇಶ್‌ರನ್ನಿಟ್ಟುಕೊಂಡು ಚಿತ್ರ ಮಾಡುವುದಿಲ್ಲ'' ... ಗುರುಪ್ರಸಾದ್ ಆವೇಶಭರಿತರಾಗಿ ಅನೌನ್ಸ್ ಮಾಡಿರುವುದು ...ಜಗಳ ಯಾವ ವಿಸ್ತರಕ್ಕೆ ತಲುಪಿದೆ ಎಂದು ಊಹಿಸಬಹುದು. ... ಇದಕ್ಕೆ ಪ್ರತಿಕ್ರಿಯಿಸಿದ ಜಗ್ಗೇಶ್ "ಗುರು ಇನ್ನೂ ಚಿಕ್ಕ ಹುಡುಗ. ...ಭಾವಂತ. ಆತನಿಗೆ ಅದ್ಭುತವಾದ ಭವಿಷ್ಯವಿದೆ. ಆತನಿಗೆ ನಾನು ಶುಭ ...ರೈಸುತ್ತೇನೆ'' ಎಂದು ಟಿಪಿಕಲ್ ರಾಜಕಾರಣಿ ಶೈಲಿಯಲ್ಲಿ ಮಾತನಾಡಿದ್ದಾರೆ. ...ರಾತ್ರಿ ಹೊತ್ತು ಸಂಸ್ಕೃತ, ಬೆಳಗಿನ ಹೊತ್ತು ಕನ್ನಡದಲ್ಲಿ ಮಾತನಾಡುವ ...ಜೋಡಿ ಬಗ್ಗೆ ಏನನ್ನಬೇಕೋ ಗೊತ್ತಾಗುತ್ತಿಲ್ಲ. ಈ ಮಧ್ಯೆ ಮೊದಲ ...ಗ ಚಿತ್ರ ನಿರ್ಮಾಣ ಮಾಡಿರುವ ಸನತ್ ಕುಮಾರ್ ಸಹ ಅತ್ತ ಪುಲಿ ...ದರಿ ಎಂಬ ಸಂಕಟ ಅನುಭವಿಸುತ್ತಿದ್ದಾರೆ. ಈ ಮಧ್ಯೆ ಸನತ್ ಮತ್ತು ...ರುಪ್ರಸಾದ್ ಇಬ್ಬರಿಗೂ ಆಪ್ತರಾಗಿರುವ ಪ್ರಕಾಶ್ ಬೆಳವಾಡಿ ಈಗ ...ಬ್ಬರ ನಡುವೆ ರಾಜಿ ಮಾಡಿಸುವ ಜವಾಬ್ದಾರಿಯನ್ನು ವಹಿಸಿಕೊಂಡು ...ತ್ತಿದ್ದಾರೆ. ಆದರೆ ಆ ಬಗ್ಗೆ ಇನ್ನೂ ಸಿಹಿ ಸುದ್ದಿ ಬಂದಿಲ್ಲ. ಇದ್ದಾದರೂ ...ಚಿತ್ರದ ಬಗ್ಗೆ ಒಂದು ನಿರೀಕ್ಷೆಯಿದೆ. ಇದು ಬುಳ್ಳ ಹುಡುಗರಿಂದು ...ಗದಂಡವಾಗುತ್ತಿದೆ.



ಕನ್ನಡದ ಹುಡುಗರ ಕಬಡ್ಡಿ ಕರಾಮತ್ತು

ಮರದ ಕಟ್ಟಿಗೆಯಂಥಾ ಮೈಕಟ್ಟಿನ ಶಕ್ತಿಶಾಲಿ ಹುಡುಗರು ತೋಳು, ತೊಡೆಗಳನ್ನು ತಟ್ಟಿ, ಕೆಸರುಗದ್ದೆಗ್ಗಿಳಿದು 'ಕಬಡ್ಡಿ ಕಬಡ್ಡಿ ಕಬಡ್ಡಿ ಕಬಡ್ಡಿ...' ಎನ್ನುತ್ತಾ ಧುತ್ತನೆ ಎಗರಿ ಎದುರಾಳಿಯ ಎದೆಗೆ ಒದ್ದರೆ ಅದನ್ನು ನೋಡುತ್ತಾ ಕುಳಿತಿರುವ ಪ್ರೇಕ್ಷಕನ ಎರಡೂ ಕೈಗಳು ಕುಂತ ಸೀಟನ್ನೇ ಗಟ್ಟಿಯಾಗಿ ಹಿಡಿದಿರುತ್ತವೆ....

ಅದು ನಮ್ಮ ನೆಲದ ಆಟದ, ಸಿನೆಮಾವೊಂದರ ಕರಾಮತ್ತು; ಅದು 'ಕಬಡ್ಡಿ'!

ಕನ್ನಡ ಚಿತ್ರರಂಗದಲ್ಲಿ ಸದ್ಯ ಬರುತ್ತಿರುವ ಮಚ್ಚು, ಲಾಂಗು, ರೌಡಿಸಂ ಕುರಿತ ದಟ್ಟ ದರಿದ್ರ ಸಿನಿಮಾಗಳ, ಅಲ್ಲಿ ಇಲ್ಲಿ ಕದ್ದೂ ಮುಚ್ಚಿ ಹೆಕ್ಕಿ ತೆಗೆದು ರೀಲು ಸುತ್ತುವ ರೀಮಿಕ್ಸ್ ಸಿನಿಮಾಗಳ ಹಾಗೂ ಯಾರೋ ಮಾಡಿದ ಚಿತ್ರವನ್ನು ಯಥಾವತ್ತು ಜೆರಾಕ್ಸ್ ಮಾಡಿ ಪ್ರೇಕ್ಷಕರ ಮುಂದಿಡುವ ರಿಮೇಕ್ ಸಿನಿಮಾಗಳ ನಡುವೆ 'ಇದು ಕನ್ನಡಿಗರ ಸಿನಿಮಾ' ಎಂದು ಎದೆತಟ್ಟಿ, ಹೆಮ್ಮೆಯಿಂದ ಹೇಳಿಕೊಳ್ಳುವಂಥ ಚಿತ್ರ 'ಕಬಡ್ಡಿ'.

ಕಬಡ್ಡಿ ಮೂಡಿದ್ದು ಹೀಗೆ



ಅದು 2001ರ ವರ್ಷ. ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ನೇತೃತ್ವದಲ್ಲಿ ಮಂಡ್ಯದಲ್ಲಿ ರಾಷ್ಟ್ರೀಯ ಮಟ್ಟದ ಕಬಡ್ಡಿ ಟೂರ್ನಮೆಂಟ್ ಆಯೋಜನೆಗೊಂಡಿತ್ತು. ಕಬಡ್ಡಿಯ ಬಗ್ಗೆ ಅಪಾರವಾದ ಒಲವನ್ನಿಟ್ಟುಕೊಂಡಿರುವ ದಲಿತರ ಹುಡುಗನೊಬ್ಬನಿಗೆ ಹೇಗಾದರೂ ಮಾಡಿ ಒಳಗೆ ಹೋಗಿ ಪಂದ್ಯ ವೀಕ್ಷಿಸಬೇಕೆಂಬ ಹಂಬಲ. ಒಳಗೆ ಅದಾಗಲೇ 40 ಸಾವಿರಕ್ಕೂ ಹೆಚ್ಚು ಜನ ಜಮಾಯಿಸಿದ್ದರಿಂದ ಈ ಹುಡುಗನಿಗೆ ಒಳಗೆ ಹೋಗಲು ಅಲ್ಲಿನ ದ್ವಾರಪಾಲಕರು ಬಿಡಲೇ ಇಲ್ಲ. ಆಗ ಆತ ಪಂದ್ಯದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದ ಆಟಗಾರ ಬಿ.ಸಿ. ರಮೇಶರನ್ನು ವಿನಂತಿಸಿ ಒಳಹೋಗಲು ಪ್ರಯತ್ನಿಸಿದ. ಉಹುಂ.. ಯಾರು ಏನೇ ಹೇಳಿದರೂ ಆತನಿಗೆ ಅಲ್ಲಿ ಪ್ರವೇಶ ನಿಷಿದ್ಧ. ಕದ್ದು ತೂರಿ ಒಳಹೋದರೂ ಬಿಡದ ಅಲ್ಲಿನ ಸಿಬ್ಬಂದಿ ಆ ಹುಡುಗನನ್ನು ಹೊರದಬ್ಬಿದ್ದರು. ಆಗ ಆ ಹುಡುಗ ಯೋಚಿಸಿದ: "ಇದೇ ಜಾಗದಲ್ಲಿ ಟೂರ್ನಮೆಂಟ್ ನಡೆಸಿ, ಇದೇ ಕಬಡ್ಡಿ ಆಟದ ಬಗೆಗಿನ ಸಿನಿಮಾವೊಂದನ್ನು ಮಾಡಬೇಕು" ಎಂದು.

2007ರಲ್ಲಿ ಅದೇ ಜಾಗದಲ್ಲಿ ಮೂವತ್ತೆಂಟು ಸಾವಿರ ಜನ ವೀಕ್ಷಕರಿದ್ದ ಒಂದು ಕಬಡ್ಡಿ ಪಂದ್ಯವನ್ನು ಆಯೋಜಿಸಿ, ಕಿಕ್ಕಿರಿದ ಜನರ ಮಧ್ಯೆ ನಿಂತ ಆ ಯುವಕ ಮೊದಲ ಬಾರಿಗೆ "ಆಕ್ಷನ್" ಎಂದ. ಅಲ್ಲಿಗೆ ಆತನ ತೀರ್ಮಾನ, ಆತನ ಗುರಿ ಈಡೇರಿತ್ತು. ಹಿಂದೊಮ್ಮೆ ತಾನು ಕೈಗೊಂಡಿದ್ದ ತೀರ್ಮಾನವನ್ನು ಹೀಗೆ ಅಕ್ಷಶಃ ಕಾರ್ಯರೂಪಕ್ಕಿಳಿಸಿದ ಪ್ರತಿಭಾವಂತ, 'ಕಬಡ್ಡಿ' ಚಿತ್ರದ ನಿರ್ದೇಶಕ ನರೇಂದ್ರ ಬಾಬು.

ಕಬಡ್ಡಿ ಕಣದಲ್ಲಿ

ಸಿನಿಮಾದ ಗ್ರಾಮರ್ರು, ಗ್ಲಾಮರ್ರು ಯಾವುದೂ ಗೊತ್ತಿಲ್ಲದ ತಮಿಳು ಹುಡುಗರು 'ಕಲ್ಲೂರಿ', 'ಸುಬ್ರಹ್ಮಣ್ಯ ಪುರಂ', 'ಪೊರುತ್ತಿವೀರನ್'ನಂಥ ಸಿನಿಮಾಗಳನ್ನು ಮಾಡಿ ಗೆಲ್ಲುತ್ತಾರೆಂದರೆ, ಕನ್ನಡಿಗರೇನು ಕಮ್ಮಿ? ಹೌದು. ಇದರ ನಾಯಕ, ಆತನ ಸ್ನೇಹಿತರು ಸೇರಿದಂತೆ 'ಕಬಡ್ಡಿ' ತಂಡದ ಯಾವ ಹುಡುಗರೂ ವೃತ್ತಿಪರ ನಟರಲ್ಲ. ಖ್ಯಾತ ರಂಗಕರ್ಮಿ ದಿ. ಸಿ.ಜಿ.ಕೆ. ಅವರ ಪುತ್ರ ಕಿರಣ್ ಮತ್ತು ಬಸುಕುಮಾರ್ ಎಂಬ ಇಬ್ಬರು ಹುಡುಗರನ್ನು ಹೊರತುಪಡಿಸಿದರೆ ಮಿಕ್ಕ ಎಲ್ಲರೂ ಕೃಷಿಕ ಹಿನ್ನೆಲೆಯವರು. ಎಲ್ಲಕ್ಕಿಂತ ಮುಖ್ಯವಾಗಿ ಇವರೆಲ್ಲರೂ ನಿಜಜೀವನದಲ್ಲೂ ಕಬಡ್ಡಿ ಆಟಗಾರರು. ಇಂಥ ಆಟಗಾರರೇ ತೆರೆಯ ಮೇಲೆ ಕಾಣಿಸಿಕೊಂಡಿರುವುದರಿಂದಲೇ ಚಿತ್ರ ಇಷ್ಟೊಂದು ನೈಜವಾಗಿ ಬರಲು ಕಾರಣವಾಗಿದೆ.

ರೌಡಿಸಂನ ಜೊತೆಗೆ ಪ್ರೀತಿ ಬೆರೆಸುವುದರಲ್ಲಿ ನಿಸ್ಸೀಮರಾಗಿರುವ ನಮ್ಮ ನಿರ್ದೇಶಕರ ನಡುವೆ ನರೇಂದ್ರ ಬಾಬು ಎಂಬ ಯುವಕ ಈ ನಾಡಿನ ಸಾಂಸ್ಕೃತಿಕ ಕುರುಹುಗಳ ಪ್ರತೀಕದಂತಿರುವ ಕಬಡ್ಡಿ ಆಟದೊಂದಿಗೆ ಪ್ರೀತಿಯ ಉತ್ಕಟತೆಯನ್ನು ಬೆಸುಗೆ ಹಾಕಿದ್ದಾರೆ. ಅಲ್ಲದೇ ಕಬಡ್ಡಿ ಆಟ ಮತ್ತು ಆಟಗಾರರ ಸೆಲೆಕ್ಷನ್‌ನಲ್ಲಿ ನಡೆಯುವ ಒಳರಾಜಕೀಯ, ಶ್ರೀಮಂತರ ಕುತಂತ್ರ... ಹೀಗೆ ಕಬಡ್ಡಿ ಆಟದ ಸಮಸ್ತ ಒಳಹುಗಳೂ ಈ ಚಿತ್ರದಲ್ಲಿ ಬಿಂಬಿತವಾಗಿವೆ.

ಮಂಡ್ಯ ಮಣ್ಣಿನ ಘಮಲು

'ಕಬಡ್ಡಿ' ಚಿತ್ರದಲ್ಲಿ ಮುಖ್ಯವಾಗಿ ಗಮನಿಸಬೇಕಿರುವ ವಿಚಾರವೆಂದರೆ, ಅಚ್ಚುಕಟ್ಟಾದ ಕಥೆ, ಅಷ್ಟೇ ಒಪ್ಪವಾದ ಚಿತ್ರಕಥೆಯೊಂದಿಗೆ ಮಂಡ್ಯ ಮತ್ತು ಧಾರವಾಡದ ಗ್ರಾಮ್ಯ ಸೊಗಡಿನ ಆಡುಮಾತುಗಳನ್ನೇ ಸಂಭಾಷಣೆಯನ್ನಾಗಿಸಿರುವುದು. ಮಾತ್ರವಲ್ಲ ಇಲ್ಲಿನ ಒಂದೊಂದು ಪಾತ್ರಗಳೂ ಮಂಡ್ಯದ ಟಿಪಿಕಲ್ ಜನರನ್ನೇ ನೆನಪಿಸುತ್ತವೆ. ಅಲ್ಲಿನ ಹುಡುಗರ ನೇರವಂತಿಕೆ, ಮಾತಿನ ಒರಟುತನ, ಅನ್ಯಾಯಕ್ಕೊಳಗಾದಾಗ ವಂಚಕರ ಮುಖ ಮೂತಿ ನೋಡದೆ ಬುರುಡೆ ಸೀಳುವ ಯಮ ಧೈರ್ಯ, ಇವೆಲ್ಲದರ ಮಧ್ಯೆ ಮಂಡ್ಯ ಜನರ ಮುಗ್ಧತೆಯನ್ನು 'ಕಬಡ್ಡಿ' ತೆರೆದಿಟ್ಟಿದೆ. ಇವರಿರೋದೇ ಹೀಗೆ ಎಂದು ತೋರಿಸುತ್ತದೆ. ಹೀಗಾಗಿ ತೆರೆಯ ಮೇಲಿನ ಯಾವ ಪಾತ್ರಗಳೂ ನೋಡುಗರಿಗೆ ಕೃತಕವೆನಿಸುವುದಿಲ್ಲ.

ಕಷ್ಟದಲ್ಲೇ ಅರಳಿ ನಿಂತ ಕಬಡ್ಡಿ


ಕಬಡ್ಡಿ ಆಟದ ದುರಾದೃಷ್ಟವೋ ಏನೋ ಎಂಬಂತೆ ಈ ಚಿತ್ರ ಆರಂಭದಿಂದ ಮುಕ್ತಾಯಗೊಳ್ಳುವ ತನಕ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಿತ್ತು. ಮೊದಲಿಗೆ ಒಂದೆರಡು ದಿನಗಳ ಕಾಲ ಚಿತ್ರೀಕರಣ ಮಾಡಿದ ಛಾಯಾಗ್ರಾಹಕ 'ಮುಂಗಾರು ಮಳೆ' ಖ್ಯಾತಿಯ ಕೃಷ್ಣ ದಿಢೀರನೆ ಮುನಿಸಿಕೊಂಡು 'ಕಬಡ್ಡಿ' ತಂಡದಿಂದ ಹೊರನಡೆದರು. ಆ ಹೊತ್ತಿಗಾಗಲೇ ತಮಿಳು ಚಿತ್ರರಂಗದಲ್ಲಿ ಅವಕಾಶಗಳ ಮೇಲೆ ಅವಕಾಶ ಬಂದಿದ್ದರಿಂದ ಚಿತ್ರದ ನಿರ್ಮಾಪಕರಲ್ಲಿ ಪಾಲುದಾರರಾಗಿದ್ದ ನಟ ಕಿಶೋರ್ ತಮಿಳಿನತ್ತ ಮುಖ ಮಾಡಿದ್ದರು. ಈ ನಡುವೆ ತಮಿಳಿನಲ್ಲೂ ಇದೇ ಕಬಡ್ಡಿ ಹಿನ್ನೆಲೆಯ ಚಿತ್ರದಲ್ಲೂ ಕಿಶೋರ್ ತೊಡಗಿದ್ದರಿಂದ ನಿರ್ದೇಶಕ ನರೇಂದ್ರ ಬಾಬು ಮತ್ತು ಕಿಶೋರ್ ನಡುವೆ ಒಡಕು ಮೂಡಿತ್ತು. ಸಾಲದೆಂಬಂತೆ ಸಂಗೀತ ನಿರ್ದೇಶಕ ಹಂಸಲೇಖರ ಅಸಹಕಾರ ಚಳವಳಿ ಬೇರೆ! ಇವೆಲ್ಲದರ ಮಧ್ಯೆ ನಿರ್ಮಾಪಕರ ಹಣದ ಮುಗ್ಗಟ್ಟಿನಿಂದ 'ಕಬಡ್ಡಿ' ಚಿತ್ರೀಕರಣ ನಿಂತೂ ನಿಂತೂ ಕಡೆಗೆ ಆರಂಭವಾದ ಎರಡು ವರ್ಷಕ್ಕೆ ಸರಿಯಾಗಿ ಬಿಡುಗಡೆಗೊಂಡಿದೆ.

ಒಲ್ಲೆ ಎಂದಳು ರಮ್ಯಾ!

ಹಾಗೆ ನೋಡಿದರೆ, ಈ ಚಿತ್ರದ ನಾಯಕಿ ಪಾತ್ರಕ್ಕೆ ರಮ್ಯಾಳನ್ನೇ ಕಲ್ಪಿಸಿಕೊಂಡು, ಆಕೆಗೆ ಹೊಂದುವಂತಹ ಸಂಭಾಷಣೆಯನ್ನು ನರೇಂದ್ರ ಬಾಬು ರಚಿಸಿದ್ದರು. ಆದರೆ ಕೊನೆ ಹೊತ್ತಿಗೆ ರಮ್ಯಾಳಿಗೆ ತಮಿಳಿನ 'ಪೊಲ್ಲಾದವನ್' ಚಿತ್ರದ ಆಫರ್ ಬಂದಿದ್ದರಿಂದ "ಈ ಪಾತ್ರದ ಬಗ್ಗೆ ನನಗೆ ಅಷ್ಟು ನಂಬಿಕೆ ಬರುತ್ತಿಲ್ಲ. ನಿಮ್ಮೊಂದಿಗೆ ಇನ್ನೊಂದು ಚಿತ್ರದಲ್ಲಿ ವರ್ಕ್ ಮಾಡ್ತೀನಿ. ಈಗ ಬಿಟ್ಟು ಬಿಡಿ'' ಎಂದು ಹೇಳಿದ್ದಳು. ಹಾಗೆ ಮಾಡುವ ಮೂಲಕ ಇಂತಹ ಅಪರೂಪದ ಚಿತ್ರದಲ್ಲಿ ನಟಿಸುವ ಅವಕಾಶವನ್ನು ರಮ್ಯಾ ಕಳೆದುಕೊಂಡಳು.

'ಕಬಡ್ಡಿ' ಚಿತ್ರ ಶುರುವಾದಾಗಿನಿಂದಲೂ ಅನೇಕ ರೀತಿಯ ನಿರೀಕ್ಷೆಯನ್ನು ಹುಟ್ಟುಹಾಕಿತ್ತು. ಈ ಸಿನಿಮಾ ಇನ್ನೂ ಚಿತ್ರೀಕರಣದ ಹಂತದಲ್ಲಿರುವಾಗಲೇ ಹಿರಿಯ ನಿರ್ಮಾಪಕ ಸಂದೇಶ್ ನಾಗರಾಜ್ "ಈವರೆಗೆ ಸಿನಿಮಾಗೆ ಖರ್ಚಾಗಿರುವುದಕ್ಕಿಂತ ಹತ್ತು ಲಕ್ಷ ಸೇರಿಸಿಕೊಡುತ್ತೇನೆ. ನನ್ನ ಹೆಸರಿಗೆ ಕೊಟ್ಟುಬಿಡಿ" ಎಂದು ಕೇಳಿದ್ದರು. ಚಿತ್ರರಂಗದ ಆಳಅಗಲ ಬಲ್ಲ ಸಂದೇಶ್‌ರಂಥವರು ಈ ಚಿತ್ರವನ್ನು ಕೊಳ್ಳಲು ಮುಂದಾದಾಗಲೇ ಚಿತ್ರದ ಬಗ್ಗೆ ಒಂದು ರೀತಿಯ ನೀರಿಕ್ಷೆ ಆರಂಭವಾಗಿತ್ತು. ನಂತರ ನಟ ಅವಿನಾಶ್ ಡಬ್ಬಿಂಗ್ ಮುಗಿಸಿಕೊಟ್ಟ ಸಂದರ್ಭದಲ್ಲಿ ತನಗೆ ಬರಬೇಕಿದ್ದ ಎಂಭತ್ತು ಸಾವಿರ ರೂಪಾಯಿ ಸಂಭಾವನೆಯ ಮೊತ್ತವನ್ನು ವಾಪಾಸು ನೀಡಿ "ನನಗೆ ಈ ಚಿತ್ರದಲ್ಲಿ ನಟಿಸಿದ್ದೇ ಒಂದು ತೃಪ್ತಿ" ಎಂದಿದ್ದರು. ಅವಿನಾಶ್‌ರಂಥ ಪ್ರಬುದ್ಧನಟನ ಈ ಮಾತುಗಳು 'ಕಬಡ್ಡಿ' ಬಗೆಗಿನ ನಿರೀಕ್ಷೆ ಮತ್ತಷ್ಟು ಹೆಚ್ಚುವಂತೆ ಮಾಡಿತ್ತು. ಈಗದು ನಿಜವಾಗಿದೆ.

● ಅರುಣ್.ಬಿ



ಯಶಸ್ವಿ ಕೋಚ್

ಕಾಲೇಜಿನಲ್ಲಿದ್ದಾಗಲೇ ಎಸ್.ಎಸ್. ಶಂಕರ್ ಅವರ 'ಶೋಧ' ಧಾರಾವಾಹಿಯಲ್ಲಿ ನಟಿಸುತ್ತಾ ಹಲವಾರು ರಂಗತಜ್ಞರ ಒಡನಾಟವಿರಿಸಿಕೊಂಡಿದ್ದ ನರೇಂದ್ರ ಬಾಬು ಮೊದಲಿನಿಂದಲೂ ಚುರುಕು ಸ್ವಭಾವದ ಹುಡುಗ. ಚನ್ನಪಟ್ಟಣದ ಮಂಗಳವಾರಪೇಟೆಯ ದಲಿತ ಕುಟುಂಬದಲ್ಲಿ ಹುಟ್ಟಿ ಬೆಳೆದ ನರೇಂದ್ರಬಾಬು ಏಳನೇ ಕ್ಲಾಸಿನಲ್ಲಿದ್ದಾಗಲೇ ತಂದೆಯನ್ನು ಕಳೆದುಕೊಂಡ ನತದೃಷ್ಟ. ನಂತರ ನರೇಂದ್ರನಿಗೆ ಆಸರೆಯಾಗಿದ್ದು ಆತನ ತಾಯಿ. ಕೆ.ಎಸ್.ಐ.ಸಿಯಲ್ಲಿ ಉದ್ಯೋಗದಲ್ಲಿದ್ದ ಜಯಮ್ಮನವರು ಮಗ ಸಿನಿಮಾ, ನಾಟಕ ಅಂತೆಲ್ಲಾ ತಿರುಗಾಡುತ್ತಿದ್ದರೂ ಹೊಟ್ಟೆತುಂಬ ಊಟ ಹಾಕಿ ಪ್ರೀತಿಯಿಂದ ಸಲುಹಿದರು.

ರಂಗ ಪ್ರಯೋಗಗಳ ಬಗ್ಗೆ ಅಪಾರವಾದ ಪ್ಯಾಶನ್ ಇಟ್ಟುಕೊಂಡಿರುವ ನರೇಂದ್ರ ಬಾಬು ಪಿ. ಲಂಕೇಶರ 'ಟಿ.ಪ್ರಸನ್ನನ ಗೃಹಸ್ಥಾಶ್ರಮ' ಸೇರಿದಂತೆ 'ದನಿ', 'ಬಂದವಿದಕೋ ಮೂಂಸವಿದಕೋ', 'ಸೇತುಮಾಧವನ ಸಲ್ಲಾಪ', ಸುರೇಂದ್ರ ವರ್ಮರ 'ಸೂರ್ಯಾಸ್ತದಿಂದ ಸೂರ್ಯಾಸ್ತದವರೆಗೆ' ಮುಂತಾದ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಶಂಕರ್ ನಿರ್ದೇಶನದ 'ರಾಂಗ್‌ನಂಬರ್' ಚಿತ್ರದಲ್ಲಿ ಅಸೋಸಿಯೇಟ್ ಆಗಿ ಕೆಲಸ ಮಾಡಿರುವ ಬಾಬು ಹಲವಾರು ಕಿರುಚಿತ್ರಗಳನ್ನು ನಿರ್ದೇಶಿಸಿದ್ದಾರೆ. 'ಕಬಡ್ಡಿ' ಅವರ ಚೊಚ್ಚಲ ಸಿನಿಮಾ.

ಈಗ ಜೆಸ್ಸಿ ಓವೆನ್ಸ್ ಎಂಬ ಕಪ್ಪು ಜನಾಂಗದ, ಅಮೆರಿಕದ ಖ್ಯಾತ ಓಟಗಾರ ಇಂಡಿಯಾದಲ್ಲಿ ಹುಟ್ಟಿದ್ದರೆ ಹೇಗಿರುತ್ತಿತ್ತು ಎಂದು ಕಲ್ಪಿಸಿಕೊಂಡು ಅಥ್ಲೆಟ್ ಒಬ್ಬನನ್ನು ಕುರಿತ ಕಥೆಯನ್ನು ಸಿದ್ಧಪಡಿಸಿದ್ದಾರೆ. ಶಿವರಾಜ್‌ಕುಮಾರ್ ಆ ಕಥೆಯನ್ನು ಒಪ್ಪಿದ್ದೂ ಆಗಿದೆ. ಇನ್ನು ಲಿಯೋ ಟಾಲ್‌ಸ್ಟಾಯ್ ಕಥೆಯಾಧಾರಿತ ಮಹಿಳಾ ಪ್ರಧಾನ ಚಿತ್ರವೊಂದರಲ್ಲಿ ಬಹುಶಃ ರಮ್ಯಾ ನಟಿಸುವ ಸಾಧ್ಯತೆಯಿದೆ. ●

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 22-07-2009 RNI No. KARKAN2005/146



ಲಕ್ಸ್ ಬೇಬಿ ಪೂಜಾ

ಪೂಜಾ ಗಾಂಧಿ ಸದ್ಯದಲ್ಲೇ ಸಿನಿಮಾ ತಾರೆಯರ ಸೌಂದರ್ಯ ಸಾಬೂನು ಲಕ್ಸ್‌ನ ರೂಪದರ್ಶಿಯಾಗಿ ಕಾಣಿಸಿಕೊಳ್ಳಲಿದ್ದಾಳೆ.

ಕನ್ನಡದ ಚಿತ್ರರಂಗದಿಂದ ಈತನಕ ಯಾವುದೇ ನಾಯಕಿ ಲಕ್ಸ್ ಸೋಪ್‌ನ ಮಾಡೆಲ್ ಆಗಿ ಕಾಣಿಸಿದ್ದೇ ಇಲ್ಲ. ಅದೊಂದು ಕಾಲವಿತ್ತು, ಆಗ ಜನಪ್ರಿಯತೆಯ ತುತ್ತತುದಿಯಲ್ಲಿರುವ ಹಿಂದಿ ಸಿನಿಮಾ ತಾರೆಯರನ್ನು ಹಿಂದೂಸ್ಥಾನ್ ಲಿವರ್ ಕಂಪೆನಿ ತಮ್ಮ ಲಕ್ಸ್ ಸೋಪಿನ ರೂಪದರ್ಶಿಯರಾಗಿ ಬಳಸುತ್ತಿತ್ತು, ಹಾಗೆಯೇ ಈ ಕಂಪೆನಿಯ ಸಾಬೂನಿಗೆ ರೂಪದರ್ಶಿಯಾಗುವುದೇ ಒಂದು ಹೆಚ್ಚುಗಾರಿಕೆ ಎಂದೇ ಸಿನಿಮಾ ತಾರೆಯರೂ ಭಾವಿಸಿದ್ದರು. ಆ ಕಾಲದಲ್ಲಿ ಶ್ರೀದೇವಿ, ಹೇಮಾ ಮಾಲಿನಿ, ಜೂಹಿ ಚಾವ್ಲಾ ಮೊದಲಾದ ಬಾಲಿವುಡ್ ತಾರೆಯರು ಲಕ್ಸ್‌ನ ಬ್ರಾಂಡ್ ಅಂಬಾಸಿಡರ್‌ಗಳಾಗಿದ್ದರು.

ಆನಂತರ ಹಿಂದೂಸ್ಥಾನ್ ಲಿವರ್ ಕಂಪನಿಯವರು ಪ್ರಾದೇಶಿಕ ಚಿತ್ರಗಳ ನಾಯಕಿಯರನ್ನೂ ರೂಪದರ್ಶಿಯಾಗಿ ಆಯ್ಕೆ ಮಾಡಲು ಆರಂಭಿಸಿದ್ದರು. ಆದರೆ ಯಾಕೋ ಏನೋ ಕನ್ನಡದ ನಾಯಕಿಯರು ಮಾತ್ರ ಈತನಕ ಸ್ನಾನ ಮಾಡುವಾಗ ಲಕ್ಸ್ ಲೇಪಿಸಿಕೊಳ್ಳುವ ಸೌಭಾಗ್ಯ ಗಳಿಸಿರಲಿಲ್ಲ. ಇದೀಗ ಆ ಭಾಗ್ಯ ಪೂಜಾ ಗಾಂಧಿಗೆ ದೊರೆತಿದೆ. ಆ ಮೂಲಕ ಪೂಜಾ ತಾನು ತಾರಾ ವರ್ಚಸ್ಸಿರುವ ನಾಯಕಿ ಎಂದು ಉದ್ಯಮದಲ್ಲಿರುವ ತನ್ನ ಎದುರಾಳಿಗಳಿಗೆ ಪರೋಕ್ಷವಾಗಿ ತೋರಿಸಿದ್ದಾಳೆ.

ಕನ್ನಡದಲ್ಲಿ ಈತನಕ ಅನೇಕ ಸುಂದರಿಯರು ಬಂದುಹೋಗಿದ್ದಾರೆ. ಆದರೆ ನಾಲ್ಕೂವರೆ ಅಡಿ ಎತ್ತರದ, ನೋಡಲು ಅಷ್ಟೇನೂ ಸುಂದರಿಯಲ್ಲದ ಪೂಜಾ ಗಾಂಧಿ ದಿನದಿಂದ ದಿನಕ್ಕೆ ಚಿತ್ರರಂಗದಲ್ಲಿ ಮಾತ್ರವಲ್ಲದೆ ಜಾಹಿರಾತು ಕ್ಷೇತ್ರದಲ್ಲೂ ಜನಪ್ರಿಯಳಾಗುತ್ತಿದ್ದಾಳೆ. ಲಕ್ಸ್ ಸೋಪು ಬಳಸಿದ ನಂತರವಾದರೂ ಪೂಜಾ ಇನ್ನಷ್ಟು ಸುಂದರಿಯಾಗಿ ಕಂಗೊಳಿಸಲಿ.

ಸಿದ್ದಲಿಂಗಯ್ಯನವರು ಯಾಕೆ ಹೀಗಾಗಿದ್ದಾರೆ?



'ಬಂಗಾರದ ಮನುಷ್ಯ' ಖ್ಯಾತಿಯ, 'ಭೂತಯ್ಯನ ಮಗ ಅಯ್ಯು'ನಂಥ ಪರಿಣಾಮಕಾರಿ ಚಿತ್ರಗಳನ್ನು ಕರ್ನಾಟಕದ ಜನತೆಗೆ ನೀಡಿದ್ದ ಸಿದ್ದಲಿಂಗಯ್ಯನವರನ್ನು ರಾಜ್ಯ ಸರ್ಕಾರ ಸಬ್ಸಿಡಿ ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದಾಗ ಇಡೀ ಉದ್ಯಮ ಹರ್ಷ ವ್ಯಕ್ತಪಡಿಸಿತ್ತು. ಆದರೆ ಇದೀಗ ಈ ಸಮಿತಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದರೂ ಸರ್ಕಾರ ಇನ್ನೂ ಅದನ್ನು ಘೋಷಣೆ ಮಾಡಿಲ್ಲ. ಅದಕ್ಕೆ ಮುಖ್ಯ ಕಾರಣ ಸಿದ್ದಲಿಂಗಯ್ಯನವರ ದರ್ಬಾರಿನಲ್ಲಿ ಸಿಕ್ಕಾಪಟ್ಟೆ ಅವ್ಯವಹಾರ ನಡೆದಿದೆ ಮತ್ತು ಕೆಲವು ಯೋಗ್ಯ ಚಿತ್ರಗಳಿಗೆ ಸಬ್ಸಿಡಿ ನೀಡಿಲ್ಲ ಎಂದು ಉದ್ಯಮದವರೇ ಅಪಸ್ವರವೆತ್ತಿರುವುದು.

ನಮಗೆ ಬಂದಿರುವ ಸುದ್ದಿ ಪ್ರಕಾರ ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ' ಮತ್ತು ಹರ್ಷ ನಿರ್ದೇಶನದ 'ಗೆಳೆಯ' ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿಯ', ಪುನೀತ್ ಅಭಿನಯದ 'ಬಿಂದಾಸ್' ಮೊದಲಾದ ಕಮರ್ಷಿಯಲ್ ಚಿತ್ರಗಳಿಗೆ ಸಿದ್ದಲಿಂಗಯ್ಯನವರ ಸಮಿತಿ ಅನ್ಯಾಯವೆಸಗಿದೆ. ಅಷ್ಟೇ ಆಗಿದ್ದರೆ ಪರವಾಗಿರಲಿಲ್ಲ, ಚಿತ್ರದಲ್ಲಿ ಅದ್ಭುತವಾದ ಸಂದೇಶವಿದೆ ಎಂಬ ಕಾರಣಕ್ಕಾಗಿ 'ಲಂಚಾವತಾರ' ಮತ್ತು 'ಧೀಮಂತ ಮನುಷ್ಯ' ಎಂಬಿತ್ಯಾದಿ ಕಳಪೆ ಚಿತ್ರಗಳಿಗೆ ಸಬ್ಸಿಡಿ ನೀಡಬಹುದೆಂದು ಈ ಸಮಿತಿ ಶಿಫಾರಸ್ಸು ಮಾಡಿರುವುದು ಛೇಂಬರ್ ಪದಾಧಿಕಾರಿಗಳ ಕೆಂಗಣ್ಣಿಗೆ ಕಾರಣವಾಗಿದೆ.

ಈ ಮಧ್ಯೆ ಮಕ್ಕಳ ಚಿತ್ರ ಮಾಡಿ 25 ಲಕ್ಷ ರೂಪಾಯಿ ಸಬ್ಸಿಡಿ ಪಡೆಯುವ ಕನಸು ಕಾಣುತ್ತಿದ್ದ ನಂಜುಂಡೇಗೌಡ ತನ್ನ 'ನಾನು ಗಾಂಧಿ ಅಲ್ಲ' ಚಿತ್ರಕ್ಕೆ ಅನ್ಯಾಯವಾಗಿದೆ ಎಂದು ವಾರ್ತಾ ಇಲಾಖೆಯ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರಿಗೆ ಸುದೀರ್ಘವಾದ ಪತ್ರವನ್ನು ಬರೆದಿದ್ದಾರಂತೆ. ಇವೆಲ್ಲಕ್ಕಿಂತ ಮುಖ್ಯವಾಗಿ ವಿಜಯಲಕ್ಷ್ಮಿ ಸಿಂಗ್ ನಿರ್ದೇಶನದ 'ಈ ಬಂಧನ' ಎಂಬ ರಿಮೇಕ್ ಚಿತ್ರ ಸಬ್ಸಿಡಿಗೆ ಅರ್ಹವಾಗಿದೆ ಎಂಬ ಸಮಿತಿಯ ಶಿಫಾರಸ್ಸಿನ ಬಗ್ಗೆ ಕೇಳಿ ರಿಮೇಕ ವಿರೋಧಿ ಜನರೆಲ್ಲಾ ಸಿದ್ದಲಿಂಗಯ್ಯನವರ ವಿರುದ್ಧ ಕೆಂಡ ಕಾರುತ್ತಿದ್ದಾರೆ.

ಅಂತೂ 'ಬಂಗಾರದ ಮನುಷ್ಯ' ಮತ್ತು 'ಭೂತಯ್ಯನ ಮಗ ಅಯ್ಯು'ದಂತಹ ಸದಭಿರುಚಿ ಚಿತ್ರಗಳನ್ನು ನಿರ್ಮಿಸಿ ಅನೇಕ ನಿರ್ದೇಶಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಸಿದ್ದಣ್ಣ ಯಾಕೆ ಹೀಗೆ ಮಾಡಿದರು ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಈ ಸಮಿತಿಯಲ್ಲಿ ಇರುವ ಸಾಹಸ ನಿರ್ದೇಶಕ ಹಾಸನ ರಘು ಅನೇಕ ಸದಸ್ಯರ ಜೊತೆ ಸೇರಿ ಸಿದ್ದಲಿಂಗಯ್ಯನವರನ್ನು ಬುಟ್ಟಿಗೆ ಹಾಕಿಕೊಂಡಿದ್ದರಿಂದ ಈ ಎಲ್ಲ ಅವಾಂತರಗಳು ಸೃಷ್ಟಿಯಾಗಿದೆ ಎಂಬ ಮಾತೂ ಕೇಳಿಬರುತ್ತಿದೆ.

ಸಿದ್ದಲಿಂಗಯ್ಯನವರಂಥ ಸಚ್ಚಾರಿತ್ರ್ಯದ ಮತ್ತು ದಿಟ್ಟ ಮಾತಿನ ನಿರ್ದೇಶಕ ಈ ಎಲ್ಲ ಗುಮಾನಿಗಳಿಗೆ ಸ್ಪಷ್ಟೀಕರಣ ನೀಡುತ್ತಾರೆಯೇ?

ಚಿತ್ರರಂಗಕ್ಕೆ ಬರಲಿರುವ ದುರ್ಗತಿ!



ಕನ್ನಡ ಚಿತ್ರರಂಗಕ್ಕೆ ಇನ್ನೊಂದು ದೊಡ್ಡ ಆಘಾತ ಕಾದಿದೆ.
ಜಾಗತಿಕ ಆರ್ಥಿಕ ಕುಸಿತ ಮತ್ತು ರಿಯಲ್ ಎಸ್ಟೇಟ್ ಪಾತಾಳ ಸೇರಿರುವುದರಿಂದ ಕನ್ನಡ ಚಿತ್ರರಂಗ ಕೂಡ ಕಷ್ಟದ ದಿನಗಳನ್ನು ಎದುರಿಸುತ್ತಿದೆ. ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಕನ್ನಡ ಚಿತ್ರರಂಗ ನಿರ್ಮಾಪಕರಿಗೆ ಸ್ನೇಹ ಹಸ್ತ ಚಾಚಿದ್ದು ಐಡಿಬಿಐ ಬ್ಯಾಂಕು. ಕಳೆದ ಒಂದೆರಡು ವರ್ಷಗಳಿಂದ ಐಡಿಬಿಐ ಬ್ಯಾಂಕ್ ಸಿನಿಮಾ ನಿರ್ಮಾಣವನ್ನು ಒಂದು ಉದ್ಯಮ ಎಂದು ಪರಿಗಣಿಸಿ ಸಾಲ ನೀಡುತ್ತಿತ್ತು.

ಇದರಿಂದಾಗಿ ಮಾರ್ವಾಡಿಗಳಿಂದ ಅರವತ್ತು ಪರ್ಸೆಂಟ್ ಬಡ್ಡಿಗೆ ಸಾಲ ತರುವ ಬದಲು ನಿರ್ಮಾಪಕರು ಕೇವಲ ಒಂಭತ್ತು ಹತ್ತು ಪರ್ಸೆಂಟ್ ಬಡ್ಡಿಗೆ ಸಾಲ ಪಡೆಯುವಂತಾಯಿತು. ಆದರೆ ಸಿನಿಮಾವನ್ನು ಬಿಡುಗಡೆ ಮಾಡುವ ಮೊದಲು ಬಡ್ಡಿ ಸಮೇತ ಸಾಲವನ್ನು ಹಿಂತಿರುಗಿಸಬೇಕಿತ್ತು.

ಹೀಗೆ ಐಡಿಬಿಐನಿಂದ ಸಾಲ ಪಡೆದವರಲ್ಲಿ ಪ್ರಮುಖರು ರಾಜೇಂದ್ರ ಸಿಂಗ್ ಬಾಬು ಮತ್ತು ರಮೇಶ್ ಯಾದವ್. 'ತಿಪ್ಪಾರಳ್ಳಿ ತರಳೆಗಳು', 'ಭೀಮೂಸ್ ಬ್ಯಾಂಗ್ ಬ್ಯಾಂಗ್' ಮತ್ತು 'ರಕ್ಷಾ' ಎಂಬ ಮೂರು ಸಿನಿಮಾಗಳಿಗೆ ಬಾಬು ಸಾಲ ಪಡೆದು ಬಹಳ ಕಾಲವಾಗಿದ್ದರೂ ಆ ಸಿನಿಮಾಗಳು ಬಿಡುಗಡೆಯಾಗುವ ಸೂಚನೆಗಳೂ ಇಲ್ಲ, ಸಾಲವನ್ನು ಹಿಂದಿರುಗಿಸುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಈ ಮಧ್ಯೆ ರಮೇಶ್ ಯಾದವ್ ಕೂಡ ಎರಡು ಸಿನಿಮಾಗಳಿಗೆ ಸಾಲ ಪಡೆದು, ಒಂದರ ಸಾಲವನ್ನು ತೀರಿಸಿ 'ಕಿಂಚ' ಎಂಬ ಚಿತ್ರವನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸಿದ್ದಾರೆ.



ಆದರೆ ರಾಂ ಪ್ರಸಾದ್ ಎಂಬ ನಿರ್ಮಾಪಕ ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿಸುವ ಮೊದಲೇ ಪ್ರೇಮ್ ಮತ್ತು ರಮ್ಯಾ ಜೋಡಿಯ 'ಜೊತೆಗಾರ' ಚಿತ್ರವನ್ನು ಬಿಡುಗಡೆ ಮಾಡಲು ಹೊರಟಿದ್ದರು. ಅದಕ್ಕೆ ಸಂಬಂಧಪಟ್ಟಂತೆ ಪತ್ರಿಕಾಗೋಷ್ಠಿಯನ್ನೂ ಕರೆದು ಥಿಯೇಟರುಗಳನ್ನು ಕೂಡಾ ಅನೌನ್ಸ್ ಮಾಡಿದ್ದರು. ಗಾಂಧಿನಗರದ ಜನ ಚಾಪೆ ಕೆಳಗೆ ತೂರುವುದರಲ್ಲಿ ನಿಸ್ಸೀಮರು ಎಂದು ಅರಿತ ಐಡಿಬಿಐನವರು 'ಜೊತೆಗಾರ'ನ ಬಿಡುಗಡೆಯ ದಿನವೇ ಕೋರ್ಟಿನಿಂದ ತಡೆಯಾಜ್ಞೆ ತಂದು 'ಜೊತೆಗಾರ'ನನ್ನು ಡಬ್ಬಾದಲ್ಲೇ ಬಂಧಿಸಿದರು. ರಾಂ ಪ್ರಸಾದ್ ಈಗ ತೆಪ್ಪಗೆ ಕುಳಿತುಕೊಂಡಿದ್ದಾರೆ.



ಗಾಂಧಿನಗರಿಗಳ ಈ ಅತಿಬುದ್ಧಿವಂತಿಕೆಯನ್ನು ನೋಡಿ ಐಡಿಬಿಐನವರು ರೋಸಿಹೋಗಿದ್ದಾರೆ. ಬೇರೆ ಪ್ರಾದೇಶಿಕ ಭಾಷೆಗಳ ನಿರ್ಮಾಪಕರು ಕ್ಲುಪ್ತ ಸಮಯದಲ್ಲಿ ಸಾಲವನ್ನು ಮರುಪಾವತಿಸಲು ಸಾಧ್ಯವಾದರೆ ಕನ್ನಡದ ನಿರ್ಮಾಪಕರಿಗ್ಯಾಕೆ ಈ ದುರ್ಬುದ್ಧಿ ಎಂದು ಹಂಗಿಸುತ್ತಿದ್ದಾರೆ. ಹೀಗಾಗಿ ಇನ್ನು ಮುಂದೆ ಕನ್ನಡದ ನಿರ್ಮಾಪಕರಿಗೆ ಬ್ಯಾಂಕಿನವರು ಸಾಲ ಕೊಡಲು ನಿರಾಕರಿಸಲಿದ್ದಾರೆ. ಇದರಿಂದಾಗಿ ಕನ್ನಡ ಚಿತ್ರರಂಗದ ಅನೇಕ ಚಿತ್ರಗಳ ನಿರ್ಮಾಣಕ್ಕೆ ದೊಡ್ಡ ಪೆಟ್ಟು ಬೀಳುವುದಂತೂ ಗ್ಯಾರೆಂಟಿ.

ಇದರ ಮೊದಲ ಬಲಿ ನಿರ್ಮಾಪಕ ಸೂರಪ್ಪ ಬಾಬು ಆಗುವ ಸಾಧ್ಯತೆ ಕಾಣಿಸುತ್ತಿದೆ. ಇವರಿಗೆ ಪುನೀತ್ ರಾಜ್‌ಕುಮಾರ್ ಈಗಾಗಲೇ ಕಾಲ್‌ಶೀಟ್ ನೀಡಿದ್ದಾರೆ. 'ಸವಾರಿ' ಚಿತ್ರವನ್ನು ನಿರ್ದೇಶಿಸಿದ ಜೇಕಬ್ ವರ್ಗೀಸ್ ನೇತೃತ್ವದಲ್ಲಿ 'ಪೃಥ್ವಿ' ಎಂಬ ಚಿತ್ರವನ್ನು ಸೂರಪ್ಪ ಬಾಬು ನಿರ್ಮಿಸುವುದು ಬಹುತೇಕ ಖಚಿತವಾಗಿದೆ. ಆದರೆ ಐಡಿಬಿಐ ಅಧಿಕಾರಿಗಳು ಕನ್ನಡದ ನಿರ್ಮಾಪಕರಿಗೆ ದುಡ್ಡು ಕೊಡಲು ಹಿಂಜರಿಯುತ್ತಿದ್ದಾರೆ. ಸೂರಪ್ಪ ಬಾಬು ಟ್ರ್ಯಾಕ್ ರೆಕಾರ್ಡ್ ಚೆನ್ನಾಗಿದ್ದರೂ ಉದ್ಯಮದ ಉಳಿದ ನಿರ್ಮಾಪಕರುಗಳ ವರ್ತನೆಯಿಂದಾಗಿ ಬಾಬು ಹೊಡೆತ ತಿನ್ನುವಂತಾಗಿದೆ.

ಚಿತ್ರ ನಿರ್ಮಾಪಕರ ಪಾಲಿಗೆ ವರವಾಗಿದ್ದ ಈ ಬ್ಯಾಂಕ್‌ನ ಯೋಜನೆಯನ್ನು ನಮ್ಮ ನಿರ್ಮಾಪಕರೇ ಹಾಳುಮಾಡಿಕೊಂಡಿದ್ದಾರೆ. ಒಂದೆಡೆ ರಿಯಲ್ ಎಸ್ಟೇಟ್‌ನವರು ಈಗ ಗಾಂಧಿನಗರಕ್ಕೆ ಕಾಲಿಡುತ್ತಿಲ್ಲ, ಇನ್ನೊಂದೆಡೆ ಗಣಿಯವರೂ ಈಕಡೆ ತಿರುಗಿನೋಡುತ್ತಿಲ್ಲ. ಕಾರ್ಪೊರೇಟ್ ವಲಯದವರೂ ಸಿನಿಮಾದವರ ಸಹವಾಸವೇ ಬೇಡ ಎಂಬ ತೀರ್ಮಾನಿಸಿರುವಂತಿದೆ. ಇಂತಹ ಸಂದರ್ಭದಲ್ಲಿ ಎಲ್ಲರ ಪಾಲಿಗೆ ಕಲ್ಪವೃಕ್ಷವಾಗಿದ್ದ ಐಡಿಬಿಐ ಬ್ಯಾಂಕು ಕೂಡಾ ಈಗ ಇವರನ್ನು ಕೈಬಿಟ್ಟಿದೆ. ಬಾಬು, ರಮೇಶ್ ಯಾದವ್, ರಾಂಪ್ರಸಾದ್ ಮೊದಲಾದವರು ಆದಷ್ಟು ಬೇಗ ತಮ್ಮ ಚಿತ್ರವನ್ನು ಬಿಡುಗಡೆ ಮಾಡಿ ಉಳಿದವರಿಗೆ ದಾರಿ ಮಾಡಿಕೊಡುವಂತಾಗಲಿ. ಇಲ್ಲದಿದ್ದರೆ ಕನ್ನಡ ಚಿತ್ರರಂಗ ಆರ್ಥಿಕ ದುಸ್ಥಿತಿಯಿಂದ ಇನ್ನಷ್ಟು ಅಧಃಪತನ ಕಾಣಬಹುದು.

● ಶೆಣೈ



ಏಳೆಂಟು ವರ್ಷದ ಹಿಂದೆ ರಾಜೇಂದ್ರ ಸಿಂಗ್ ಬಾಬು ನಿರ್ದೇಶಕರ ಸಂಘದ ಅಧ್ಯಕ್ಷರಾಗಿದ್ದಾಗ 'ಭಾರತ್-2000' ಎಂಬ ತೆಲುಗು ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿ ತನ್ನ ಕುಖ್ಯಾತಿಯನ್ನು ಪ್ರದರ್ಶಿಸಿದ್ದರು. ಇದೀಗ ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್. ಚಂದ್ರು 'ಶ್ವೇತನಾಗರ' ಎಂಬ ಚಿತ್ರವನ್ನು ಡಬ್ ಮಾಡಿ ಟಿವಿಗೆ ನೀಡಿ ತನ್ನ ಘಟಿಂಗತನವನ್ನು ತೋರಿಸಿದ್ದಾರೆ.

ಹೀಗೆ ಕನ್ನಡ ಚಿತ್ರರಂಗದಲ್ಲಿ ಬೇಲಿಯೇ ಎದ್ದು ಹೊಲ ಮೇಯುತ್ತಿದ್ದರೆ ಅದನ್ನು ಯಾರೂ ಪ್ರಶ್ನಿಸುತ್ತಿಲ್ಲ. ಆದರೆ ಈ ಬಗ್ಗೆ ಮೊನ್ನೆ ಕ್ರೇಜಿ ಸ್ಟಾರ್ ರವಿಚಂದ್ರನ್ ಮಾತ್ರ ದಿಟ್ಟವಾಗಿ ಪ್ರತಿಕ್ರಿಯಿಸುತ್ತಾ "ಆ ಚಿತ್ರವನ್ನು ಟೀವಿಯಲ್ಲಿ ಹಾಕಿದ್ದರಿಂದ ಬಂದ ಹಣವನ್ನು ಕೆಸಿಎನ್ ಚಂದ್ರು ಛೇಂಬರ್‌ಗೆ ನೀಡಬೇಕು. ಅದೇ ಅವರಿಗೆ ನೀಡಬಹುದಾದ ಶಿಕ್ಷೆ'' ಎಂದಿದ್ದಾರೆ. ಹಾಗೆಯೇ ಯಾವಾಗಲೂ ನೇರ ಮತ್ತು ದಿಟ್ಟ ಮಾತಿಗೆ ಹೆಸರಾಗಿರುವ ಶ್ರೀನಿವಾಸಮೂರ್ತಿ ಕೂಡಾ ಕೆಸಿಎನ್ ಚಂದ್ರು ಮತ್ತು ಮಾರುತಿಯನ್ನು ಎಗ್ಗಾಮುಗ್ಗಾ ಟೀಕಿಸಿದ್ದಾರೆ.

ಅಂತೂ ಕನ್ನಡ ಚಿತ್ರರಂಗದಲ್ಲಿ ಕೆಸಿಎನ್ ಚಂದ್ರು ಅವರ ಸಾರ್ವಭೌಮತ್ವವನ್ನು ಪ್ರಶ್ನಿಸುವ ಇಬ್ಬರು ವ್ಯಕ್ತಿಗಳಾದರೂ ಇದ್ದಾರಲ್ಲಾ ಎಂಬುದೇ ಸಂತೋಷದ ವಿಷಯ. ಅಂದಹಾಗೆ ಈ ಚಿತ್ರ ಡಬ್ ಆಗಿದೆ ಎಂದು ರಿಪೋರ್ಟ್ ಕೊಟ್ಟವರು ಖ್ಯಾತ ನಿರ್ದೇಶಕ ನಾಗಾಭರಣ. ಈಗವರು ಸಿನಿಮಾ ಅಕಾಡೆಮಿಯ ಅಧ್ಯಕ್ಷರು. ಈ ಚಿತ್ರವನ್ನು ನಿರ್ಮಿಸಿದ ಕೆಸಿಎನ್ ಚಂದ್ರು ಮತ್ತು ಮಾರುತಿ ಕೂಡಾ ಈಗ ಇದೇ ಸಿನಿಮಾ ಅಕಾಡೆಮಿಯ ಸದಸ್ಯರಾಗಿದ್ದಾರೆ. ಇನ್ನರ್ಧ ಸದಸ್ಯರೆಲ್ಲಾ ಬಿಜೆಪಿ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದಾರೆ. ಇಂಥವರು ಸಿನಿಮಾ ಅಕಾಡೆಮಿಯಲ್ಲಿದ್ದರೆ ಮುಂದಿನ ದಿನಗಳಲ್ಲಿ ಎಂತೆಂತಹ ಅವಾಂತರಗಳು ನಡೆಯಬಹುದು ಎಂದು ನೀವೇ ಊಹಿಸಿ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44